# ಹರ್ಡೇಕರ ಮಂಜಪ್ಪ

ಎಸ್.ಎಸ್. ಕೋತಿನ



K
891.481 409 2
M 314 K

K
891.481
4092
M 314 K

ಒಳಬದಿಯ ರಕ್ಷಾಪುಟದಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ಮೂವರು ಭವಿಷ್ಯವಾದಿಗಳು ಭಗವಾನ್ ಬುದ್ಧನ ತಾಯಿ ರಾಣಿ ಮಾಯಾಳ ಕನಸನ್ನು ರಾಜ ಶುದ್ಧೋದನನಿಗೆ ವಿವರಿಸುವ ದೃಶ್ಯವಿದೆ. ಕೆಳಗೆ ಆ ವಿವರಣೆಯನ್ನು ಬರೆದುಕೊಡುತ್ತಿರುವ ಬರಹಗಾರ ಕುಳಿತಿದ್ದಾನೆ. ಬಹುಶಃ ಇದುವೇ ಭಾರತದ ಬರವಣಿಗೆಯ ಕಲೆಯನ್ನು ಕುರಿತ ಪ್ರಥಮ ಚಾರಿತ್ರಿಕ ದಾಖಲೆಯಾಗಿದೆ.

ನಾಗಾರ್ಜುನ ಕೊಂಡ - ಕ್ರಿ.ಶ. ಎರಡನೆಯ ಶತಮಾನ

ನ್ಯಾಷನಲ್ ಮ್ಯೂಸಿಯಂ, ನವದೆಹಲಿ

ಭಾರತೀಯ ಸಾಹಿತ್ಯ ನಿರ್ಮಾಪಕರು

# ಹರ್ಡೇಕರ ಮಂಜಪ್ಪ

ಲೇಖಕರು
ಎಸ್.ಎಸ್.ಕೋತಿನ

ಸಾಹಿತ್ಯ ಅಕಾದೆಮಿ

Hardekar Manjappa - Monograph in Kannada by S.S. Kotin
Sahitya Akademi, New Delhi, 1993, Rs.15/-

K
891.4814092
M314 K

ISBN-81-7201-440-6
© Sahitya akademi
First edition: 1993

**ಸಾಹಿತ್ಯ ಅಕಾದೆಮಿ**
ಪ್ರಧಾನ ಕಾರ್ಯಾಲಯ:
ರವೀಂದ್ರ ಭವನ, ೩೫, ಫಿರೋಜ್‌ಶಾಹ್ ಮಾರ್ಗ್, ನವದೆಹಲಿ-೧೧೦ ೦೦೧.
ಮಾರಾಟ ವಿಭಾಗ: 'ಸ್ವಾತಿ', ಮಂದಿರ್ ಮಾರ್ಗ್, ನವದೆಹಲಿ-೧೧೦ ೦೦೧.

**ಪ್ರಾದೇಶಿಕ ಕಾರ್ಯಾಲಯ:**
೧೦೯, ಎಡಿಎ ರಂಗಮಂದಿರ, ಜೆ.ಸಿ.ರೋಡ್, ಬೆಂಗಳೂರು-೫೬೦ ೦೦೨.
ಜೀವನ್ ತಾರಾ ಬಿಲ್ಡಿಂಗ್, ೪ನೇ ಮಹಡಿ, ಡೈಮಂಡ್ ಹಾರ್ಬರ್ ರೋಡ್,
ಕಲ್ಕತ್ತಾ-೭೧೦ ೦೫೩

೧೭೨, ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ್, ದಾದರ್,
ಮುಂಬಯಿ-೪೦೦ ೦೧೪

'ಗುಣ ಬಿಲ್ಡಿಂಗ್ಸ್' ಎರಡನೆಯ ಮಹಡಿ ೩೦೪-೩೦೫, ಅಣ್ಣಾಸಾಲೈ
ಮದ್ರಾಸ್-೬೦೦ ೦೧೮

Indian Institute of Advanced Study
117219
10/12/94
SHIMLA

**ಬೆಲೆ: ಹದಿನೈದು ರೂಪಾಯಿ**

Published by: Sahitya Academi, New Delhi
Printed at : Vinayaka Offset Printers

Library IIAS, Shimla
K 891.481 409 2 M 314 K
00117219

# ಪರಿವಿಡಿ

ಪುಟಸಂಖ್ಯೆ


1. ಆರಿಕೆ 6
2. ಹರ್ಡೇಕರ ಮಂಜಪ್ಪನವರ ಜೀವನ 9
3. ಮಂಜಪ್ಪನವರ ಸಾಹಿತ್ಯ-ಸ್ವರೂಪ 25
4. ಧಾರ್ಮಿಕ ಸಾಹಿತ್ಯ - ಶರಣಸಾಹಿತ್ಯ 33
5. ರಾಷ್ಟ್ರೀಯ ಸಾಹಿತ್ಯ 46
6. ಪತ್ರಿಕಾ ಸಾಹಿತ್ಯ 56
7. ಅನುಬಂಧಗಳು :
   1. ಮಂಜಪ್ಪನವರ ಕೃತಿಗಳು 65
   2. ಮಂಜಪ್ಪನವರನ್ನು ಕುರಿತ ಸಾಹಿತ್ಯ 69
   3. ಮಂಜಪ್ಪನವರ ಜೀವನದ ಪ್ರಮುಖ ಘಟನಾವಳಿಗಳು 72

# ಅರಿಕೆ

ಹರ್ಡೇಕರ ಮಂಜಪ್ಪನವರು, ನಮ್ಮ ರಾಷ್ಟ್ರೀಯ ಚಳುವಳಿಯ ಸಂದರ್ಭದ ಕರ್ನಾಟಕದ ಚರಿತ್ರೆಗೆ ತಮ್ಮದೇ ಆದ ಒಂದು ಉಜ್ವಲ ಅಧ್ಯಾಯವನ್ನೊದಗಿಸಿದ ಸತ್ವಶೀಲ ವ್ಯಕ್ತಿಗಳು, ನಿಜವಾದ ಅರ್ಥದಲ್ಲಿ ಕರ್ನಾಟಕದ ಪುಣ್ಯಪುರುಷರು. ಸಮಾಜ ಹಾಗೂ ರಾಷ್ಟ್ರಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಉದ್ದೇಶದಿಂದಲೇ ಸಂನ್ಯಾಸವ್ರತವನ್ನುಸ್ವೀಕರಿಸಿ ಆಜನ್ಮ ಬ್ರಹ್ಮಚಾರಿಗಳಾಗಿದ್ದವರು. ಹಾಗೆ ಸಂನ್ಯಾಸಿಗಳಾಗಿದ್ದೂ ಜನಸಾಮಾನ್ಯರ ಮಧ್ಯದಲ್ಲಿಯೇ ಇದ್ದು ಅವರ ಬದುಕಿಗೆ ಅಂತಃಕರಣದ ಆಳದಿಂದ, ತಮ್ಮೆಲ್ಲ ಸಾಧ್ಯತೆಗಳೊಂದಿಗೆ ಗಾಢವಾಗಿ ಅಷ್ಟೇ ಕ್ರಿಯಾಶೀಲರಾಗಿ ಸ್ಪಂದಿಸಿದ ಸಂವೇದನಾಶೀಲರು ಮತ್ತು ಉನ್ನತ ವಿಚಾರವಾದಿಗಳು. ರಾಷ್ಟ್ರ ನಿರ್ಮಾಣಕಾರ್ಯದ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ತಮ್ಮನ್ನು ತೊಡಗಿಸಿಕೊಂಡವರು ಮಾತ್ರವಲ್ಲ ಆ ಕುರಿತು ತಮ್ಮದೇ ಆದ ಕೆಲವು ಸ್ವತಂತ್ರ ನಿಲುವುಗಳನ್ನೂ ಹೊಂದಿದವರು. ಕೌಟುಂಬಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಎಲ್ಲ ಅಭಾವಗಳ ಮಧ್ಯದಲ್ಲಿಯೇ ಹುಟ್ಟಿ ದೆಳೆದ ಅವರ ಪ್ರತಿಭೆ, ವಿದ್ವತ್ತು, ವೈಚಾರಿಕತೆಗಳೆಲ್ಲ ಅವರ ವ್ಯಕ್ತಿತ್ವದ ಸ್ವಾರ್ಜಿತ ಸೊತ್ತು. ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ತಮ್ಮ ಸಮಕಾಲೀನರಿಗಿಂತ ಭಿನ್ನವಾಗಿ ಸ್ಪಂದಿಸಿದವರು; ಅವರದು ಭೂತ-ವರ್ತಮಾನ-ಭವಿಷ್ಯವನ್ನು ಒಟ್ಟಾಗಿ ಕಟ್ಟಿನಿಲ್ಲಿಸುವ ದೃಷ್ಟಿ. ಹಲವು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವೈಯಕ್ತಿಕ ನೆಲೆಯಲ್ಲಿ ಸೈದ್ಧಾಂತಿಕ ಹೋರಾಟ ನಡೆಸಿದ, ಪ್ರತಿಯೊಂದು ಕ್ಷೇತ್ರದಲ್ಲೂ ಸೂಕ್ಷ್ಮ ಒಳನೋಟದೊಂದಿಗೆ ಶೋಧನೆಗೆ ತೊಡಗಿದ, ಹಲವು ಬಗೆಯ ಯೋಜನೆಗಳನ್ನು ಹಮ್ಮಿಕೊಂಡ, ಹಲವು ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಂಡ ಶ್ರೇಯಸ್ಸು ಅವರದು. ಬಸವಯುಗ ಮತ್ತು ಗಾಂಧಿಯುಗದ ಸೇತುವೆಯಾಗಿ ಅವರಿಬ್ಬರ ತತ್ವಸಿದ್ಧಾಂತಗಳನ್ನು ಸಮೀಕರಣ ಹಾಗೂ ಪರಿಷ್ಕರಣದೊಂದಿಗೆ ಅನುಷ್ಠಾನಕ್ಕೆ ತಂದವರು; ಆ ಮೂಲಕ ಭಾವೈಕ್ಯತೆಯನ್ನು ಸಾಧಿಸಿದವರು.

ಅಂತೆಯೇ ಶ್ರೀ ಮಂಜಪ್ಪನವರು ಅಂದಿನ ಕನ್ನಡಿಗರಿಗೆ ಮಾತ್ರವಲ್ಲ ಒಟ್ಟು ಭಾರತೀಯರ ದೃಷ್ಟಿಯಲ್ಲಿಯೇ 'ಕರ್ನಾಟಕದ ಗಾಂಧಿ' ಯಾಗಿ ಕಾಣಿಸಿಕೊಂಡರು. ಬುದ್ಧಿಜೀವಿಗಳಾದ ರ ರಾಷ್ಟ್ರೀಯ ಹಿತಚಿಂತಕರಿಗೆ 'ರಾಷ್ಟ್ರಧರ್ಮ ದ್ರಷ್ಟಾರ' ರಾದರು, ಇನ್ನು ಗ್ರಾಮೀಣ ಜನರಿಗಂತೂ ಬಸವಣ್ಣನವರ ಪುನರಾವತಾರವೆನಿಸಿದರು. ಈ ಎಲ್ಲ ಕಾರಣಗಳಿಂದಾಗಿ ಮಹಾತ್ಮಾಗಾಂಧಿಯವರನ್ನು ಮೊದಲುಗೊಂಡು ಎಷ್ಟೋ ರಾಷ್ಟ್ರೀಯ

ಮುಖಂಡರ ಮತ್ತು ಶ್ರೀ. ಎಸ್. ನಿಜಲಿಂಗಪ್ಪ, ಡಾ. ಸಿ. ಚ. ನಂದೀಮಠ, ಫ. ಗು. ಹಳಕಟ್ಟಿ ಆಲೂರ ವೆಂಕಟರಾಯ, ಶ್ರೀ. ಶಂ.ಬಾ. ಜೋಶಿ, ಮುದವೀಡು ಕೃಷ್ಣರಾಯ, ಡಿ.ಕೆ. ಭಾರದ್ವಾಜ, ದ.ರಾ. ಬೇಂದ್ರೆ, ಆರ್.ಆರ್. ದಿವಾಕರ, ದೇಶಪಾಂಡೆ ಗಂಗಾಧರರಾಯರಂಥ ಕರ್ನಾಟಕದ ರಾಜಕೀಯ ಮುಖಂಡರಿಂದ ಹಾಗೂ ಕವಿ – ಸಾಹಿತಿಗಳಿಂದ ಗೌರವಾದರಗಳಿಗೆ ಪಾತ್ರರಾಗಿದ್ದರು.

ಒಟ್ಟಿನಲ್ಲಿ ಮಂಜಪ್ಪನವರದು ನಾಲ್ಕು ಮಾತುಗಳ ಚೌಕಟ್ಟಿಗೆ ಒಳಪಡುವ ವ್ಯಕ್ತಿತ್ವವಲ್ಲ. ಅವರ ಬದುಕು ನೂರಾರು ಪುಟಗಳಿಗೂ ದಕ್ಕುವಂತಹದಲ್ಲ. ಇಂಥ ತೇಜೋಮಯ ವ್ಯಕ್ತಿತ್ವದ ಮಂಜಪ್ಪನವರು ಇಂದಿನ ಕರ್ನಾಟಕದ ಸಂದರ್ಭದಲ್ಲಿ 'ಮರೆತುಹೋದ ಮಹನೀಯರು' ಎಂಬುದನ್ನು ಒಂದು ಹಂತದಲ್ಲಿ ಒಪ್ಪಿಕೊಳ್ಳಬಹುದಾದರೂ ಆ ಮರೆವಿನ ಅರಿವು ಕನ್ನಡಿಗರಿಗೆ ಇರುವುದನ್ನೂ ಮರೆಯುವಂತಿಲ್ಲ. ಹೇಳಬೇಕೆಂದರೆ, ಮಂಜಪ್ಪನವರನ್ನು ಕುರಿತು ವಿಪುಲವಾದ ಸಾಹಿತ್ಯ ಹುಟ್ಟಿಕೊಂಡಂತೆ ಬಹುಶಃ ಅಂದಿನ ಕರ್ನಾಟಕದ ಯಾವ ರಾಷ್ಟ್ರೀಯ ಮುಖಂಡರನ್ನು ಕುರಿತು, ಸಮಾಜದ ಮುಂದಾಳುಗಳನ್ನು ಕುರಿತು ಹುಟ್ಟಿಕೊಂಡಿಲ್ಲ. ಅಲ್ಲದೆ 1985ರಲ್ಲಿ ಅವರ ಜನ್ಮಶತಾಬ್ದಿಯನ್ನು ಕರ್ನಾಟಕದ ಹಲವೆಡೆಯಲ್ಲೆಲ್ಲ ಆಚರಿಸಲಾಯಿತು. ಅದರ ಅಂಗವಾಗಿ ಉಪನ್ಯಾಸಗಳು, ವಿಚಾರ ಸಂಕಿರಣಗಳು ನಡೆದವು. ಪುಸ್ತಕ ಹಾಗೂ ಲೇಖನಗಳೂ ಪ್ರಕಟವಾದವು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹೆಚ್ಚಿನ ಆಸ್ಥೆಯನ್ನು ವಹಿಸಿತು. ಅದರೊಂದಿಗೆ ಮಂಜಪ್ಪವರ ಜನ್ಮಭೂಮಿಯಾದ ಬನವಾಸಿಯಲ್ಲಿ ಜೀರ್ಣಾವಸ್ಥೆಯಲ್ಲಿರುವ ಅವರ ಮನೆಯನ್ನು ಸ್ಮಾರಕ ಸ್ಥಳವನ್ನಾಗಿಸಲು ಕರ್ನಾಟಕ ಸರಕಾರ ಯೋಜನೆಯನ್ನು ಹಮ್ಮಿಕೊಂಡದ್ದನ್ನೂ ಮರೆಯುವಂತಿಲ್ಲ. ಹೀಗೆ ಮಂಜಪ್ಪನವರು ಒಂದು ಅರ್ಥದಲ್ಲಿ ಮರೆತುಹೋದ ಮಹನೀಯರೂ ಹೌದು, ಮರೆಯಲಾಗದ ಮಹನೀಯರೂ ಹೌದು.

ಈ ಮೊದಲೇ ನನಗೆ 'ಹರ್ಡೇಕರ ಮಂಜಪ್ಪನವರ ಜೀವನ ಹಾಗೂ ವ್ಯಕ್ತಿತ್ವ' ಮತ್ತು 'ಹರ್ಡೇಕರ ಮಂಜಪ್ಪನವರನ್ನು ಕುರಿತ ಸಾಹಿತ್ಯ' ಎಂಬ ಲೇಖನಗಳನ್ನು ಬರೆಯುವ ಸದವಕಾಶ ದೊರೆತದ್ದರಿಂದ ಮತ್ತು ಅವರ ಬಗೆಗೆ ಸಹಜವಾದ ಆಸಕ್ತಿಯಿಂದ, ಸಾಮಾನ್ಯವಾಗಿ ಅವರ ಬಗೆಗಿನ ಬಹಳಷ್ಟು ಸಾಹಿತ್ಯವನ್ನು ಓದಿರುವೆನೆಂದು ನನ್ನ ನಂಬಿಕೆ. ಈ ಪ್ರಸ್ತುತ ಕೃತಿಯ ರಚನಾ ಸಂದರ್ಭದಲ್ಲಿ ಅವುಗಳಲ್ಲಿಯ ಕೆಲವು ಗ್ರಂಥಗಳ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವವನ್ನು ಅಲ್ಲಗಳೆಯಲಾರೆ. ಎಲ್ಲ ಉದ್ಧರಣೆಗಳ ಮೂಲವನ್ನು ಅಡಿಟಿಪ್ಪಣಿಯಲ್ಲಿ ಸೂಚಿಸಬಹುದಿತ್ತಾದರೂ ಸ್ಥಳಾಭಾವ ಹಾಗೂ ಕೃತಿಯ ಉದ್ದೇಶ–ಆಶಯಗಳ ಹಿನ್ನೆಲೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಅತ್ಯನಿವಾರ್ಯ ಸಂದರ್ಭದಲ್ಲಿ ಮಾತ್ರ ಉದ್ಧರಣೆಗಳ ಆಕರವನ್ನು ಸೂಚಿಸಿದ್ದೇನೆ. ಇನ್ನು ಅನುಬಂಧದಲ್ಲಿ ಕೊಟ್ಟ ಮಂಜಪ್ಪನವರ ಕೃತಿಗಳ ಪಟ್ಟಿಯಲ್ಲಿ ಆಯಾ ಕೃತಿಗಳ ಮುಂದೆ

ಅವು ಪ್ರಕಟವಾದ ಕಾಲವನ್ನೂ ಸೂಚಿಸಲು ಪ್ರಯತ್ನಿಸಿದ್ದೇನೆ: ಕೆಲವೆಡೆ ಪ್ರಯತ್ನವನ್ನು ಮೀರಿ ವಿಫಲನಾಗಿದ್ದೇನೆ. ಒಟ್ಟಿನಲ್ಲಿ ಅಕಾದೆಮಿಯ ನಿರ್ದೇಶನದ ಅಡಿಯಲ್ಲಿ ರಚನೆಗೊಂಡ ಈ ಕೃತಿ ಅಕಾದೆಮಿಯ ಮೂಲ ಆಶಯವನ್ನು ಈಡೇರಿಸಬಲ್ಲದೆಂಬ ನಂಬಿಕೆಯೂ ನನ್ನದಾಗಿದೆ.

ಹರ್ಡೇಕರ ಮಂಜಪ್ಪನವರಂಥ ದಿವ್ಯಪುರುಷನೊಬ್ಬನ ಬದುಕು–ಬರಹವನ್ನು ಕುರಿತು ಒಂದು ಕೃತಿಯನ್ನು ರಚಿಸುವ ಸಾರ್ಥಕ ಅವಕಾಶವನ್ನು ಕೊಟ್ಟ ಅಕಾದೆಮಿಯ ವಿಶ್ವಾಸಕ್ಕೆ ಅದಕ್ಕೂ ಹೆಚ್ಚಾಗಿ ನನ್ನ ಅನಾರೋಗ್ಯ ಕಾರಣಕ್ಕಾಗಿ ಸಾಕಷ್ಟು ಕಾಲಾವಕಾಶವನ್ನು ಕೊಟ್ಟು ಸಹಕರಿಸಿದ ಔದಾರ್ಯಕ್ಕೆ ನನ್ನ ತುಂಬು ಹೃದಯದ ಕೃತಜ್ಞತೆಗಳು. ಈ ಕೃತಿರಚನೆಗೆ ಉತ್ತೇಜನವನ್ನಿತ್ತ ಸನ್ಮಾನ್ಯ ಹಿರಿಯರಾದ ಶ್ರೀ. ಚೆನ್ನವೀರ ಕಣವಿ, ಡಾ.ಎಂ.ಎಂ. ಕಲಬುರ್ಗಿ, ಡಾ. ಜಿ. ಎಸ್. ಕಾಪಸೆ, ಡಾ. ಬಿ. ವಿ. ಮಲ್ಲಾಪುರ ಮತ್ತು ಅಕಾದೆಮಿಯ ಪ್ರಾದೇಶಿಕ ಕಾರ್ಯದರ್ಶಿಗಳಾದ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರಿಗೆ ನನ್ನ ಹಾರ್ದಿಕ ವಂದನೆಗಳು.

**ಕನ್ನಡ ಅಧ್ಯಯನಪೀಠ**
**ಕರ್ನಾಟಕ ವಿಶ್ವವಿದ್ಯಾಲಯ** ಡಾ. ಎಸ್.ಎಸ್. ಕೋತಿನ
**ಧಾರವಾಡ - 3**

# ಹರ್ಡೇಕರ ಮಂಜಪ್ಪನವರ ಜೀವನ

ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ 'ಕರ್ನಾಟಕದ ಗಾಂಧಿ' ಎಂದೇ ಗುರುತಿಸಲ್ಪಟ್ಟ ಹರ್ಡೇಕರ ಮಂಜಪ್ಪನವರ ಜೀವನ ಚರಿತ್ರೆ ಸಂಸಾರಿಯೊಬ್ಬನ ಕೌಟುಂಬಿಕ ಕಥೆಯಲ್ಲ; ರಾಜಕೀಯ ಮುಖಂಡನೊಬ್ಬನ ಹೋರಾಟದ ಕಥೆಯಲ್ಲ, ಉದ್ಯೋಗಪತಿಯೊಬ್ಬನ ಮಹತ್ವಾಕಾಂಕ್ಷೆಯ ಕಥೆಯಂತೂ ಅಲ್ಲವೇ ಅಲ್ಲ. ಬದಲಾಗಿ ಅದೊಂದು ಸಮಾಜಕ್ಕಾಗಿ, ಧರ್ಮಕ್ಕಾಗಿ, ರಾಷ್ಟ್ರಕ್ಕಾಗಿ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡ ಮತ್ತು ಅವೆಲ್ಲವುಗಳ ಉದ್ಧಾರಕ್ಕಾಗಿ ತನ್ನೆಲ್ಲ ಸಾಧ್ಯತೆಗಳೊಂದಿಗೆ ಕೊನೆಯ ಉಸಿರಿನವರೆಗೂ ಕ್ರಿಯಾಶೀಲನಾಗಿ ಹೋರಾಡಿದ ಸಂನ್ಯಾಸಿಯೊಬ್ಬನ ರೋಮಾಂಚನಕಾರಿಯಾದ ಕಥೆ: ಹಾಗಾಗಿ ಮಂಜಪ್ಪನವರ ಜೀವನ ಚರಿತ್ರೆಯೆಂದರೆ ಉತ್ಕಟ ರಾಷ್ಟ್ರಭಕ್ತನೊಬ್ಬನ, ಪತ್ರಿಕಾಕರ್ತನೊಬ್ಬನ, ಸಂಶೋಧಕ ಲೇಖಕನೊಬ್ಬನ ಕಥೆ: ಒಟ್ಟಿನಲ್ಲಿ ಅದು ನಮ್ಮ ಭಾರತದ, ವಿಶೇಷವಾಗಿ ಕರ್ನಾಟಕದ ಸಂಸ್ಕೃತಿಯ ಒಂದು ಮಹತ್ವದ ಅಧ್ಯಾಯ.

ಮಂಜಪ್ಪನವರ ಹುಟ್ಟು ಕಾರವಾರ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ; 1886ರಲ್ಲಿ. ಇಂದು ಎಲ್ಲ ದೃಷ್ಟಿಯಿಂದಲೂ ಬತಗೆಟ್ಟ ಬನವಾಸಿ ಒಂದು ಕಾಲಕ್ಕೆ ಪ್ರಕೃತಿ ಸೌಂದರ್ಯದಿಂದ ಮಾತ್ರವಲ್ಲ ಸಾಂಸ್ಕೃತಿಕವಾಗಿಯೂ ಅತ್ಯಂತ ಸಮೃದ್ಧ ನಾಡು. ಕರ್ನಾಟಕ ಸಂಸ್ಕೃತಿಯ ಸುದೀರ್ಘವಾದ ಮತ್ತು ವೈಭವಯುತವಾದ ಚರಿತ್ರೆಯ ಒಂದೊಂದು ಹಂತದಲ್ಲೂ ಉಜ್ವಲ ಕೊಡುಗೆಯನ್ನಿತ್ತ, ಅದರ ಸಂವರ್ಧನೆಗೆ ಕಾರಣವಾದ ಶ್ರೇಯಸ್ಸು ಅದರದು. ಹಾಗೆ ನೋಡಿದರೆ, ಮಂಪ್ಪನವರು ಆಧುನಿಕ ಕಾಲದ ಒಂದು ವಿಶಿಷ್ಟ ಸಂದರ್ಭದಲ್ಲಿ ಬನವಾಸಿಯಿಂದ ಕರ್ನಾಟಕಕ್ಕೆ ಸಂದ ಒಂದು ವಿಶೇಷ ಬಳುವಳಿ. ಅದು ಕರ್ನಾಟಕದಿಂದ ಭಾರತಕ್ಕೆ ಸಂದ ಬಳುವಳಿಯೂ ಹೌದು.

ಮಂಜಪ್ಪನವರ ಮನೆತನ ಸಾಮಾಜಿಕವಾಗಿಯಾಗಲಿ, ಆರ್ಥಿಕವಾಗಿಯಾಗಲಿ, ಒಂದು ಪ್ರತಿಷ್ಠಿತ ಮನೆತನವೇನೂ ಅಲ್ಲ. ಒಂದು ದೃಷ್ಟಿಯಿಂದ ತೀರ ಸಾಧಾರಣವಾದ ಸಾಮಾಜಿಕವಾಗಿ ಉಪೇಕ್ಷಿತ ಮನೆತನ. ಆದರೆ ಸರಳ ಸಜ್ಜನಿಕೆಯಿಂದಾಗಿ ತನ್ನ ಪಾಡಿಗೆ ತಾನು ಗೌರವದಿಂದ ಬದುಕುತಿದ್ದ ವೀರಶೈವ ಮನೆತನ. ಇದರಿಂದಾಗಿ ಅವರ ಮನೆತನದ ಬಗೆಗಾಗಲಿ ಅವರ ವಂಶದ ಬಗೆಗಾಗಲಿ ಯಾವ ವಿಶೇಷ ಸಂಗತಿಯೂ ತಿಳಿದು ಬರುವುದಿಲ್ಲ. ಹಿರಿಯರೆಲ್ಲ ಬನವಾಸಿಯ ಮಧುಕೇಶ್ವರನ ಪರಮಭಕ್ತರು. ಅದು ಅವರ

ಕುಲದೇವರೂ ಹೌದು. ಅದಕ್ಕೆಂದೇ ಇರಬಹುದು, ಮಂಜಪ್ಪನವರ ತಂದೆಯ ಹೆಸರು ಮಧುಕೇಶ್ವರ, ಅಣ್ಣನ ಹೆಸರು ಮಧುಲಿಂಗಪ್ಪ.

ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು ತಬ್ಬಲಿಯಾದ ಮಂಜಪ್ಪನವರನ್ನು ಕುರಿತು, ಅವರ ಶಿಕ್ಷಣ, ಬದುಕು – ಭವಿಷ್ಯವನ್ನು ಕುರಿತು ಯಾರಿಗೂ ಯಾವ ಬಗೆಯ ಮಹತ್ವಾಕಾಂಕ್ಷೆಯೂ ಇರಲಿಲ್ಲ. ಮಂಜಪ್ಪ ಎಲ್ಲರಂತೆ ತಾನೂ ಒಬ್ಬನಾಗಿ ಬನವಾಸಿಯಲ್ಲೇ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿದ. ಅಷ್ಟರಲ್ಲಿ ಅಣ್ಣ ಶಿರಸಿಯ ತಾಲೂಕ ಕಚೇರಿಯಲ್ಲಿ ಗುಮಾಸ್ತನಾಗಿ ಸೇರಿಕೊಂಡಿದ್ದ. 1903ರಲ್ಲಿ ಮಂಜಪ್ಪ ಬನವಾಸಿಯನ್ನು ಬಿಟ್ಟು ಶಿರಸಿಗೆ ಬಂದು ಅದೇ ವರುಷ ಮುಲ್ಕಿ ಪರೀಕ್ಷೆಯಲ್ಲಿ ಉತ್ತೀರ್ಣನಾದ. ಆಗಿನ ಕಾಲಕ್ಕೆ ಅದೊಂದು ದೊಡ್ಡ ಪದವಿ, ಹಳ್ಳಿಗರ ದೃಷ್ಟಿಯಲ್ಲಂತೂ ಇನ್ನೂ ದೊಡ್ಡ ಪದವಿ. ಮಂಜಪ್ಪ ಮುಲ್ಕೀ ಪರೀಕ್ಷೆ ಪಾಸಾದದ್ದಂತೂ ಅಂದಿನ ಲಿಂಗಾಯತ ಸಮಾಜಕ್ಕೆ ಒಂದು ದೊಡ್ಡ ಸಡಗರ, ಏಕೆಂದರೆ ಆತ ಆ ಜಿಲ್ಲೆಯಲ್ಲಿಯೇ ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೊಟ್ಟಮೊದಲ ವೀರಶೈವ ವಿದ್ಯಾರ್ಥಿಯಾಗಿದ್ದ.

ಆಗಿನ ಹದಿನೇಳು ವರುಷದ ಮಂಜಪ್ಪನಿಗೆ ತನ್ನ ಭವಿಷ್ಯವನ್ನು ಕುರಿತು ಯಾವುದೇ ಕನಸು ಕೂಡ ಇರಲಿಲ್ಲ. ಬದಲಾಗಿ ಅಂದಿನ ನವೋದಯದ ಚೆಂದೆಳಕಿನಲ್ಲಿ ಚಿಗುರೊಡೆದಿದ್ದ ಆ ಚೇತನಕ್ಕೆ ಆದರ್ಶದ ಪ್ರಚ್ಛನ್ನ ಹಂಬಲವೊಂದು ಸಹಜ ಗುಣಧರ್ಮವೆನ್ನುವಂತೆ ಒಳ-ಒಳಗೆ ತುಡಿಯುತ್ತಿತ್ತು. ಉಚ್ಚ ಶಿಕ್ಷಣಕ್ಕೆ ಅವಕಾಶವಿಲ್ಲದ್ದಕ್ಕೊ, ತನ್ನ ವೈಯುಕ್ತಿಕ ಬದುಕಿನ ಬಗೆಗಿನ ಅನಾಸಕ್ತತೆಯಿಂದಾಗಿಯೊ ಇಲ್ಲವೇ ಶಿಕ್ಷಕ ವೃತ್ತಿಯ ಬಗೆಗಿನ ಸಹಜ ಆಕರ್ಷಣೆಯಿಂದಾಗಿಯೊ ಶಿರಸಿಯ ಕನ್ನಡ ಶಾಲೆಯಲ್ಲಿಯೇ ಏಳು ರೂಪಾಯಿ ಸಂಬಳದ ಮೇಲೆ ಶಿಕ್ಷಕನಾಗಿ ಸೇರಿಕೊಂಡ. ಮಂಜಪ್ಪ ಮಂಜಪ್ಪನವರಾದರು, ಗುರುಗಳಾದರು.

ಮಂಜಪ್ಪನವರ ಮನಸ್ಸು ಆ ಶಿಕ್ಷಕವೃತ್ತಿಯಲ್ಲಿಯೇ ಒಂದು ಬಗೆಯ ತೃಪ್ತಿ ಸಂತೃಪ್ತಿಯನ್ನು ಅನುಭವಿಸಿತು. ಕವಾಯಿತಿಗೆ ಬೇಕಾದ ಪದ್ಯಗಳನ್ನು ಕಟ್ಟಿ ಒಂದನೆಯ ತರಗತಿಯ ಮಕ್ಕಳಿಗೆ ಕಲಿಸುವಲ್ಲಿ, ಅದರಲ್ಲಿ ತಾವೂ ಪಾಲುಗೊಳ್ಳುವಲ್ಲಿ ಅವರು ಅನುಭವಿಸುತ್ತಿದ್ದ ಆನಂದ ನಿಜಕ್ಕೂ ಅನನ್ಯವಾದದ್ದು. ಹೀಗೆ ಅವರ ಜೀವನದಲ್ಲಿ ವೃತ್ತಿ-ಪ್ರವೃತ್ತಿಗಳೆರಡೂ ಮೇಳವಿಸಿ ಬಂದವು.

ಮಂಜಪ್ಪನವರಿಗೆ ಯಾವುದೇ ಮತ–ಧರ್ಮಗಳ ಬಗೆಗೆ, ಅವುಗಳ ಚಟುವಟಿಕೆಗಳ ಬಗೆಗೆ, ಏಕೆ, ತಮ್ಮ ಲಿಂಗಾಯತ ಧರ್ಮ ಹಾಗೂ ಸಮಾಜದ ಬಗೆಗೂ ಯಾವ ಒಲವು–ಆಕರ್ಷಣೆಗಳೂ ಇರಲಿಲ್ಲ. ಆದರೆ ಶಿರಸಿಯವರೇ ಆದ ಹಾಳ್ಕರ ವಕೀಲರಿಂದಾಗಿ

ಆರ್ಯಸಮಾಜದ ಬಗೆಗೆ ವಿಶೇಷವಾಗಿ ಆಕರ್ಷಿತರಾದರು. ಮೂಲತಃ ಶಿರಸಿಯವರೇ ಆಗಿದ್ದ ಹಾಳ್ಕರ ಅವರು ಮುಂಬೈಯಲ್ಲಿ ವಕೀಲಿ ವೃತ್ತಿಯನ್ನು ಕೈಕೊಂಡಿದ್ದರು. ದೇಸಿಗೆಯ ರಜೆಯಲ್ಲಿ ಊರಿಗೆ ಬರುತ್ತಿದ್ದರು. ಅವರಿಗೆ ಆರ್ಯಸಮಾಜದ ಬಗೆಗೆ ಎಲ್ಲಿಲ್ಲದ ಶ್ರದ್ಧೆ ಹಾಗೂ ಅಪಾರ ವಿಶ್ವಾಸ. ಸ್ವಾಮಿ ದಯಾನಂದರ 'ಸತ್ಯಾರ್ಥ ಪ್ರಕಾಶ' ಎಂಬ ಗ್ರಂಥವನ್ನು ಕನ್ನಡದಲ್ಲಿ ಅನುವಾದಿಸುವದಕ್ಕೆ ಮಂಜಪ್ಪನವರನ್ನು ಮೊರೆಹೊಕ್ಕರು. ಮಂಜಪ್ಪನವರಾದರೂ, ಅದು ತಮಗೆ ತೋರಿದ ಗೌರವ ಹಾಗೂ ವಿಶ್ವಾಸದ ಪ್ರತೀಕವೆಂದೇ ಭಾವಿಸಿದರು. ನೂರಾರು ಪುಟಗಳಷ್ಟು ಅನುವಾದ ಕಾರ್ಯ ತೃಪ್ತಿಕರವಾಗಿ ಮುಂದುವರೆಯಿತು. ಇದರಿಂದಾಗಿ ಮಂಜಪ್ಪನವರಿಗೆ ಆರ್ಯಸಮಾಜದ ಬಗೆಗೆ ಸಹಜವಾದ ಗೌರವ ಮತ್ತು ಆಸ್ಥೆ ಮೂಡಲಾರಂಭಿಸಿತು. ಅದರೊಂದಿಗೆ ದಿನಾಲು ಸಾಯಂಕಾಲ ತಿರುಗಾಡಲು ಹೋದಾಗ ಹಾಳ್ಕರ ಅವರು ಅಭಿಮಾನದಿಂದ ಬಣ್ಣಿಸುತ್ತಿದ್ದ ಆರ್ಯಸಮಾಜದ ವಿಷಯ, ಗುರುಕುಲದಲ್ಲಿ ಕಲಿಸುವ ಪದ್ಧತಿ ಇತ್ಯಾದಿಗಳ ರೀತಿಯೂ ಅವರನ್ನು ಸಾಕಷ್ಟು ಪ್ರಭಾವಿತರನ್ನಾಗಿ ಮಾಡಿತು. ಎಲ್ಲಕ್ಕೂ ಮಿಗಿಲಾಗಿ ಆರ್ಯಸಮಾಜದಲ್ಲಿ ಸಂಸ್ಕೃತವನ್ನು ಕಲಿಯಲು ಎಲ್ಲ ವರ್ಗದವರಿಗೂ ಅವಕಾಶವಿರುವ ವಿಷಯ ಮತ್ತು ಯಾರು ಬೇಕಾದರೂ ವೇದಗಳನ್ನು ಕೂಡ ಓದಬಹುದೆಂಬ ಸಂಗತಿ, ಒಂದು ಕುಬ್ಜ ವ್ಯವಸ್ಥೆಯ ಪರಿಸರದಲ್ಲಿ ನಿರಾಶೆಯನ್ನು ಅನುಭವಿಸಿದ್ದ, ಎಳೆಯ ವಯಸ್ಸಿನ ಮಂಜಪ್ಪನವರಿಗೆ ಸ್ವಪ್ನಲೋಕದ ಅನುಭವವನ್ನು ನೀಡಿತು. ಮುಂದಿನ ಅನುವಾದದ ಕೆಲಸಕ್ಕೆ ಹಾಳ್ಕರರು ಮುಂಬೈಗೆ ಬರಲು ಆಹ್ವಾನಿಸಿದಾಗಲಂತೂ ಕಮರಿದ ಕನಸೊಂದು ವಾಸ್ತವದಲ್ಲಿ ರೂಪಾಂತರಗೊಳ್ಳುವ ಭರವಸೆಯ ಚಿಗುರು ಕಾಣಿಸಿಕೊಂಡಂತಾಯಿತು. ಏಕೆಂದರೆ, ಬಹುಚಿಕ್ಕ ವಯಸ್ಸಿನಲ್ಲಿಯೇ ಅಂದರೆ ಅವರಿನ್ನೂ ಆರನೆಯ ತರಗತಿಯ ವಿದ್ಯಾರ್ಥಿಯಾಗಿದ್ದಾಗಲೇ, ಸಂಸ್ಕೃತವನ್ನು ಕಲಿತು ಶಾಸ್ತ್ರಿ ಎನಿಸಿಕೊಳ್ಳಬೇಕೆಂಬ ಮುಗ್ಧ ಆಸೆಯೊಂದು ಗೂಡುಕಟ್ಟಿತ್ತು. ಅದನ್ನು ಕಂಡು ಕರಗಿದ್ದ ಮಂಗೇಶರಾವ್ ಎಂಬ ಹೆಡ್‌ಮಾಸ್ತರರು ಅಮರಕೋಶವನ್ನು ಕಲಿಸುವ ಔದಾರ್ಯವನ್ನೂ ತೋರಿದ್ದರು. ಆದರೆ ಕೆಲವು ಪ್ರತಿಗಾಮಿ ಬ್ರಾಹ್ಮಣರ ವಿರೋಧದಿಂದಾಗಿ ಪಾಠ ಅಷ್ಟಕ್ಕೇ ನಿಂತು ಹೋಯಿತು. ಅದರಿಂದ ಮಂಜಪ್ಪನವರು ಆಗ ಅನುಭವಿಸಿದ ಅವಮಾನ ಎಷ್ಟೋ ಏನೋ; ಆದರೆ ದಟ್ಟ ನಿರಾಶೆಯ ಶೀತಲ ಕೊರೆತದ ಪರಿಣಾಮವೊಂದು ಅಂತರಾಳದಲ್ಲಿ ಸುಪ್ತವಾಗಿ ಸ್ಥಿರಗೊಂಡಿತ್ತು. ಮುಂದೊಂದು ಸಲ, 'ಮಂಜುನಾಥಶಾಸ್ತ್ರಿ' ಎಂಬ ಕಾವ್ಯನಾಮದಿಂದ ಒಂದು ಪದ್ಯವನ್ನು ರಚಿಸಿ 'ಮೈಸೂರು ಸ್ಟಾರ' ಪತ್ರಿಕೆಯಲ್ಲಿ ಪ್ರಕಟಿಸಿದರು. ಅದು ಅವರಿಗೆ ಕೊನೆಯವರೆಗೂ ಹಸಿರಾಗಿ ಉಳಿದ ಖುಷಿಯಾಗಿತ್ತು. "ಒಮ್ಮೆ ಲೇಖನದಲ್ಲಿ ಶಾಸ್ತ್ರೀಯಾಗೇ ಬಿಟ್ಟಿದ್ದೇನೆ" ಎಂದು ಆತ್ಮಚರಿತ್ರೆಯಲ್ಲಿ ಸ್ಮರಿಸಿಕೊಂಡದ್ದೂ ಉಂಟು. ಈಗ ಮುಂಬೈಗೆ ಹೋಗಿ ಅಂಥ ಬಹುದಿನದ ಹಸಿವೆಯೊಂದನ್ನು ಈಡೇರಿಸಿಕೊಳ್ಳುವ ಅವಕಾಶ ತಮ್ಮನ್ನು ತಬ್ಬಿಕೊಂಡು ಬಂದಿದ್ದರೂ, ಸಂಕೋಚ ಸ್ವಭಾವದ ಮಂಜಪ್ಪನವರು, ತಮ್ಮ

ಅಣ್ಣನವರು ಒಪ್ಪಲಾರರೆಂದು ಭಾವಿಸಿ ಮುಂದೈಗೆ ಹೋಗುವ ವಿಚಾರ ಕೈಬಿಟ್ಟರು.

ರಾಷ್ಟ್ರೀಯ ಹೋರಾಟದ ಅಂದಿನ ಸಂದರ್ಭದಲ್ಲಿ ಟಿಳಕರು ಹೊರಡಿಸುತ್ತಿದ್ದ 'ಕೇಸರಿ' ಪತ್ರಿಕೆ ಹಾಗೂ ಅದರಲ್ಲಿ ಪ್ರಕಟವಾಗುತ್ತಿದ್ದ ರಾಜಕೀಯ ಜ್ವಲಂತ ವಿದ್ಯಮಾನಗಳ ಪರಿಣಾಮವಾಗಿ ತರುಣ ಮಂಜಪ್ಪನವರ ನರನಾಡಿಗಳಲ್ಲಿ ರಾಷ್ಟ್ರಭಕ್ತಿ ಪುಟನೆಗೆದು ನಿಂತಿತು. ಆ ಉತ್ಕಟ ಆವೇಶವೇ ಅಣ್ಣ-ತಮ್ಮಂದಿರಿಬ್ಬರಲ್ಲೂ ಪತ್ರಿಕೆ ಹೊರಡಿಸುವ ದೃಢಸಂಕಲ್ಪವಾಗಿ ರೂಪತಾಳಿತು. ಮಂಜಪ್ಪನವರ ಬದುಕು ಹೊಸ ದಿಗಂತವೆಡೆಗೆ ಪಡೆದುಕೊಂಡ ಮಹತ್ವದ ಮೊದಲ ತಿರುವೂ ಅದಾಗಿತ್ತು. ಉಳಿದವರ ದೃಷ್ಟಿಯಲ್ಲಿ ಅದೊಂದು ಹುಚ್ಚು ಸಾಹಸವೂ ಆಗಿತ್ತು.

ಆಗ ಒಂದು ಸಾಧಾರಣ ಪತ್ರಿಕೆಯನ್ನು ಹೊರಡಿಸಲು ಬೇಕಾಗುವ ಕನಿಷ್ಠ ಸೌಲಭ್ಯವೂ ಕೂಡ ಅವರಿಗೆ ಇರಲಿಲ್ಲ. ಉತ್ಸಾಹವೊಂದನ್ನೇ ನಂಬಿ, ಇದ್ದ ನೌಕರಿಯನ್ನೂ ಬಿಟ್ಟು ಆ ದಿಸೆಯಲ್ಲಿ ಧುಮಿಕಿದ್ದರು. ಪ್ರೆಸ್ಸಿನ ತಿಳುವಳಿಕೆಯೂ ಅವರಿಗಿರಲಿಲ್ಲ. ಕೈಯಲ್ಲಿ ಕಾಸೂ ಇರಲಿಲ್ಲ. ಸುದ್ದಿಯನ್ನು ಸಂಗ್ರಹಿಸುವ ಕ್ರಮವೂ ಗೊತ್ತಿರಲಿಲ್ಲ. ಹೆಚ್ಚೇನು, ಮರಾಠಿಯ 'ಜ್ಞಾನಪ್ರಕಾಶ' ದಿನಪತ್ರಿಕೆ, 'ಕೇಸರಿ' ಮತ್ತು 'ಕಾಳ' ಪತ್ರಿಕೆಯಿಂದ ವಿಷಯ ಸಂಗ್ರಹಿಸಬೇಕಾಗಿದ್ದ ಇವರಿಗೆ ಸರಿಯಾದ ಮರಾಠಿಯ ಜ್ಞಾನವೂ ಇರಲಿಲ್ಲ. ಇನ್ನೂ ಆಶ್ಚರ್ಯವೆಂದರೆ, ಇಪ್ಪತ್ತೊಂದು ವಯಸ್ಸಿನ ಮಂಜಪ್ಪನವರಿಗೆ ಉತ್ತರ ಕನ್ನಡ ಜಿಲ್ಲೆಯನ್ನು ಬಿಟ್ಟು ಬೇರೆ ಪ್ರದೇಶದ ಗಾಳಿಕೂಡ ಸೋಂಕಿರಲಿಲ್ಲ. ಅದುವರೆಗೆ ಉಗಿಬಂಡಿಯನ್ನು ಕೂಡ ಕಂಡಿರಲಿಲ್ಲ. ಇಂಥ 'ಇಲ್ಲ' ಗಳ ಮಧ್ಯದಲ್ಲಿಯೇ ಎಲ್ಲವನ್ನೂ ಸಾಧಿಸುವ ಛಲ ಮತ್ತು ಕುತೂಹಲ ಮಂಜಪ್ಪನವರದು.

ಅಂದಿನ ದಾವಣಗೆರೆಯ ದೊಡ್ಡ ಕುಳವೆನಿಸಿದ್ದ ಮಾಗನಹಳ್ಳಿಯ ದೊಡ್ಡಪ್ಪನವರ ಸಹಾಯವನ್ನು ಪಡೆಯುವಲ್ಲಿ ಮತ್ತು ಚಂದಾದಾರರನ್ನು ಹೊಂದುವಲ್ಲಿ ಯಶಸ್ವಿಯಾದರು. ವರುಷಕ್ಕೆ ಮೂರುನೂರು ರೂಪಾಯಿಯ ಬಾಡಿಗೆಯ ಮೇಲೆ, ಕನ್ನಡ ಶಾಲೆಯ ಮಾಸ್ತರರಾಗಿದ್ದ ಎನ್.ರುದ್ರಪ್ಪನವರ 'ವಾಗ್ದೇವಿ ವಿಲಾಸ' ಎಂಬ ಪ್ರೆಸ್ಸನ್ನು ದೊಡ್ಡಪ್ಪನವರ ಮಧ್ಯಸ್ಥಿಕೆಯಲ್ಲಿ ಬಾಡಿಗೆ ಪಡೆದರು. ಹಾವೇರಿಯ ಒಬ್ಬ ಕಂಪೋಜಿಟರನನ್ನು ಗೊತ್ತು ಮಾಡಲಾಯಿತು. ಅಣ್ಣ ಮಧುಲಿಂಗಪ್ಪ ಪ್ರೆಸ್ಸಿನ ಮಾಲಿಕ, ತಮ್ಮ ಮಂಜಪ್ಪ ಪತ್ರಿಕೆಯ ಸಂಪಾದಕ. ಸರಿ 3-4 ತಿಂಗಳ ಸತತ ಪ್ರಯತ್ನದ ಫಲವಾಗಿ 1906ರಲ್ಲಿ 'ಧನುರ್ಧಾರಿ' ಜನ್ಮ ತಾಳಿತು. ತನ್ನ ಪ್ರಾಮಾಣಿಕ ಧೋರಣೆ ಹಾಗೂ ದಿಟ್ಟತನದಿಂದ ಸಾಕಷ್ಟು ಜನಪ್ರಿಯತೆಯನ್ನೂ ಗಳಿಸಿತು. ಆದರೆ ಆರ್ಥಿಕ ತೊಂದರೆಯೊಂದಿಗೆ ಆ ದಿಟ್ಟ ಬರವಣಿಗೆಯೂ ಒಂದು ಕಾರಣವಾಗಿ ಒಂದೇ ವರುಷದಲ್ಲಿ ಪತ್ರಿಕೆ ಕುತ್ತು-ಆಪತ್ತುಗಳನ್ನು ಎದುರಿಸಿತು. ಅದರಿಂದ ಮಂಜಪ್ಪನವರು ತುಂಬ

ನೊಂದುಕೊಂಡರು. ಆಶಾವಾದಿಗಳಾದ ಮಂಜಪ್ಪನವರು ಅಸಹಾಯಕರಾದರೂ ಹತಾಶರಾಗಲಿಲ್ಲ. ಧನುರ್ಧಾರಿಗೆ ಪುನರ್ಜನ್ಮಕೊಡುವ ಜಿಗುಟುತನಕ್ಕೆ ಇಳಿದರು. ಅಣ್ಣ ಶಿರಸಿ ಸೇರಿದ್ದರಿಂದ ಏಕಾಂಗಿಯಾಗಿ ಏನೆಲ್ಲ ಪ್ರಯತ್ನಪಟ್ಟರು. ಮುಂದೆ ಮುಂದೆಯಂತೂ ದಿನಗಳೆದಂತೆ, 'ಧನುರ್ಧಾರಿ' ಯ ಮಾತೊತ್ತಟ್ಟಿಗಿರಲಿ, ಹೊಟ್ಟೆಯದೇ ಒಂದು ದೊಡ್ಡ ಹರಿದು ತಿನ್ನುವ ಸಮಸ್ಯೆಯಾಯಿತು. ಅವರ ಏಕೈಕ ಹಿತೈಷಿಗಳೂ, ಅಪದ್ಬಾಂಧವರೂ ಆಗಿದ್ದ ಬಾಂದೋಡಿ ಬಾಳಪ್ಪನವರಿಂದ ಆಗಾಗ ಒಂದೆರಡು ರೂಪಾಯಿಗಳನ್ನು ಪಡೆದು ಅತ್ಯಂತ ಕನಿಷ್ಟ ಆಹಾರದಿಂದ ಅರೆಹೊಟ್ಟೆ ಉಂಡು ದಿನಗಳೆಯಬೇಕಾಯಿತು.

ಒಂದುಸಲ ಹಸಿವೆಯನ್ನು ತಾಳಲಾರದೆ ಹಣಕ್ಕಾಗಿ ಬಾಳಪ್ಪನವರ ಅಂಗಡಿಗೆ ಹೋದರೆ ಬರು-ಹೋಗುವ ಜನರಿಂದಾಗಿ ಹಣ ಕೇಳುವದೇ ಆಗಲಿಲ್ಲವಂತೆ. ಅದರೊಂದಿಗೆ ಸಂಕೋಚ–ಕೀಳರಿಮೆಯೂ ಒಂದು. ಗತ್ಯಂತರವಿಲ್ಲದೆ ಹಸಿವೆಯೊಂದಿಗೆ ನಿರಾಶೆಯನ್ನೂ ಕಟ್ಟಿಕೊಂಡು ಬರುತ್ತಿದ್ದರೆ, ದಾರಿಯಲ್ಲಿ ಅನಿರೀಕ್ಷಿತವಾಗಿ 'ಅರ್ಧಾಣೆ' ದೊರೆಯಿತಂತೆ. ಆಗ ಅವರಿಗಾದ ಸಂತೋಷ ಹಸಿವೆಯ ಅನುಭವವುಳ್ಳವರಿಗೆ ಮಾತ್ರ ಅರ್ಥವಾಗುವಂತಹದು. ಅರ್ಧ ಸೇರು ಜೋಳ ತಂದು ಸ್ವತಃ ಹಿಟ್ಟುಮಾಡಿ ರೊಟ್ಟಿಮಾಡಿಕೊಂಡು ತಿಂದರು, ಹೊಟ್ಟೆ ಶಾಂತವಾಯಿತು.

ಇದೇ ಸಮಯದಲ್ಲಿ ಊರಲ್ಲಿ ಪ್ಲೇಗಿನ ಹಾವಳಿ ದೇರೆ ಕಾಣಿಸಿತು. ಹೊಟ್ಟೆಗೇನೇ ಗತಿಯಿಲ್ಲದ ನಿರ್ಗತಿಕ ಮಂಜಪ್ಪನವರಿಗೆ ಊರ ಹೊರಗೆ ಒಂದು ಗುಡಿಸಲು ಹಾಕುವದಕ್ಕೂ ಕಷ್ಟವಾಯಿತು. ಅರ್ಧಗುಡಿಸಲನ್ನು ಕಟ್ಟಿ ಇನ್ನರ್ಧವನ್ನು ಹೇಗೋ ಮರೆಮಾಡಿಕೊಂಡು ಬದುಕನ್ನು ಮುಂದೂಡಬೇಕಾಯಿತು.

ಇಷ್ಟೆಲ್ಲ ಕಷ್ಟ–ನಿಷ್ಠುರಗಳ ಮಧ್ಯದಲ್ಲೂ ಧನುರ್ಧಾರಿಯ ಕನಸು ಕಮರಿರಲಿಲ್ಲ. ಮೇಲಾಗಿ ರಾಜಕೀಯ ಬಿರುಸಿನ ಚಟುವಟಿಕೆಗಳು, ಅವರ ಭೀಕರ ಪರಿಣಾಮಗಳು ದಳ್ಳುರಿಯಂತೆ ದೇಶದುದ್ದಗಲಕ್ಕೂ ವ್ಯಾಪಿಸುತ್ತಿದ್ದ ಕಾಲವದು. ಸೌಮ್ಯವಾದಿ ಹಾಗೂ ಉಗ್ರವಾದಿಗಳ ನಡುವಿನ ವಿರೋಧ, ಮುಂದಾಳುಗಳ ಬಂಧನ, ದೇಶದಲ್ಲೆಲ್ಲ ಹಾಹಾಕಾರ, ಇಂಥ ಸಂದರ್ಭದಲ್ಲಿ ಪತ್ರಿಕೆ ಇಲ್ಲದ್ದಕ್ಕೆ ಮಂಜಪ್ಪನವರಿಗೆ ಕೈಕೈ ಹಿಚುಕಿಕೊಳ್ಳುವಂತಾಯಿತು. ರಾಷ್ಟ್ರೀಯ ಹೋರಾಟದ ಬಗೆಗೆ, ರಾಷ್ಟ್ರನಾಯಕರ ಬಗೆಗೆ ಮಂಜಪ್ಪನವರು ಅಪಾರ ಕಳಕಳಿ ಹಾಗೂ ಅಭಿಮಾನವುಳ್ಳವರಾಗಿದ್ದರು; ಎಷ್ಟೆಂದರೆ 1908ರ ರಾಷ್ಟ್ರೀಯ ಸಂದರ್ಭದಲ್ಲಿ ಟಿಳಕರಿಗೆ ಆರು ವರುಷ ಶಿಕ್ಷೆಯಾದರೆ, ಅವರು ಇನ್ನು ಮೇಲೆ ಮರಳಿ ಬರುವದೇ ಇಲ್ಲವೆಂದು ಭಾವಿಸಿ ಯಾರೂ ಇಲ್ಲದ ಹಿತ್ತಲದ ಕಡೆಗೆ ಹೋಗಿ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಿದ್ದರಂತೆ. ಅಂದು ಊಟವನ್ನೂ ಮುಟ್ಟಿರಲಿಲ್ಲವಂತೆ! ಇಂಥ ತೀವ್ರ ಸಂವೇದನೆಯ ಜೊತೆಗೆ ಲಾಲ–ಪಾಲ್–ಬಾಲರಂಥ ರಾಜಕೀಯ ತೇಜಸ್ವಿಗಳ

ನಿಗಿನಿಗಿಸುವ ಲೇಖನಗಳಿಂದ ಪಡೆದ ಸ್ಫೂರ್ತಿಯ ನೆಗೆತ ದೇರೆ. ಅಂತಾಗಿ 'ಧನುರ್ಧಾರಿ' ಗೆ ಮರುಹುಟ್ಟು ಕೊಡಲು ಮತ್ತೆ ತಮ್ಮ ಪ್ರಯತ್ನವನ್ನು ತೀವ್ರಗೊಳಿಸಿದರು. ಬಾಳಪ್ಪನವರನ್ನೇ ಪೀಡಿಸಿ ಪಡೆದ ನಾಲ್ಕುನೂರು ರೂಪಾಯಿಗಳಿಂದ 1908ರಲ್ಲಿ ಮತ್ತೆ ಧನುರ್ಧಾರಿಗೆ ಜೀವತುಂಬಿದರು. ಶಿವಮೊಗ್ಗೆಯಿಂದ 'ಶಿಲಿಂಡರ್ ಮಶಿನ್' ತಂದು 'ಸಚ್ಚಿದಾನಂದ' ಎಂಬ ಸ್ವತಂತ್ರ ಮುದ್ರಣಾಲಯವನ್ನು ಆರಂಭಿಸಿದರು.

ದುರ್ದೈವದ ಸಂಗತಿಯೆಂದರೆ, ಅದೇ ಹೊತ್ತಿಗೆ ಮೈಸೂರು ಸೀಮೆಯಲ್ಲೂ ಪ್ರೆಸ್ ಕಾನೂನು ಏರ್ಪಟ್ಟಿತು. ಪರಿಣಾಮವಾಗಿ ಕಾನೂನಿನ ಕಾಲ್ತೊಡಕು. ಸರಕಾರಿ ಅಧಿಕಾರಿಗಳ ಅಮಾನವೀಯ ಕಿರಿಕಿರಿ. ಅದಕ್ಕೆಲ್ಲ ಪುಟಕೊಟ್ಟಂತೆ ಪತ್ರಿಕೆಯ ಉಗ್ರಧೋರಣೆ – ಎಲ್ಲವೂ ಪತ್ರಿಕೆಗೆ ಉರುಲಾಗಿ ಪರಿಣಮಿಸಿತು. ಈ ಎಲ್ಲ ತೊಂದರೆಗಳನ್ನು ಹೇಗೋ ಸಹಿಸಿಕೊಳ್ಳಬಹುದಿತ್ತು. ಆರ್ಥಿಕ ದುಃಸ್ಥಿತಿ ಮಾತ್ರ ಅವರ ಎಲ್ಲ ಕ್ರತುಶಕ್ತಿಗೆ ಸವಾಲಾಗಿ ನಿಂತಿತು.

ಇಲ್ಲಿಂದ ಮುಂದೆ ಮಂಜಪ್ಪನವರ ಬದುಕಿನ ಸ್ವರೂಪ ಮತ್ತೂ ದೇರೆಯಾಯಿತು. ಅವರು ತಮಗೆ ಅರಿವಿಲ್ಲದಂತೆಯೇ, ಸಮಾಜಕ್ಕೆ–ರಾಷ್ಟ್ರಕ್ಕೆ ತಮ್ಮನ್ನು ಎಂದೋ ಸಮರ್ಪಿಸಿಕೊಂಡ ಮಿಾಸಲು ಮನುಷ್ಯರಾಗಿದ್ದರು. ಇದುವರೆಗೆ ಪತ್ರಿಕಾಮಾಧ್ಯಮದಿಂದ ರಾಷ್ಟ್ರಸೇವೆಗೆ ಬದ್ಧರಾಗಿದ್ದವರು ಈಗ ನೇರವಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮದುವೆಯಾದರೆ ತಮ್ಮಿಂದ ಸಾರ್ವಜನಿಕಕಾರ್ಯ ಸಾಧ್ಯವಾಗದೆಂದು 1910ರಲ್ಲಿ, ಅಂದರೆ ತಮ್ಮ ಇಪ್ಪತ್ತೊಂದನೆಯ ಏರುಹರೆಯದ ವಯಸ್ಸಿನಲ್ಲಿಯೇ ಆಜನ್ಮ ಬ್ರಹ್ಮಚಾರಿಯಾಗಿರಲು ಧೀರ ಸಂಕಲ್ಪ ಮಾಡಿದರು. ಇದರಿಂದಾಗಿ ಸಮಾಜದ, ತನ್ಮೂಲಕವಾಗಿ ರಾಷ್ಟ್ರದ ಹಿತಚಿಂತನೆಯನ್ನುಳಿದರೆ ದೇರಾವ ಜೀವಿತೋದ್ದೇಶವೂ ಅವರಿಗೆ ಉಳಿಯಲಿಲ್ಲ. ಇಂದಿಗೂ ಸಕ್ರಿಯವಾಗಿ ಅಸ್ತಿತ್ವದಲ್ಲಿರುವ ಭಜನಾಮಂಡಳಿಗಳು, ಶ್ರಾವಣಮಾಸೋಪನ್ಯಾಸ, ಬಸವಜಯಂತಿ, ಅಕ್ಕನ ಜಯಂತಿಯಂಥ ಕಾರ್ಯಕ್ರಮಗಳು, ವೀರಶೈವ ತರುಣಸಂಘ, ಸತ್ಯಾಗ್ರಹಾಶ್ರಮ, ವೀರಶೈವ ವಿದ್ಯಾಲಯ ಇತ್ಯಾದಿಗಳಿಗೆಲ್ಲ ಹುಟ್ಟು ಹಾಕಿದ ಶ್ರೇಯಸ್ಸು ಮಂಜಪ್ಪನವರದು.

ವ್ಯಕ್ತಿ–ಸಮಾಜ–ಧರ್ಮ ಮತ್ತು ರಾಷ್ಟ್ರ–ಇವುಗಳ ಆಂತರಿಕ ಸಂಬಂಧವನ್ನು, ಅವುಗಳಲ್ಲಿಯ ಪರಸ್ಪರ ಪೂರಕಶಕ್ತಿಯನ್ನು ಮಂಜಪ್ಪನವರು ಮನಗಂಡವರಾಗಿದ್ದರು. ವ್ಯಕ್ತಿ, ಸಮಾಜದ ನೈತಿಕತೆಯನ್ನು ಉಪೇಕ್ಷಿಸಿ ಪಡೆಯಬಹುದಾದ ಭಾರತದ ಸ್ವಾತಂತ್ರ್ಯವೂ ಕೂಡ ಒಂದು ಶಾಪವಾಗಬಹುದೆಂಬ ನಿಷ್ಠುರ ಧೋರಣೆ ಅವರದಾಗಿತ್ತು. ಅಂತೆಯೇ ಮಂಜಪ್ಪನವರು ಅಂದಿನ ಕರ್ನಾಟಕದ ಮಿಕ್ಕ ರಾಷ್ಟ್ರೀಯ ಮುಂದಾಳುಗಳಂತೆ ರಾಜಕೀಯ ಹೋರಾಟಕ್ಕೆ ಪ್ರತ್ಯಕ್ಷವಾಗಿ ತಮ್ಮನ್ನು ಎಂದೂ ತೊಡಗಿಸಿಕೊಳ್ಳಲಿಲ್ಲ.

ಆದರೆ ಅವರಿಂದ ಒಂದು ಅಂತರವಲ್ಲಿ ನಿಂತು ಅಂದಿನ ವಾತಾವರಣದ ಅಬ್ಬರದ ಆವೇಶವನ್ನು ನಿಯಂತ್ರಿಸಿದರು. ರಾಜಕೀಯ ಮುಖಂಡರ ಹೆಜ್ಜೆಗಳ ತಪ್ಪನ್ನು ತಿದ್ದಿದರು. ತಮ್ಮನ್ನು ತಾವು ವಿಧಾಯಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡರು. ಅದಕ್ಕಾಗಿ ಅವರು ಪಟ್ಟ ಪರಿಶ್ರಮಕ್ಕೆ ಅನುಭವಿಸಿದ ಸಂಕಷ್ಟಗಳಿಗೆ ಲೆಕ್ಕವಿಲ್ಲ. ಸಮಾಜವಲ್ಲಿ ನೈತಿಕ ಭದ್ರಬುನಾದಿ ಹಾಕುವದಕ್ಕೆ ಮಸ್ಟಟ, ದುರ್ವ್ಯಸನ, ದಾರಿದ್ರ್ಯ, ಮೌಢ್ಯ ಹಾಗೂ ಮೂಢನಂಬಿಕೆಗಳ ಅಪಾಯದಿಂದ ಜನರನ್ನು ಪಾರುಮಾಡಲು, ಸಾಮಾಜಿಕ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿ ರಾಷ್ಟ್ರನಿರ್ಮಾಣ ಕಾರ್ಯಕ್ಕೆ ಸಮುದಾಯವನ್ನು ಸಮರ್ಥಗೊಳಿಸಲು ಒಬ್ಬ ಸುಧಾರಣಾವಾದಿಯಾಗಿ ಕಾಲುನಡಿಗೆಯಿಂದಲೇ ಕರ್ನಾಟಕದ ವಿಶೇಷವಾಗಿ ಉತ್ತರ ಕರ್ನಾಟಕದ ಊರು-ಕೇರಿಗಳನ್ನೆಲ್ಲ ಸಂಚರಿಸಿದರು. ಅದೇ ಉದ್ದೇಶಕ್ಕಾಗಿಯೇ ಉಪನ್ಯಾಸಕರಾದರು, ಲೇಖಕರಾದರು, ಸಂಶೋಧಕರಾದರು, ಮುದ್ರಕರಾದರು, ಪ್ರಕಾಶಕರಾದರು, ಸಂದರ್ಭಬಂದರೆ ಬಂಡುಕೋರರಾದರು. ಈ ಎಲ್ಲವುಗಳ ಮೂಲಕ ರಾಷ್ಟ್ರವಾದಿಗಳಾದರು.

ಆಗಲೇ ಹೇಳಿದಂತೆ ಮಂಜಪ್ಪನವರಿಗೆ ಮೊದಮೊದಲು ಯಾವ ಮತ-ಧರ್ಮದ ಬಗೆಗೂ ಆಸಕ್ತಿ ಇರಲೇ ಇಲ್ಲ. ತಮ್ಮ ಲಿಂಗಾಯತ ಧರ್ಮದ ಬಗೆಗಂತೂ ದಿವ್ಯ ಉಪೇಕ್ಷೆ, ಜಿಗುಪ್ಸೆಯೆಂದರೂ ಸಂದೀತು. ಇಂಥ ಸಂದರ್ಭದಲ್ಲಿಯೇ ದಾವಣಗೆರೆಯ ನಿಡಗುಂದಿ ಮಡಿವಾಳಪ್ಪನವರ ಮತ್ತು ಕಂಚಿಕೆರೆ ಮಹಾಲಿಂಗಪ್ಪನವರ ಪರಿಚಯ ವೀರಶೈವ ಧರ್ಮದ ನಿಜವಾದ ರಹಸ್ಯವನ್ನು ಕುರಿತು ಮಂಜಪ್ಪನವರ ಕಣ್ಣು ತೆರೆಯಿಸಿತು. ವೀರಶೈವ ಆಂದೋಲನದ ಸ್ವರೂಪ-ಉದ್ದೇಶ, ಅದರ ಸಾಮಾಜಿಕ ಧೋರಣೆ, ತತ್ವಸಿದ್ಧಾಂತಗಳ ಅಧ್ಯಯನದಿಂದ ಹೊಸ ಪ್ರೇರಣೆ ಉಂಟಾಯಿತು. ವೀರಶೈವ ಧರ್ಮಕ್ಕೂ ಅಂದಿನ ವೀರಶೈವ ಸಮಾಜಕ್ಕೂ ಇರುವ ಅಂತರ ಅವರನ್ನು ಚಿಂತನೆಗೀಡುಮಾಡಿತು. ಅಂದಿನ ಎಲ್ಲ ಸಾಮಾಜಿಕ ದುರಂತಗಳ ಮೂಲವನ್ನು ಬಸವಣ್ಣನವರ ಆದರ್ಶ ಮೌಲ್ಯಗಳ ಉಪೇಕ್ಷೆಯಲ್ಲಿ ಗುರುತಿಸಿದರು. ಕೊನೆಗೆ ಸಮಾಜದ ಉದ್ಧಾರಕ್ಕೆ ವೀರಶೈವ ಶರಣರ ಸಾಮಾಜಿಕ ಮೌಲ್ಯಗಳ ಪರಿಷ್ಕರಣ ಮತ್ತು ಪುನರನುಷ್ಠಾನವೊಂದೇ ಏಕೈಕ ಮಾರ್ಗವೆಂಬ ನಿಷ್ಠುರ ನಿರ್ಧಾರಕ್ಕೆ ಬಂದರು.

1911ರಲ್ಲಿ ದೇರೊಂದು ಕಾರ್ಯಕ್ಕಾಗಿ ಮುಂಬೈಗೆ ಹೋದಾಗ ಅಲ್ಲಿಯ ಆರ್ಯ ಸಮಾಜದಲ್ಲಿ ಜರಗುತ್ತಿದ್ದ ಸಾಮೂಹಿಕ ಭಜನೆ, ವ್ಯಾಖ್ಯಾನಾದಿ ಚಟುವಟಿಕೆಗಳಿಂದ ಸ್ಫೂರ್ತಿಪಡೆದು ಬಂದರು. ವೀರಶೈವ ಸಮಾಜ ಹಾಗೂ ವೀರಶೈವ ಮಠಗಳಲ್ಲಿ ಇಂಥ ಚಟುವಟಿಕೆಗಳನ್ನು ಹಮ್ಮಿಕ್ಕೊಳ್ಳುವದಕ್ಕೆ ಅವಕಾಶವಿರುವದನ್ನು ಕಂಡುಕೊಂಡರು. ಆಗ ದಾವಣಗೆರೆಯ ವಿರಕ್ತಮಠದ ಅಧಿಪತಿಗಳಾಗಿದ್ದ ಪೂಜ್ಯಶ್ರೀ ಮೃತ್ಯುಂಜಯ ಸ್ವಾಮಿಗಳೆದುರು ತಮ್ಮ ವಿಚಾರವನ್ನಿಟ್ಟಾಗ ಸಾಕಷ್ಟು ಪ್ರೋತ್ಸಾಹ ದೊರೆಯಿತು.

ಮಡಿವಾಳಪ್ಪನವರ ಸಹಕಾರದೊಂದಿಗೆ 26.6.1911ರಂದು ಭಜನಾಸಂಘವನ್ನು ಸ್ಥಾಪಿಸಿ ಪ್ರತಿ ಸೋಮವಾರ ನಿಜಗುಣಾರಾಧ್ಯರ, ಸರ್ಪಭೂಷಣ ಶಿವಯೋಗಿಗಳ ಪದಗಳನ್ನು ಹಾಡುವ ಮತ್ತು ಕೆಲವು ಆಯ್ದ ಪದ್ಯಗಳನ್ನು ಅಚ್ಚುಹಾಕಿಸಿ ಉಚಿತವಾಗಿ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮುಂದುವರೆದು ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಅನುಗ್ರಹದಿಂದ ಪ್ರತಿವರುಷ ಶ್ರಾವಣಮಾಸದಲ್ಲಿ ಪ್ರತಿ ಸೋಮವಾರ ನಾಡಿನ ಗಣ್ಯವಿದ್ವಾಂಸರಿಂದ ವ್ಯಾಖ್ಯಾನ ಮಾಡಿಸುವ ಕಾರ್ಯಕ್ರಮಕ್ಕೆ ಹುಟ್ಟು ಹಾಕಿದರು. ಅದರಿಂದ ಸಮಾಜ ಶುದ್ಧಿಗೆ ಬೇಕಾಗುವ ಪರಿಸರ ನಿರ್ಮಾಣದ ಕನಸು ಕಂಡರು. ಆದರೆ ನಮ್ಮ ಜನ ಭಾವನಾತ್ಮಕತೆಗೆ ತುಡಿಯುವಂತೆ ಬೌದ್ಧಿಕತೆಗೆ ತುಡಿಯುವವರಲ್ಲ. ಇದ್ದಕ್ಕಿದ್ದಂತೆ ಸಾಮಾನ್ಯ ಜನರಿಂದ ಅದನ್ನು ಅಪೇಕ್ಷಿಸುವದೂ ಸರಿಯಲ್ಲ. ಇದರಿಂದಾಗಿ ಅವರ ಈ ಕಾರ್ಯಕ್ರಮ ಮಂಜಪ್ಪನವರ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಡುವಲ್ಲಿ ಸಫಲವಾಗಲಿಲ್ಲ. ಆದರೆ ಮಂಜಪ್ಪನವರು ಹಿಂಜರಿಯಲಿಲ್ಲ.

ದಿನಗಳೆದಂತೆ ಅವರ ನೈಷ್ಠಿಕ ವ್ರತ ತೀವ್ರಗೊಂಡಿತು. ವೀರ್ಯರಕ್ಷಣೆಗಾಗಿ ಚಿಗರಿಯ ಚರ್ಮದ ಮೇಲೆ ಮಲಗಲಾರಂಭಿಸಿದರು. ಆಹಾರದಲ್ಲಿ ವಿಪರೀತ ಪರಿವರ್ತನೆ ಹಾಗೂ ಮಿತವ್ಯಯ ಕಾಣಿಸಿಕೊಂಡಿತು. 1911 ರಿಂದ ಯೋಗಶಾಸ್ತ್ರ, ವೈದ್ಯಶಾಸ್ತ್ರ, ಇತ್ಯಾದಿಗಳೊಂದಿಗೆ ಧಾರ್ಮಿಕ ಸಾಹಿತ್ಯವನ್ನು ವಿಶೇಷವಾಗಿ ವೀರಶೈವ ಸಾಹಿತ್ಯವನ್ನು ಕುರಿತು ಆಳವಾದ ಅಧ್ಯಯನ ಹಾಗೂ ಸಂಶೋಧನೆಯನ್ನು ಮುನ್ನಡೆಸಿದರು. ವೀರಶೈವ ತತ್ವಗಳ ಪ್ರಸಾರ ಮತ್ತು ಅನುಷ್ಠಾನ ಆ ಮೂಲಕ ಸಮಾಜ ಸುಧಾರಣೆ ಅವರ ಚಟುವಟಿಕೆಗಳ ಗುರಿಯಾಯಿತು. ಇದು ಯಾವುದೇ ಒಂದು ಯೋಜನೆಗೆ ದಕ್ಕುವ ಮಾತಾಗಿರಲಿಲ್ಲ. ಅದನ್ನರಿತ ಮಂಜಪ್ಪನವರು ಹೊಸ ಹೊಸ ಯೋಜನೆಗಳಿಗೆ ಹುಟ್ಟು ಹಾಕಲಾರಂಭಿಸಿದರು. ಪುರಾಣ–ವ್ಯಾಖ್ಯಾನಗಳ ಮೂಲಕ ಧಾರ್ಮಿಕ ಜಾಗೃತಿಯನ್ನುಂಟುಮಾಡಲು 'ವೀರಶೈವ ಹಿತೋಪದೇಶಕ ಸಂಘ' ಅಸ್ತಿತ್ವಕ್ಕೆ ಬಂದಿತು. ಮುಂದೆ 1917ರಲ್ಲಿ ವೀರಶೈವ ತರುಣ ಸಂಘದ ಸ್ಥಾಪನೆಯಾಯಿತು.

ಹೀಗೆ ಮಂಜಪ್ಪನವರು ಹಮ್ಮಿಕೊಂಡ ಹತ್ತು ಹಲವು ಬಗೆಯ ಚಟುವಟಿಕೆಗಳ ಸತ್ಫಲ ಸಾಮಾಜಿಕ ನೆಲೆಯಲ್ಲಿ ಸಿಹಿ ಹಾಗೂ ಸಾರ್ಥಕವೆನಿಸಿದರೂ ವೈಯಕ್ತಿಕ ನೆಲೆಯಲ್ಲಿ ಮಾತ್ರ ಅವರು ಕಹಿಯನ್ನೇ ಅನುಭವಿಸಬೇಕಾಯಿತು. ಒಂದು ಸಲವಂತೂ ಅವರು ಅನುಭವಿಸಿದ ಹಿಂಸೆ, ಅವಮಾನ ಅಮಾನವೀಯವಾದದ್ದು. ಮಂಜಪ್ಪನವರಿಗಿದ್ದ ಸಾಮಾಜಿಕ ಗೌರವವನ್ನು ಮತ್ತು ಮಠಾಧೀಶರನ್ನು ಸಹಿಸಲಾಗದ ಮಗನಹಳ್ಳಿ ದೊಡ್ಡಬಸಪ್ಪನವರು ಮೊದಲಿನಿಂದಲೂ ಒಳಗೊಳಗೇ ತಳಮಳಿಸುತ್ತಿದ್ದರು. ಅವರ ಮಾತ್ಸರ್ಯಕ್ಕೆ ಮಂಜಪ್ಪನವರು ವಿನಾಕಾರಣ ಬಲಿಯಾಗಬೇಕಾಯಿತು. ಒಂದು ಸಲ ಬಾಳಪ್ಪನವರ ಅಂಗಡಿಯಲ್ಲಿ ಕುಳಿತಿದ್ದ ಮಂಜಪ್ಪನವರನ್ನು ಬಾಯಿಗೆಬಂದಂತೆ ಹೀನಾಯವಾಗಿ

ದೈವರಂತೆ! ಅದರಿಂದ ಅತ್ಯಂತ ಸುಸಂಸ್ಕೃತ ಹಾಗೂ ಸಂವೇದನಾಶೀಲರಾದ ಮಂಜಪ್ಪನವರು ಅವಮಾನದಿಂದ ಜರ್ಜರಿತರಾದರು. "ನಾನೆಂದೂ ಹಾಗೆ ದೈಸಿಕೊಂಡಿರಲಿಲ್ಲ. ನಾನು ಪಿಟ್ಟೆಂದು ಮಾತಾಡದೆ ಸಣ್ಣ ಹುಡುಗರಂತೆ ಅಳುತ್ತಾ ಮನೆಗೆ ಬಂದೆನು. ಆ ದಿನ ಮಧ್ಯಾಹ್ನ ಊಟ ಮಾಡಲಿಲ್ಲ. ಮಠಕ್ಕೆ ಸ್ವಾಮಿಗಳ ದರ್ಶನಕ್ಕೆ ಹೋದೊಡನೆ ದುಃಖ ತಡೆಯಲಾರದೆ ಬಿಕ್ಕಿ ಬಿಕ್ಕಿ ಅತ್ತೆನು. ಎಲ್ಲರು ಸಮಾಧಾನ ಪಡಿಸಿದರು" ಎಂದು ಆತ್ಮಚರಿತ್ರೆಯಲ್ಲಿ ತಮ್ಮ ಅಳಲನ್ನು ಸಹೃದಯರೆದುರು ತೋಡಿಕೊಂಡಿದ್ದಾರೆ.

ಇನ್ನೊಂದು ಸಲ ಮಠದಲ್ಲಿ ನಿವೃತ್ತ ಹೆಡ್‌ಮಾಸ್ತರ ಗುರುಶಾಂತಪ್ಪನವರ ಸನ್ಮಾನದ ಸಂದರ್ಭ; ಗುರುಶಾಂತಪ್ಪನವರ ಭಾಷಣದ ತರುವಾಯ ಮಂಜಪ್ಪನವರು ತಮ್ಮ ಉಪಸಂಹಾರದ ಭಾಷಣದಲ್ಲಿ ಆ ಮಾಸ್ತರರ ವ್ಯಕ್ತಿತ್ವವನ್ನು ಧ್ವನಿಪೂರ್ಣವಾಗಿ ಹೇಳಲು ಬಳಸಿದ ಒಂದು ಮಾತಿನ ವಾಚ್ಯಾರ್ಥವನ್ನೇ ಮುಂದೆ ಮಾಡಿ ಅವರ ವಿರೋಧಿಗಳು ವಾದಕ್ಕೆ ಇಳಿದು, ಕೊನೆಗೆ ಸಾರ್ವಜನಿಕವಾಗಿ ಕ್ಷಮೆ ಕೇಳಲು ಒತ್ತಡ ತಂದರು. ನಿಷ್ಕಾರಣವಾಗಿ ಮಂಜಪ್ಪನವರು ಕ್ಷಮೆ ಕೇಳಬೇಕಾದ ಪರಿಸ್ಥಿತಿ ಒದಗಿತು.

ಮತ್ತೊಂದು ಘಟನೆ– ಮಂಜಪ್ಪನವರ ವಿರೋಧಿಗಳು 'ಒಡನಾಡಿ' ಎಂಬ ಹೆಸರಿನಿಂದ ಆಗಿನ ಪ್ರಖ್ಯಾತ 'ಮೈಸೂರು ಸ್ಟಾರ' ಪತ್ರಿಕೆಯಲ್ಲಿ ಇವರನ್ನು ಕುರಿತು ಅಸಹ್ಯ ಲೇಖನವನ್ನು ಪ್ರಕಟಿಸಿದರು. ಹುಬ್ಬಳ್ಳಿಯ ವಾರ್ತಾಪ್ರಸಾರಕ ಸಂಘದವರೂ ಈ ವಿಷಯವನ್ನು ಪ್ರಸಾರಗೊಳಿಸಿದರು. ಇದರಿಂದ ಒಂದು ಕೋಲಾಹಲದ ವಾತಾವರಣವೇ ನಿರ್ಮಾಣವಾಯಿತು. ಶಾಂತ ಹಾಗೂ ಸ್ಥಿತಪ್ರಜ್ಞರಾದ ಮಂಜಪ್ಪನವರು ತಮ್ಮ ಅಭಿಮಾನಿಗಳನ್ನು ಸಂತೈಸಿ ವಾತಾವರಣವನ್ನು ಶಾಂತಗೊಳಿಸಿದರು.

ಮಂಜಪ್ಪನವರ ಜೀವನದಲ್ಲಿ ಇಂಥ ಘಟನೆ ಸನ್ನಿವೇಶಗಳು ಇನ್ನೂ ಎಷ್ಟೋ ಏನೊ! ಅವುಗಳಲ್ಲಿ ಒಂದು ಸಂಗತಿಯನ್ನಂತೂ ನುಂಗಿಕೊಳ್ಳಲಿಕ್ಕಾಗುವದಿಲ್ಲ. ಹರಿಹರದ ಆಶ್ರಮದಲ್ಲಿ ಇದ್ದಾಗ ಅವರ ಅಕ್ಕನ ಮಗ ಪ್ಲೇಗಿನಿಂದಾಗಿ ತೀರಿಕೊಂಡರೆ, ಶವಸಂಸ್ಕಾರಕ್ಕೂ ಯಾರ ಸಹಕಾರವೂ ದೊರೆಯಲಿಲ್ಲ. ತಾವೇ ತಮ್ಮ ಮುಪ್ಪಿನ ತಾಯಿಯೊಂದಿಗೆ ಒಂಟೆತ್ತಿನ ಚಕ್ಕಡಿಯ ಮೇಲೆ ಹೆಣವನ್ನು ಹೇರಿಕೊಂಡು ಅಂತಿಮ ಸಂಸ್ಕಾರವನ್ನು ಮಾಡಬೇಕಾಯಿತು. ಹೀಗೆ ಜನ ಉಪಕಾರ ಅರಿಯಲಿಲ್ಲ, ಹೆಣ ಸಿಂಗಾರ ಅರಿಯಲಿಲ್ಲ.

ದಾವಣಗೆರೆಯಲ್ಲಿ ಜರುಗಿದ ಎಂಟನೆಯ ವೀರಶೈವ ಮಹಾಸಭೆಯ ಮುಂದಾಳಾಗಿ ಶ್ರಮವಹಿಸಿ ದುಡಿದರೂ ವಿರೋಧಿಗಳ ಅಸೂಯೆಯಿಂದ ಸ್ವಾಗತ ಸಮಿತಿಯಲ್ಲೂ ಅವರ ಹೆಸರು ಬರಲಿಲ್ಲ. ಆದರೂ ಅವರು ಅಸಮಾಧಾನಪಟ್ಟುಕೊಳ್ಳಲಿಲ್ಲ. ನಿರ್ಹೇತುಕ

ಭಾವನೆಯಿಂದ ಏಕನಿಷ್ಠೆಯಿಂದ ಮಡಿದದ್ದು, ಸಾಂತ್ವನ ಹೇಳಬಂದವರಿಗೆ ಬುದ್ಧಿವಾದ ಹೇಳಿದ್ದು ಅವರ ವಿಶಾಲ ಮನೋಧರ್ಮಕ್ಕೆ ಒಂದು ನಿದರ್ಶನ.

1920 ರಲ್ಲಿ ಅಸಹಕಾರ ಚಳುವಳಿ ದೇಶದುದ್ದಕ್ಕೂ ಬಿರುಗಾಳಿಯಾಗಿ ಹರಡಿತು. ಗಾಂಧೀಜಿಯವರ ತತ್ವ-ಸಿದ್ಧಾಂತ, ದರ್ಶನ-ಆದರ್ಶಗಳು ಅವರ ಸಾಮಾಜಿಕ, ರಾಷ್ಟ್ರೀಯ ಕಳಕಳಿ ಮ ್ತ ಅವರ ಧವಳ ವ್ಯಕ್ತಿತ್ವದಿಂದ ಮಂಜಪ್ಪನವರು ವಿಶೇಷವಾಗಿ ಪ್ರಭಾವಿತರಾಗಿದ್ದರು. ಗಾಂಧೀಜಿಯವರ ಲೌಕಿಕ ಹಾಗೂ ಪಾರಮಾರ್ಥಿಕ ಮೌಲ್ಯಗಳ ಸಮೀಕರಣ ಸಿದ್ಧಾಂತ ಮಂಜಪ್ಪನವರನ್ನು ಅತಿಯಾಗಿ ಆಕರ್ಷಿಸಿದ್ದವು. ಅವರ ದೃಷ್ಟಿಯಲ್ಲಿ ಗಾಂಧೀಜಿಯವರು ಒಬ್ಬ ವಿಭೂತಿಪುರುಷರಾಗಿದ್ದರು. ಸ್ವಾಮಿರಾಮತೀರ್ಥರ ಉಪದೇಶವೇ ಮೂರ್ತಿಯಾಗಿ ಗಾಂಧಿಯವರಾಗಿದ್ದಾರೆಂದೇ ಅವರ ಭಾವನೆ. ಹಾಗೆಂದೇ ಅವರೀರ್ವರ ವ್ಯಕ್ತಿತ್ವದಲ್ಲಿ ತಮ್ಮ ಎಲ್ಲ ಅಂತಃಕರಣವನ್ನು ಸಂಪೂರ್ಣವಾಗಿ ಲೀನಗೊಳಿಸಿ ಕೊಂಡರು.

1922ರಲ್ಲಿ ಗಾಂಧಿಯವರಿಗೆ ಶಿಕ್ಷೆಯಾದಾಗ ಮಂಜಪ್ಪನವರು ಅನುಭವಿಸಿದ ದುಃಖಕ್ಕೆ ಲೆಕ್ಕವಿಲ್ಲ. ಅದೇ ವರುಷ ಮಾರ್ಚ 18ರಂದು ಗಾಂಧಿ ಶಕವನ್ನೇ ಆರಂಭಿಸಿದರು. ಕರ್ನಾಟಕದ ವಿವಿಧ ಪ್ರದೇಶಗಳಲ್ಲೆಲ್ಲ ಸಂಚರಿಸಿ ಅವರ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ತೇಯ, ಅಪರಿಗ್ರಹ, ಅಸ್ವಾದ, ನಿರ್ಭಯ, ಸ್ವದೇಶಿ, ಅಸ್ಪೃಶ್ಯತೆ – ಈ ಒಂಬತ್ತು ತತ್ವಗಳ ಪ್ರಚಾರಕ್ಕೆ ತೊಡಗಿದರು. ಇವೆಲ್ಲ ವೀರಶೈವ ತತ್ವಗಳಿಗಿಂತ ಬೇರೆಯಲ್ಲವೆಂದು ಚಾರಿತ್ರಿಕವಾಗಿ, ಸಂಶೋಧನಾತ್ಮಕವಾಗಿ ಜನತೆಗೆ ಮನಗಾಣಿಸಿಕೊಟ್ಟರು. "ನಮ್ಮ ಲಿಂಗವಂತ ಸಮಾಜ ರಾಷ್ಟ್ರೀಯ ವಿಚಾರವನ್ನೇ ಬೋಧಿಸುತ್ತದೆ. ಆದುದರಿಂದ ನಾನು ಲಿಂಗವಂತನಾಗಿ ಉಳಿದಿದ್ದೇನೆ." ಎಂಬ ಅವರ ಹೇಳಿಕೆಯನ್ನು ಈ ಹಿನ್ನೆಲೆಯಲ್ಲಿ ಸ್ಮರಿಸಬೇಕು. ವೀರಶೈವರ 64 ಶೀಲಗಳಲ್ಲಿ 21ನೆಯ ಶೀಲವು – ಲಿಂಗವಂತರಿಂದಲೇ ನೇಯಿಸಲ್ಪಟ್ಟ ಬಟ್ಟೆಯನ್ನು ಲಿಂಗವಂತರು ಧರಿಸಬೇಕೆಂದಿದ್ದು ಖಾದಿತತ್ವ ಮತ್ತು ಸ್ವದೇಶಿಧರ್ಮವನ್ನು ಗುರುತಿಸಿ ಖುಷಿಪಟ್ಟರು. ಅಷ್ಟೇಅಲ್ಲ 1924ರಲ್ಲಿ ಬೆಳಗಾವಿಯಲ್ಲಿ ಸೇರಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿಯೇ ವೀರಶೈವ ಪರಿಷತ್ತನ್ನು ಸಂಘಟಿಸಿ ಹಿಂದಿ ಮತ್ತು ಮರಾಠಿ ಭಾಷೆಯಲ್ಲಿ "ಸತ್ಯಾಗ್ರಹಿ ಬಸವೇಶ್ವರ" ಎಂಬ ಚಿಕ್ಕ ಪುಸ್ತಕವನ್ನು ಮುದ್ರಿಸಿ ಉಚಿತವಾಗಿ ಹಂಚಿದರು. ಗಾಂಧೀಜಿಯವರ ತತ್ವಗಳು ಬಸವತತ್ವಗಳ ಮರುಧ್ವನಿಯಂತಿರುವದನ್ನು ಗಾಂಧೀಜಿಯವರಿಗೆ ಮನವರಿಕೆ ಮಾಡಿಕೊಟ್ಟು ಸೈ ಎನಿಸಿಕೊಂಡರು.

ಕರ್ನಾಟಕದಲ್ಲಿ ಹುಟ್ಟಿಕೊಂಡಿದ್ದ ಬ್ರಾಹ್ಮಣ-ಬ್ರಾಹ್ಮಣೇತರ ಎಂಬ ಕಂದರ ಮುಚ್ಚಿಹೋದದ್ದು, ಕಾಂಗ್ರೆಸ್ಸಿಗರೆಂದರೆ ಕೇವಲ ಬ್ರಾಹ್ಮಣರು ಎಂಬ ಭ್ರಮೆಯನ್ನು

ನಿರಸನಗೊಳಿಸಿದ್ದು, ಗಾಂಧಿತತ್ವಗಳ ಬಗ್ಗೆ, ರಾಷ್ಟ್ರೀಯ ಚಳುವಳಿಯ ಬಗ್ಗೆ ಬ್ರಾಹ್ಮಣೇತರರಲ್ಲಿ, ವಿಶೇಷವಾಗಿ ಅಂದಿನ ವೀರಶೈವರಲ್ಲಿ ಮೂಡಿದ್ದ ತಪ್ಪು ಕಲ್ಪನೆಯನ್ನು ತಪ್ಪಿಸಿ, ಬ್ರಾಹ್ಮಣೇತರರೆಲ್ಲ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿ, ಅದನ್ನು ಯಶಸ್ಸಿನ ಹಾದಿಯಲ್ಲಿ ಮುಂದುವರೆಸಿಕೊಂಡು ಹೋದದ್ದು ಅಂದಿನ ಕರ್ನಾಟಕ ಚರಿತ್ರೆಯಲ್ಲಿಯೇ ಒಂದು ವಿಶೇಷದಾಖಲೆ. ಅದರ ಸಂಪೂರ್ಣ ಶ್ರೇಯಸ್ಸು ಮಂಜಪ್ಪನವರದು.

ಹೀಗೆ ಬದುಕು–ಬರಹ, ತತ್ವ–ಸಿದ್ಧಾಂತ–ಆದರ್ಶ ಎಲ್ಲದರಲ್ಲೂ ಮಂಜಪ್ಪನವರು ಗಾಂಧಿಯವರ ಅನುಯಾಯಿಗಳು ಮಾತ್ರವಲ್ಲ ಗಾಂಧೀಜಿಯವರ ಪ್ರತಿರೂಪವೇ ಆಗಿದ್ದರು. ಮುಖಚಹರೆಯೂ ಕೂಡ ಗಾಂಧೀಜಿಯವರದೆ. ಅಂದಿನ ಕರ್ನಾಟಕದ ರಾಷ್ಟ್ರೀಯ ಮುಖಂಡರಾದ ದೇಶಪಾಂಡೆ ಗಂಗಾಧರರಾಯರು ಬಿಜಾಪುರದ ಒಂದು ಸಭೆಯಲ್ಲಿ ಅವರನ್ನು ಕರ್ನಾಟಕದ ಗಾಂಧೀ ಎಂದೇ ಕರೆದು ಗೌರವಿಸಿದರು. ಅನಂತರವಂತೂ ಮಂಜಪ್ಪನವರು ಕರ್ನಾಟಕದವರಿಗೆ ಮಾತ್ರವಲ್ಲ ಪರಪ್ರಾಂತದವರಿಗೂ ಕರ್ನಾಟಕ ಗಾಂಧಿಯೆಂದೇ ಪರಿಚಿತರಾದರು. ಇಷ್ಟಾಗಿಯೂ ಮಂಜಪ್ಪನವರು ಗಾಂಧೀಜಿಯವರ ಮಾತ್ರವಲ್ಲ ಯಾವ ರಾಷ್ಟ್ರೀಯ ಮುಖಂಡರ ಕುರುಡು ಹಿಂಬಾಲಕರಾಗಿ ಹಂಗಿಗರಾಗಿ ವರ್ತಿಸಲಿಲ್ಲ.

1923ರಂದು ಹರಿಹರ ಸ್ಟೇಶನ್ನಿನಿಂದ 3 ಮೈಲು ಅಂತರದಲ್ಲಿರುವ, ತುಂಗಭದ್ರಾನದಿ ತೀರದ ಬಾಂಮೋಡೆ ಬಾಳಪ್ಪನವರ ಜಮೀನಿನಲ್ಲಿ, ಸಾಬರಮತಿ ಆಶ್ರಮದ ಮಾದರಿ ಯಲ್ಲಿಯೇ ಸತ್ಯಾಗ್ರಹಾಶ್ರಮ ಹುಟ್ಟಿಕೊಂಡಿತು. ಸತ್ಯಾಗ್ರಹ ತತ್ವಗಳ ಪ್ರಸಾರ ಅವರ ಗುರಿಯಾಗಿತ್ತು. ಅಂದಿನಿಂದ ಆಶ್ರಮವಾಸಿಗಳಾದ ಮಂಜಪ್ಪನವರ ಸಂನ್ಯಾಸ ಜೀವನ ಇನ್ನೂ ಹೆಚ್ಚು ಕಟ್ಟುನಿಟ್ಟಿನದಾಯಿತು. ಅಂಗಿ, ಟೊಪ್ಪಿಗೆ, ಜೋಡುಗಳನ್ನು ಬಿಟ್ಟರು. ದೆಳ್ಳಿಯ ಲಿಂಗದ ಕಾಯಿಯ ಬದಲು ಗಂಧದ ಕರಡಿಗೆ ಬಂದಿತು. ಭಜನೆಗೆ ಒಂದು ಏಕತಾರಿ; ಮರಾಠಿ, ಹಿಂದಿ, ಕನ್ನಡ, ಇಂಗ್ಲಿಷ – ಒಟ್ಟು 179 ಪುಸ್ತಕಗಳ ಒಂದು ಸಣ್ಣ ಗ್ರಂಥಾಲಯವೂ ರೂಪಗೊಂಡಿತು.

ಆಶ್ರಮದ ಉದ್ದೇಶ ಈಡೇರುವ ಲಕ್ಷಣಗಳು ಕಂಡುಬರಹತ್ತಿದವು. ಆದರೆ ಅಲ್ಲಿಯ ಸರಳ–ಸಾತ್ವಿಕ–ಸ್ವಾವಲಂಬನ ಜೀವನಕ್ಕೆ , ಸಂಯಮದ ಬದುಕಿಗೆ ಮಂಜಪ್ಪನವರನ್ನುಳಿದು ಬೇರೆಯವರಿಗೆ ಹೊಂದಿಕೊಳ್ಳುವುದು ಸಾಧ್ಯವಾಗಲಿಲ್ಲ. ಹರಿಹರದಿಂದ ಬಂದ ತರುಣರ ಉತ್ಸಾಹ ಕೊನೆತನಕ ತಾಳಿಕೆ ಬರಲಿಲ್ಲ. ಆದರೂ ಮಂಜಪ್ಪನವರು ನಿರಾಶರಾಗಲಿಲ್ಲ. ಅವರ ಮನೋಧರ್ಮಕ್ಕೆ ಆಶ್ರಮದ ಶಾಂತ-ಪ್ರಶಾಂತ ವಾತಾವರಣ ಅಪ್ಯಾಯಮಾನವೆನಿಸಿತು. ಅಲ್ಲಿಯ ಬದುಕು ನೆಮ್ಮದಿಯನ್ನು ತಂದಿತು.

'ಧನುರ್ಧಾರಿ' ನಿಂತುಹೋದದ್ದರಿಂದ, ಸಮಾಜ ಸುಧಾರಣೆಗೆ ಗ್ರಂಥರಚನೆಯನ್ನು ಉಪಯುಕ್ತ ಮಾಧ್ಯಮವನ್ನಾಗಿ ಸ್ವೀಕರಿಸಿದರು. ಸಾಮಾಜಿಕತೆ ಹಾಗೂ ರಾಷ್ಟ್ರೀಯತೆಯ ಕೇಂದ್ರಪ್ರಜ್ಞೆಯನ್ನುಳ್ಳ ಅವರ ರಚನೆ ಜನಪ್ರಿಯವಾದ ಉಪಯುಕ್ತ ಸಾಹಿತ್ಯವಾಗಿತ್ತು. ಇಂಥ ಜನಪ್ರಿಯ ಸಾಹಿತ್ಯ ರಚನೆಯ ಮೂಲಕ ಸತ್ಯಾಗ್ರಹದ ತತ್ವಗಳನ್ನು ಬಸವತತ್ವಗಳನ್ನು ಪ್ರಚಾರಗೊಳಿಸುವದು ಅವರ ಉದ್ದೇಶವಾಗಿತ್ತು. ಅದರಿಂದಾಗಿ ಸತ್ಯಾಗ್ರಹ, ಬ್ರಹ್ಮಚರ್ಯ, ಅಹಿಂಸೆ, ಖಾದಿ ಇತ್ಯಾದಿ ಸರಳ ಹಾಗೂ ತಿಳಿಯಾದ ಚಿಕ್ಕಚಿಕ್ಕಗ್ರಂಥಗಳು ಮೂಡಿಬಂದವು. ಇಂಥ ಗ್ರಂಥ ಪ್ರಕಟನೆಗಾಗಿ ಮಠಾಧೀಶರಿಂದ, ಸಮಾಜ ಮುಖಂಡರಿಂದ ಆರ್ಥಿಕ ನೆರವೂ ದೊರೆಯಿತು. ಇದರಿಂದಾಗಿಯೇ 1915 ರಿಂದ 1923 ರ ಅವಧಿಯಲ್ಲಿ ಸುಮಾರು 33 ಸಾವಿರಕ್ಕೂ ಹೆಚ್ಚು ಪ್ರತಿಗಳನ್ನು ಪ್ರಕಟಿಸಿದರು. ಗ್ರಂಥ ಪ್ರಕಟನೆಯೇ ಅಲ್ಲದೆ ಆಶ್ರಮದ ಸುತ್ತಮುತ್ತಲಿನ ಹಳ್ಳಿಗಳಿಗೆ ಭೆಟ್ಟಿಯನ್ನಿತ್ತು ಹಿತಚಿಂತನೆಯನ್ನು ನಡೆಸುವದು, ಏಕತಾರಿಯನ್ನು ಬಾರಿಸುತ್ತ ಸತ್ಯಾಗ್ರಹ ಪದಗಳನ್ನು ಪ್ರಚಾರ ಮಾಡುವುದು – ಇವೇ ಮೊದಲಾದವುಗಳು ಅವರ ಆಶ್ರಮದ ಕಾರ್ಯಕ್ರಮಗಳಲ್ಲಿ ಸೇರಿಹೋಗಿದ್ದವು.

ಹೀಗೆ ಪ್ರಕೃತಿಯ ಮಧ್ಯದಲ್ಲಿ ನೆಮ್ಮದಿಯಿಂದ ಋಷಿಸದೃಶ ಬದುಕನ್ನು ಬದುಕುತ್ತಿದ್ದಾಗಲೇ ಅನಿರೀಕ್ಷಿತವಾಗಿ ಅಮಲೇರಿದ ಪ್ರಕೃತಿಯ ಆಕ್ರಮಣಕ್ಕೆ ಆಶ್ರಮವೇ ತತ್ತರಿಸುವಂತಾಯಿತು. ವಿಪರೀತ ಮಳೆಯಿಂದಾಗಿ ಹೊಳೆ ಹುಚ್ಚೆದ್ದು ಏರಿಬಂದಿತು. ಆಶ್ರಮವೆಲ್ಲ ಸೋರಿ ನೆನೆದು ಹೋಯಿತು. ನಾಲ್ಕು ಅಡಿಯ ಸ್ಥಳದಲ್ಲಿ, ಕೈಯಲ್ಲಿ ಜೀವಹಿಡಿದುಕೊಂಡು ಮುಪ್ಪಿನ ತಾಯಿಯೊಂದಿಗೆ ರಾತ್ರಿ ಕಳೆಯಬೇಕಾಯಿತು. ಬೆಳಗು ಹರಿದೊಡನೆಯೇ ಬಾಳಪ್ಪನವರ ಹತ್ತಿರ ಹೋಗಿ ಚಕ್ಕಡಿಯನ್ನು ತಂದು ಪಡೆದ ಪುಸ್ತಕಗಳನ್ನು ಹಾಗೂ ಪಡೆದ ತಾಯಿಯನ್ನು ಕುತ್ತಿನಿಂದ ಪಾರುಮಾಡಿದರು. ಒಂದೇ ಒಂದು ಗಂಟೆ ತಡವಾಗಿದ್ದರೆ ದೊಡ್ಡ ಅನಾಹುತಕ್ಕೀಡಾಗದೇಕಾಗುತ್ತಿತ್ತು. ಮೇಲಿಂದ ಮೇಲೆ ಸಂಭವಿಸುವ ಇಂಥ ವಿಪತ್ತಿನಿಂದಾಗಿ ಅದು ಆಶ್ರಮಕ್ಕೆ ಉಚಿತವಾದ ಸ್ಥಳವಲ್ಲವೆಂಬ ನಿರ್ಧಾರಕ್ಕೆ ಬರಬೇಕಾಯಿತು. ಅದರೊಂದಿಗೆ ಸ್ವಯಂ ಸ್ಫೂರ್ತಿಯಿಂದ ಆಶ್ರಮಜೀವನವನ್ನು ಒಪ್ಪಿಕೊಂಡು ಮುಂದೆ ಬರುವವರ ಸಂಖ್ಯೆಯೂ ನಿಂತುಹೋಯಿತು. ಒಂದು ಅರ್ಥದಲ್ಲಿ ಆಶ್ರಮ ನಿಷ್ಕ್ರಿಯವಾಗಹತ್ತಿತು. ಆದ್ದರಿಂದ ಆಶ್ರಮವನ್ನೇ ಗಟ್ಟಿಯಾಗಿ ನಂಬಿಕೊಂಡು ಕುಳಿತುಕೊಳ್ಳದೆ ತಾವೇ ಒಂದು ಸಂಚಾರಿ ಆಶ್ರಮವಾಗಿ, ಜಂಗಮಸಂಸ್ಥೆಯಾಗಿ ಸತ್ಯಾಗ್ರಹ ತತ್ವಗಳ ಪ್ರಚಾರಕ್ಕೆ ತೊಡಗಿದರು.

1923ರಲ್ಲಿ ಹಾವೇರಿಯಲ್ಲಿ ಸೇರಿದ ಧಾರವಾಡ ಜಿಲ್ಲೆಯ ರಾಷ್ಟ್ರೀಯ ಸಭೆಗೆ ತಾವು ಅದರ ಸದಸ್ಯರಾಗಿರದಿದ್ದರೂ, ರಂಗನಾಥರಾವ್ ದಿವಾಕರ ಅವರ ಅತಿಯಾದ ಆಗ್ರಹದಿಂದಾಗಿ ಅಧ್ಯಕ್ಷರಾಗಿ ರಾಷ್ಟ್ರೀಯತೆಯನ್ನು ಕುರಿತು ಉದ್ಬೋಧಕ ಭಾಷಣ ಮಾಡಿದರು.

1924ರಲ್ಲಿ ಸಾಬರಮತಿಯ ಆಶ್ರಮದಲ್ಲಿ ಗಾಂಧಿಯವರೊಡನೆ ಕೆಲಕಾಲ ಕಳೆದರು. ಅದು ಅವರ ಜೀವನದಲ್ಲಿಯೇ ಅತ್ಯಂತ ಅವಿಸ್ಮರಣೀಯ ಸನ್ನಿವೇಶ, ಮಾನವೀಯ ಕಳಕಳಿಯುಳ್ಳ ದೈವಾಂಶಸಂಭೂತನೇ ಎನಿಸಿದ ಮಹಾದಾರ್ಶನಿಕನೊಬ್ಬನನ್ನು ಪ್ರತ್ಯಕ್ಷವಾಗಿ ದರ್ಶಿಸಿದ ಸಾರ್ಥಕತೆ ಅವರದಾಗಿತ್ತು. ಬಡೋದೆಯ 'ಕಲಾಭವನ' ದಂಥ ಕೈಗಾರಿಕೆಯ ಶಿಕ್ಷಣಾಲಯದಿಂದ ಪ್ರಭಾವಿತರಾಗಿ ಅಂಥದೇ ಒಂದು ಶಿಕ್ಷಣಾಲಯವನ್ನು ಸ್ಥಾಪಿಸುವ ಸಂಕಲ್ಪ ಹೊಂದಿದರು.

1925ರಲ್ಲಿ ತಾಯಿ ದೈವಾಧೀನರಾದರು. ಮಂಜಪ್ಪನವರ ಸಂನ್ಯಾಸಿಯ ಬದುಕು, ಅವರು ಪಡುವ ಕಷ್ಟ, ಅನುಭವಿಸುವ ಯಾತನೆಗಳನ್ನು ಕಂಡು ಆ ಮುಪ್ಪಿನ ಜೀವ ಅನುಭವಿಸುತ್ತಿದ್ದ ಕೊರಗು–ಖಿನ್ನತೆಯನ್ನು ಸಹಿಸಲಾಗದ ಮಂಜಪ್ಪನವರು ಬಯಸುತ್ತಿದ್ದುದೂ ಅದೇ ಆಗಿತ್ತು. ಅವಳ ಸಾವನ್ನು ದೈವೀ ಅನುಗ್ರಹವೆಂದೇ ಭಾವಿಸಿದರು. ತಾಯಿಯ ನೆಪದಲ್ಲಿದ್ದ ಇದ್ದ ಒಂದು ಸಂಸಾರಿಕ ಬಂಧನವೂ ಕಳಚಿಹೋದಂತಾಯಿತು.

ತಮ್ಮ ಬದುಕಿನಲ್ಲಿ ಎಷ್ಟೆಲ್ಲ ನಂಜನ್ನು ಉಂಡ ಮಂಜಪ್ಪನವರು ಲಿಂಗಾಯತ ಸಮಾಜದಲ್ಲಿಯ ಒಳಪಂಗಡ, ಒಳಜಾತಿಗಳಿಂದ ಗಾಸಿಗೊಂಡಷ್ಟು ಇನ್ನಾವುದರಿಂದಲೂ ಗಾಸಿಗೊಂಡಿರಲಿಲ್ಲ. ಅವರಿಂದಾಗಿ ಲಿಂಗಾಯತ ಸಮಾಜದ ಒಳಪಂಗಡಗಳನ್ನೇ ಅಳಸಿಹಾಕುವ, ಆಮೂಲಕ ಬಸವಣ್ಣವನರ ಕಲ್ಪನೆಯ ಆದರ್ಶ ಸಮಾಜ ನಿರ್ಮಾಣಕ್ಕಾಗಿ ಹೋರಾಡಲು ಧೀರಸಂಕಲ್ಪ ಮಾಡಿದರು. ಅದು ಅವರ ಮಿತಿಗೆ ಅಳವಡುವ ಪ್ರಾಮಾಣಿಕ ರಾಷ್ಟ್ರ ಸೇವೆಯೂ ಆಗಿತ್ತು. ಅದಕ್ಕಾಗಿ ಲಿಂಗಾಯತ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣದ ಮೇರೆಗೆ ಶಿಕ್ಷಣ ಕೊಡದೇಕೆಂಬ ಯೋಜನೆ ಕ್ರಿಯಾಶೀಲವಾಗಿ ಬಿಚ್ಚಿಕೊಂಡಿತು. ಅಥಣಿಗೆ ಹೋದಾಗ ಅವರಾದಿ ಪೂಜ್ಯಶ್ರೀ ಪಟ್ಟಾಧ್ಯಕರಿಂದ ಮತ್ತೆ ಲಘುದೀಕ್ಷೆಯನ್ನು ಹೊಂದಿದರು. ಒಳಪಂಗಡಗಳ ನಿರ್ಮೂಲನದ ಸರಳ ಉಪಾಯವೆಂದು ಸ್ತ್ರೀಪುರುಷರಿಗೆಲ್ಲ ಲಘುದೀಕ್ಷೆಯನ್ನು ಕೊಡಿಸಿದರು. ದುಶ್ಚಟಗಳ ದುಷ್ಪರಿಣಾಮವನ್ನು ಕರುಳು ಕರಗುವಂತೆ ತಿಳಿಸಿ ಹೇಳಿದರು. ಅದರ ಪರಿಣಾಮವಾಗಿ ಎಷ್ಟೋ ಜನರು ತಂಬಾಕು, ಬೀಡಿ, ಚಹಾ, ಮದ್ಯಪಾನ, ಜೂಜು ಇತ್ಯಾದಿಗಳನ್ನು ಮನಃಸಾಕ್ಷಿಯಾಗಿ ವರ್ಜಿಸಿದರು. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿದ ಒಬ್ಬ ವ್ಯಕ್ತಿ ನಮ್ಮ ರಾಷ್ಟ್ರದ ಬದುಕಿನ ಬೆನ್ನುಹುರಿಯಾಗಿರುವ ಗ್ರಾಮೀಣ ಪರಿಸರದ ದಾರುಣ ಅವಸ್ಥೆಯನ್ನು ಅರಿತುಕೊಳ್ಳಬೇಕಾದ ಅಗತ್ಯವನ್ನು ಮನಗಂಡಿದ್ದರು. ಅಂತೆಯೇ ಹಳ್ಳಿಯ ಹೊಕ್ಕುಬಳಕೆಯನ್ನಿಟ್ಟುಕೊಂಡ ಮಂಜಪ್ಪನವರು ಆ ಹಳ್ಳಿಗರ ದೃಷ್ಟಿಯಲ್ಲಿ ಆಧುನಿಕ ಬಸವಣ್ಣ ಮತ್ತು ತಮ್ಮ ಊರಿನ ಗಾಂಧಿಯಾಗಿದ್ದರು.

ಹೀಗೆ ಕರ್ನಾಟಕದ ಹಳ್ಳಿಗಳ ಸಂಚಾರದಲ್ಲಿ ತೊಡಗಿದ ಸಂದರ್ಭದಲ್ಲಿಯೇ

ಹರಿಹರದ ಸತ್ಯಾಗ್ರಹಾಶ್ರಮ ಅವಸಾನ ಸ್ಥಿತಿಯನ್ನು ಅನುಭವಿಸುತ್ತಿತ್ತು. ಕಾರಣ ಬೇರೆಡೆಯಲ್ಲಿ ಹೊಸದೊಂದು ಆಶ್ರಮವನ್ನು ಸ್ಥಾಪಿಸುವ ಯೋಜನೆಯಲ್ಲಿ ತೊಡಗಿದರು. ಶ್ರೀ ಬಂಥನಾಳ ಶಿವಯೋಗಿಗಳ ಸಲಹೆ ಹಾಗೂ ಆಶೀರ್ವಾದದಿಂದ ವಿಜಾಪುರ ಜಿಲ್ಲೆಯ, ಕೃಷ್ಣಾನದಿತೀರದಲ್ಲಿರುವ, ಆಲಮಟ್ಟಿಯಲ್ಲಿ ವೀರಶೈವ ವಿದ್ಯಾಲಯ ಸ್ಥಾಪನೆಗೆ ಚಾಲನೆ ದೊರೆಯಿತು.

ಈಗಾಗಲೇ ಮಂಜಪ್ಪನವರು ಜಗತ್ತನ್ನು ಸಾಕಷ್ಟು ಕಂಡವರಾಗಿದ್ದರು. ಸಾಕಷ್ಟು ಅನುಭವವನ್ನುಂಡ ಪರಿಪಕ್ವ ಪರಿಣತ ವ್ಯಕ್ತಿಗಳಾಗಿದ್ದರು. ಅವರಲ್ಲೀಗ ತರುಣನೊಬ್ಬನ ಬಿಸಿಯಾದ ಬೀಸು ಉತ್ಸಾಹವಿರಲಿಲ್ಲ. ಭ್ರಮೆ ಹಾಗೂ ವಾಸ್ತವಗಳ ಅಂತರವನ್ನು ಅವರ ಅನುಭವ ತಿಳಿಸಿಕೊಟ್ಟಿತ್ತು. ವೀರಶೈವ ವಿದ್ಯಾಲಯವನ್ನು ಸ್ಥಾಪಿಸುವ ಮೊದಲು ಪೂರ್ವಭಾವಿಯಾಗಿ ಅದರ ಆಗು- ಹೋಗುಗಳನ್ನು ಕುರಿತು ಶ್ರೀ ಬಂಥನಾಳ ಶಿವಯೋಗಿಗಳನ್ನು ಮೊದಲುಗೊಂಡು ಸುತ್ತುಮುತ್ತಲಿನ ಸಮಾಜದ ಮುಖಂಡರೊಡನೆ ಗಂಭೀರ ಆಪ್ತಾಲೋಚನೆಗೆ ತೊಡಗಿದರು. 1926 ರಂದು ವೀರಶೈವ ತರುಣ ಸಂಘದವರನ್ನೊಳಗೊಂಡು ಒಂದು ಆಲೋಚನಾ ಸಭೆಯನ್ನು ನಡೆಸಿದರು. ಅದರೊಂದಿಗೆ ಗಾಂಧೀಜಿಯವರ ಸಲಹೆಯನ್ನೂ ಪಡೆದದ್ದಾಯಿತು. ಸಭೆಯಲ್ಲಿಯೇ ಅದರ ಆರ್ಥಿಕ ವಿಚಾರವನ್ನು ಮತ್ತು ಅದರ ಆಶಯ-ಧ್ಯೇಯ-ಧೋರಣೆಗಳನ್ನು ಅದರ ಕಾರ್ಯವ್ಯಾಪ್ತಿಯನ್ನು ಅಷ್ಟೇ ಅಲ್ಲ ಅದರ ಪದಾಧಿಕಾರಿಗಳನ್ನೂ ಕುರಿತು ಸಮಾಲೋಚಿಸಲಾಯಿತು. ಜೊತೆಗೆ ನಿರೀಕ್ಷೆಗೆ ತಕ್ಕಂತೆ ಆರ್ಥಿಕ ನೆರವೂ ದೊರೆಯಿತು. ಇವೇ ಮೊದಲಾದ ಪೂರ್ವಸಿದ್ಧತೆಗಳೊಂದಿಗೆ 13-5-1927ರಂದು ವೀರಶೈವ ವಿದ್ಯಾಲಯದ ಸ್ಥಾಪನೆಯಾಯಿತು. ವೀರಶೈವ ತತ್ವಜ್ಞಾನದ ದ್ಯೋತಕವಾದ ಷಟ್‌ಕೋನವನ್ನೇ ವಿದ್ಯಾಲಯದ ಸಂಕೇತವನ್ನಾಗಿ ಸ್ವೀಕರಿಸಿ ಅದರ ಮಧ್ಯದಲ್ಲಿ 'ವಿದ್ಯಯಾಮೃತ ಮಶ್ನುತೇ' ಎಂಬ ಉಪನಿಷತ್ ವಾಕ್ಯವನ್ನು ವಿದ್ಯಾಲಯದ ಧ್ಯೇಯ ಸೂಚಕವಾಗಿ ಇಡಲಾಯಿತು.

ವೀರಶೈವ ವಿದ್ಯಾಲಯದ ಅಡಿಯಲ್ಲಿ ಹಲವಾರು ಪ್ರಮುಖ ಹಾಗೂ ಮೌಲಿಕ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಪ್ರಾಚೀನ ಗುರುಕುಲಗಳ ಪದ್ಧತಿಯ ಮೇರೆಗೆ ನಾನಾ ಕಡೆಗಳಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವದು. ತರುಣರು ನಾನಾಭಾಷೆಗಳೊಂದಿಗೆ ವ್ಯಾಪಾರ, ಕೈಗಾರಿಕೆಗಳನ್ನು ಕಲಿತು ಸ್ವತಂತ್ರ ಜೀವನವನ್ನು ರೂಪಿಸಿಕೊಳ್ಳುವಂತೆ ಪ್ರಚೋದಿಸುವುದು, ಮತ್ತು ಅದಕ್ಕೆ ಸಮರ್ಥರನ್ನಾಗಿಸುವದು, ಉಚ್ಚಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗುವ ಅವಕಾಶ ಕಲ್ಪಿಸುವದು, ಧರ್ಮೋಪದೇಶಕರನ್ನು ತಯಾರಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಧಾರ್ಮಿಕ-ನೈತಿಕ ಮತ್ತು ಶೈಕ್ಷಣಿಕ ವಾತಾವರಣವನ್ನು ಮೂಡಿಸಲು ಪ್ರೇರೇಪಿಸುವದು, ಸಂಶೋಧನೆಗಾಗಿ ಗ್ರಂಥಭಂಡಾರವನ್ನು ಹಾಗೂ ಸ್ವತಂತ್ರ

ಮುದ್ರಣಾಲಯವನ್ನು ಸ್ಥಾಪಿಸುವದು, ಅಲ್ಲದೆ ವೀರಶೈವೇತರ ವಿದ್ಯಾರ್ಥಿಗಳಿಗೂ ಶಿಕ್ಷಣ ದೊರೆಯುವಂತೆ ಮಾಡುವದು – ಇವೇ ಮೊದಲಾದವುಗಳು ಅವುಗಳಲ್ಲಿ ಕೆಲವು. ಒಟ್ಟಿನಲ್ಲಿ ಈ ವಿದ್ಯಾಲಯ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಮ್ಮ ನಾಡಿಗೆ ಕೊಟ್ಟ ಕಾಣಿಕೆ ಮೌಲಿಕವೂ ಹೌದು, ಚಿರಸ್ಮರಣೀಯವೂ ಹೌದು.

ವೀರಶೈವ ವಿದ್ಯಾಲಯದ ಆಶ್ರಯದಲ್ಲಿ ಹಮ್ಮಿಕೊಂಡ ಯಶಸ್ವೀ ಯೋಜನೆಗಳೊಂದಿಗೆ ಮಂಜಪ್ಪನವರು ಇದೇ ಕಾಲಾವಧಿಯಲ್ಲಿ ಗೈದ ಇತರ ಸಾಮಾಜಿಕ ಚಟುವಟಿಕೆಗಳಿಗೆ ಲೆಕ್ಕವಿಲ್ಲ. ಕರ್ನಾಟಕದ ಸುಮಾರು ಎರಡುನೂರು ಸ್ಥಳಗಳಲ್ಲಿ ಸಂಚರಿಸಿ ಧಾರ್ಮಿಕ, ಆರ್ಥಿಕ ವಿಷಯ ಕುರಿತು ಭಾಷಣ ಮಾಡಿರಬೇಕು. 1930ರಲ್ಲಿ ಹಾವೇರಿಯಲ್ಲಿ ಜರುಗಿದ ವೀರಶೈವ ಮೊದಲ ರಾಜಕೀಯ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ, ವೀರಶೈವರು ರಾಷ್ಟ್ರೀಯ ಸಭೆಯಲ್ಲಿ ಸೇರಿ ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕರೆಕೊಟ್ಟರು. 1931ರಲ್ಲಿ 'ಅಖಿಲ ವೀರಶೈವ ಖಾದಿ ಭಂಡಾರ' ಸಂಘಗಳನ್ನು ನಾಡಿನ ಬೇರೆ ಬೇರೆ ಎಡೆಗಳಲ್ಲಿ ಏರ್ಪಡಿಸಿದರು. ಅವರ ಪ್ರಯತ್ನದಿಂದಾಗಿಯೇ 1932 ರಲ್ಲಿ ವೀರಶೈವ ತತ್ವಪ್ರಚಾರಕ ಸಂಘ ಹುಟ್ಟಿಕೊಂಡಿತು. ಹೀಗೆ ಹೊಸ ಸಮಾಜವನ್ನು ಕಟ್ಟುವದಕ್ಕೆ ಪರಿಷ್ಕರಿಸುವದಕ್ಕೆ ತಮ್ಮೆಲ್ಲ ಸಾಧ್ಯತೆಗಳೊಂದಿಗೆ ಉದ್ದಕ್ಕೂ ಹೆಣಗಾಡಿದರು.

ಮಂಜಪ್ಪನವರ 61ನೆಯ ಹುಟ್ಟು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಅವರ ಹಿತಚಿಂತಕರು, ನಾಡಿನ ಪ್ರಮುಖರು ಒಮ್ಮನಸ್ಸಿನಿಂದ ಮುಂದಾದರು. ನಾಡಿನ ನಾನಾಭಾಗಗಳಿಂದ ಹಣವನ್ನು ಸಂಗ್ರಹಿಸಿ ಹಮ್ಮಿಣಿ ಅರ್ಪಿಸುವ ಮತ್ತು ಸಂಭಾವನಾ ಗ್ರಂಥವನ್ನು ಪ್ರಕಟಿಸುವ ಇತ್ಯಾದಿ ಯೋಜನೆಗಳನ್ನು ಹಮ್ಮಿಕೊಂಡರು. ಆದರೆ ಮಂಜಪ್ಪನವರು ಹಾಕಿಕೊಂಡ ಯೋಜನೆ ಇವಕ್ಕಿಂತಲೂ ಹೆಚ್ಚು ಭಿನ್ನವಾಗಿತ್ತು, ಹೆಚ್ಚು ವಿಶಾಲವಾಗಿತ್ತು. ಮಂಜಪ್ಪನವರು ತಮ್ಮ ಜನ್ಮದಿನದಂದು ಆರಂಭಿಸುವ ಕಾರ್ಯಕ್ರಮಕ್ಕೆ ತಾವೇ ಸ್ವತಃ ಹಣ ಸಂಗ್ರಹಿಸುವದು ಉಚಿತವೆಂದು ಭಾವಿಸಿದರು. ಸಂಭಾವನೆಯ ಗ್ರಂಥವೂ ಅವರಿಗೆ ಬೇಕಾಗಿರಲಿಲ್ಲ. ಆದರೆ ಆರ್ಥಿಕ ಅಭಾವದಿಂದ ಪ್ರಕಟವಾಗದೇ ಉಳಿದ ತಮ್ಮ ಅತ್ಯಂತ ಪರಿಶ್ರಮದ ಹಾಗೂ ಉತ್ಕೃಷ್ಟ ಗ್ರಂಥವಾದ 'ಋಗ್ವೇದ ಸಾರ' ವನ್ನು ಪ್ರಕಟಿಸುವದು ಅವರ ಉತ್ಕಟ ಆಸೆಯಾಗಿತ್ತು. ನಾಡಿನ ಪ್ರತಿಭಾವಂತರಿಂದ ಬೇರೆ ಬೇರೆ ಭಾಷೆಗಳ ಉತ್ತಮ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವದು, ಈ ಎಲ್ಲ ಯೋಜನೆಗಳನ್ನು ಕಾರ್ಯಗತಗೊಳಿಸಲು 'ಪ್ರಗತಿಗ್ರಂಥ ಮಾಲೆ' ಎಂಬ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸುವದು ಇತ್ಯಾದಿ ಮಹತ್ತರ ಯೋಜನೆಗಳ ಕನಸು ಕಂಡಿದ್ದರು. ಆದರೆ ದುರ್ದೈವದ ಸಂಗತಿ: ಅವರ ಅನಾರೋಗ್ಯದಿಂದಾಗಿ 'ಪ್ರಗತಿಗ್ರಂಥಮಾಲೆ' ಹಾಗೂ 'ಋಗ್ವೇದಸಾರ' ದ ಪ್ರಕಟನೆಯಂಥ ಯೋಜನೆಗಳ ಕನಸುಗಳು ಕೊನೆಗೂ ಕನಸುಗಳಾಗಿಯೇ ಉಳಿದವು. ಪರಿಣಾಮ, 'ಋಗ್ವೇದ ಸಾರ' ಇಂದಿಗೂ ಅನುಪಲಬ್ಧ.

ಇಂಥ ಅವಿರತ ಪರಿಶ್ರಮ, ಜೀವನದುದ್ದಕ್ಕೂ ಅನುಭವಿಸುತ್ತ ಬಂದ ನಿರಾಶೆ, ಹತಾಶೆ, ಅಭಾವ, ಆಘಾತ, ಅನಾಹುತಗಳಿಂದ ಮತ್ತು ತಾವೇ ಸ್ವೀಕರಿಸಿದ ಅತಿ ನಿಷ್ಠುರದ ಕಠೋರ ಜೀವನ ಕ್ರಮ, ಸಮಾಜ--ರಾಷ್ಟ್ರದ ದಯನೀಯ ದುರವಸ್ಥೆಯನ್ನು ಕುರಿತು ಹಚ್ಚಿಕೊಂಡ ಕಳಕಳಿಯ ಕೊರಗು, ಇವೆಲ್ಲವುಗಳಿಂದ ಅವರ ವ್ಯಕ್ತಿತ್ವ ಪರಿಪುಷ್ಟಗೊಳ್ಳುತ್ತ ಹೋದರೂ ಅವರ ದೈಹಿಕ ಆರೋಗ್ಯ ಒಳಗೊಳಗೆ ಕುಸಿಯುತ್ತ ಹೋಗಿ ರಕ್ತದ ಒತ್ತಡ ಕಾಣಿಸಿಕೊಂಡಿತು. ಕೆಲವು ದಿನಗಳಲ್ಲಿ ಪಾರ್ಶ್ವರೋಗಕ್ಕೆ ತುತ್ತಾದರು. ಪುಣೆಯಲ್ಲಿ ನಾಲ್ಕು ತಿಂಗಳು ಇದ್ದು ಚಿಕಿತ್ಸೆಯನ್ನು ಪಡೆದದ್ದೂ ಆಯಿತು. ಮರಳಿ ಆಲಮಟ್ಟಿಗೆ ಬಂದು ಕಾಲು ಇಟ್ಟದ್ದೇ ತಡ, ತಮ್ಮ ಅನಾರೋಗ್ಯದಿಂದ ನಿಂತು ಹೋಗಿದ್ದ ಶರಣ ಸಂದೇಶವನ್ನು ಪುನರಾರಂಭಿಸುವ ತುಡಿತ. ಅವರ ಆರೋಗ್ಯ ದಿನದಿನಕ್ಕೆ ಕುಂದುತ್ತ ಹೋಯಿತು. ಅವರ ಹಿತಚಿಂತಕರು, ಅಭಿಮಾನಿಗಳು, ಶಿಷ್ಯರು, ಅನುಯಾಯಿಗಳು, ಬಂಧುಗಳು ನೆರೆದರು. ಕೊನೆಯ ಆಸೆಯನ್ನು ಕೇಳಲು ಕಾತರರಾಗಿದ್ದ ಅವರಿಗೆಲ್ಲ – "ವೀರರಾಗಿರಿ, ಧೀರರಾಗಿರಿ, ಪವಿತ್ರರಾಗಿರಿ, ಸ್ವತಂತ್ರರಾಷ್ಟ್ರದ ವೀರರಾಗಿರಿ, ಇದು ನನ್ನ ಕಡೆಯ ಮನವಿ" ಎಂದು ಉಸುರಿದರು. ತಮ್ಮ ಬದುಕಿನ ಸಾರ್ಥಕ್ಯವನ್ನು ನೆನೆಯುತ್ತ 1947 ಜನವರಿ 3 ರಂದು ಕೊನೆಯ ಉಸಿರನ್ನು ಎಳೆದರು. ವರ್ಗ–ಜಾತಿ –ಮತ–ಧರ್ಮಗಳ ಭೇದವಳಿದು ಬಂದ ಜನಸಮುದಾಯದ ಅಶ್ರುತರ್ಪಣದೊಂದಿಗೆ ಆಲಮಟ್ಟಿಯಲ್ಲಿ ಅವರ ಜೀವಿತದ ಕಾಲದಲ್ಲಿ ಅವರೇ ಗೊತ್ತುಪಡಿಸಿದ ಸ್ಥಳದಲ್ಲಿ ಅಂತ್ಯಸಂಸ್ಕಾರ ನಡೆಯಿತು.

●

# ಮಂಜಪ್ಪನವರ ಸಾಹಿತ್ಯ : ಸ್ವರೂಪ

ಮಂಜಪ್ಪನವರು, ನಮ್ಮ ರಾಷ್ಟ್ರದ ರಾಜಕೀಯ ಹಾಗು ಸಾಮಾಜಿಕ ವಿಶಿಷ್ಟ ಸಂದರ್ಭವೊಂದರ ಪರಿಸರದಲ್ಲಿ, ಅದರ ಎಲ್ಲ ಸಮಸ್ಯೆ-ಸವಾಲುಗಳಿಗೆ ಉತ್ತರವಾಗಿ ನಿಂತವರು. ಅಂದಿನ ಸಾಮಾಜಿಕ ಪೀಡೆಗಳಿಗೆ ಒಂದು ಪ್ರತಿರೋಧಕ ಶಕ್ತಿಯಾಗಿ ಕಾಣಿಸಿಕೊಂಡ ಕ್ರಿಯಾಶೀಲ ವ್ಯಕ್ತಿತ್ವ ಅವರದು. ಕರ್ನಾಟಕದ ಒಂದು ನಿರ್ದಿಷ್ಟ ಪ್ರಾದೇಶಿಕ ಮಿತಿಯಲ್ಲೇ ಆಗಲೊಲ್ಲದೇಕೆ, ಸಮಾಜದ ಶ್ರೇಯೋಭಿವೃದ್ಧಿ ಅವರ ಜೀವಿತದ ಬಹುಮುಖ್ಯ ಆಶಯವಾಗಿತ್ತು. ಮಂಜಪ್ಪನವರು ಸಾಹಿತ್ಯವನ್ನು ತಮ್ಮ ಸಾಧನೆಯ ಪರಿಣಾಮಕಾರಿಯಾದ ಸಶಕ್ತ ಮಾಧ್ಯಮವನ್ನಾಗಿ ಗುರುತಿಸಿದರು. ಅವರಿಗೆ ಅದು ಒಂದು ಪವಿತ್ರ ಕಾಯಕವೂ ಆಯಿತು; ಜ್ಞಾನದಾಸೋಹವೂ ಆಯಿತು.

ಮುಖ್ಯವಾಗಿ ರಾಷ್ಟ್ರೀಯ ಅದಮ್ಯ ಹಾಗೂ ಉತ್ಕಟ ಕಳಕಳಿಯುಳ್ಳ ಮಂಜಪ್ಪನವರಿಗೆ ಸಾಹಿತ್ಯ ರಚನೆ ಒಂದು ಪ್ರತಿಷ್ಠೆಯ, ವಿಲಾಸದ, ರಂಜನೆಯ ಪ್ರಕ್ರಿಯೆಯಾಗಿರಲಿಲ್ಲ. ಬದಲಾಗಿ ದ್ರಷ್ಟಾರನೊಬ್ಬ ತಾನು ಕಂಡುಕೊಂಡ ದರ್ಶನ, ಮೌಲ್ಯಗಳ ಸಂವಹನೆಗೆ ಸಾರ್ಥಕ ಮಾಧ್ಯಮವಾಯಿತು. ಹೀಗೆ ಅವರ ಸಾಹಿತ್ಯ ರಚನೆ ತನ್ನ ವಿಶಿಷ್ಟ ಧೋರಣೆಯಿಂದಾಗಿ ತನ್ನ ಸಮಕಾಲೀನ ಸೃಜನಶೀಲ ಸಾಹಿತ್ಯ ಕೃತಿಗಳಿಗಿಂತ ಪ್ರತ್ಯೇಕ ಅಸ್ತಿತ್ವವನ್ನು ಪಡೆದುಕೊಂಡಿತು. ಹೊಸ ಸಮಾಜದ ರಚನೆಯ ದೃಷ್ಟಿಯಿಂದ ಅವರ ಸಾಹಿತ್ಯ ತನ್ನ ಉಪಯುಕ್ತತೆಯನ್ನು, ಜವಾಬ್ದಾರಿಯ ಜೊತೆಗೆ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿತು. ಮುಖ್ಯವಾಗಿ ಅಂದಿನ ರಾಷ್ಟ್ರೀಯ ಪುನರುತ್ಥಾನದ ಸಂದರ್ಭದಲ್ಲಿ, ಅಂದಿನ ಸುಶಿಕ್ಷಿತ ಜನಾಂಗಕ್ಕಿಂತ ಭಿನ್ನವಾದ ಸಾಂಸ್ಕೃತಿಕ ಸ್ತರದಲ್ಲಿ, ಅತ್ಯಂತ ಕನಿಷ್ಠ ಬದುಕನ್ನು ಬದುಕುತ್ತಿದ್ದ ಗ್ರಾಮೀಣ ಪರಿಸರದ ಜನಾಂಗಕ್ಕೆ ಮೊಟ್ಟಮೊದಲಿಗೆ ಗಾಢವಾಗಿ ಅಷ್ಟೇ ಪ್ರಾಮಾಣಿಕವಾಗಿ ಸ್ಪಂದಿಸಿದ ಶ್ರೇಯಸ್ಸು ಅವರ ಸಾಹಿತ್ಯಕ್ಕೆ ಸಲ್ಲುವಂತಹದು. ಹಾಗಾಗಿ ಗ್ರಾಮೀಣ ಜನಾಂಗದ ಬದುಕಿನ ಒಳಪದರುಗಳು ಅದರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಮತ್ತು ಕೌಟುಂಬಿಕ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು–ಇವೆಲ್ಲ ಮಂಜಪ್ಪನವರ ಸಾಹಿತ್ಯದ ಮೂಲಪ್ರೇರಣೆ ಹಾಗೂ ವಸ್ತುಗಳಾದವು. ಸಾಮಾಜಿಕ ಉತ್ಕಟ ಕಳಕಳಿಯಿಂದಾಗಿಯೇ ಜೀವನದುದ್ದಕ್ಕೂ ಜಂಗಮಜೀವಿಯಾಗಿದ್ದ ಮಂಜಪ್ಪನವರಿಗೆ ಇಂಥ ಪರಿಸರದ ನೇರ–ನಿಕಟ ಸಂಪರ್ಕವಿದ್ದುದರಿಂದ, ಅವರ ಸಂವೇದನೆಗಳಲ್ಲಿ ಕೃತಕತೆ ಇರಲಿಲ್ಲ. ಅದರಿಂದಾಗಿ ಅವರ ಸಾಹಿತ್ಯ ಹೆಚ್ಚು ಜನಪರವಾಯಿತು.

ಇಂಥ ಸಾಮಾಜಿಕ ವಿಶಿಷ್ಟ ಬದ್ಧತೆಯಿಂದಾಗಿಯೇ ಸಾಹಿತ್ಯ ಹಾಗೂ ಅದರ

ಮೌಲಿಕತೆಯನ್ನು ಕುರಿತ ಅವರ ಪರಿಕಲ್ಪನೆಯೂ ಬೇರೆಯಾಗಿತ್ತು.

ಮಂಜಪ್ಪನವರು ನವೋದಯ ಸಾಹಿತ್ಯದ ಚಳುವಳಿಯ ಆರಂಭದ ಘಟ್ಟದಿಂದಲೇ ಒಬ್ಬ ಬರಹಗಾರರಾಗಿ ಕ್ರಿಯಾಶೀಲರಾದರೂ, ಅವರ ಭರಾಟೆಯ ದಿನಮಾನಗಳಲ್ಲಿಯೇ ಒಬ್ಬ ಗಮನಾರ್ಹ ಸಾಹಿತಿಗಳಾಗಿ ಬೆಳೆದರಾದರೂ, ಅವರ ಮೇಲೆ ಪ್ರಭಾವ ಬೀರಿದ್ದು ಶರಣಸಾಹಿತ್ಯ ಹಾಗೂ ಗಾಂಧೀಸಾಹಿತ್ಯವೇ ಹೊರತು ನವೋದಯ ಸಾಹಿತ್ಯವಲ್ಲ. ಸ್ವರೂಪದ ದೃಷ್ಟಿಯಿಂದ ಮಾತ್ರವಲ್ಲ ವಸ್ತು–ಆಶಯಗಳ ಹಿನ್ನೆಲೆಯಲ್ಲೂ ಈ ಮಾತು ಅನ್ವಯಿಸುವಂತಹುದು. ಮಂಜಪ್ಪನವರು ಗಾಂಧೀಜಿಯವರ ವ್ಯಕ್ತಿತ್ವಕ್ಕೆ ಸಮಾನವಾದ ವ್ಯಕ್ತಿತ್ವವನ್ನು ಹೊಂದಿದ್ದು ಕೂಡ ಇದಕ್ಕೆ ಒಂದು ಮುಖ್ಯ ಕಾರಣ. ಹಾಗೆ ನೋಡಿದರೆ ಮಂಜಪ್ಪನವರ ವ್ಯಕ್ತಿತ್ವ ರೂಪಗೊಂಡದ್ದು ಕೂಡ ಬಸವ ಹಾಗೂ ಗಾಂಧೀಯವರ ವ್ಯಕ್ತಿತ್ವದ ಪ್ರಭಾವ ವಲಯದಲ್ಲಿಯೆ. ಆದ್ದರಿಂದ ಮಂಜಪ್ಪನವರ ಸಾಹಿತ್ಯ ಅದೇ ಮಾರ್ಗವನ್ನು ಅನುಸರಿಸಿದ್ದು ಪ್ರಜ್ಞಾಪೂರ್ವಕವಾಗಿತ್ತೇ ಹೊರತು ಕೇವಲ ಆಕಸ್ಮಿಕವಾಗಿರಲಿಲ್ಲ. ಮಂಜಪ್ಪನವರ ಅಭಿವ್ಯಕ್ತಿಯ ಮೂಲಭೂತ ಆಶಯವೂ ಕೂಡ ಶರಣರ ಅಭಿವ್ಯಕ್ತಿಯಂತೆ ಸಾಮಾಜಿಕವಾಗಿತ್ತೇ ಹೊರತು 'ಸಾಹಿತ್ಯ ಸೃಷ್ಟಿ'ಯಾಗಿರಲಿಲ್ಲ. ಸಾಹಿತ್ಯಿಕತೆ ಅಥವಾ ಸೃಜನಾತ್ಮಕತೆ ಏನಿದ್ದರೂ ಅವರ ಕಾರ್ಯಾಚರಣೆಯ ಮೂಲಭೂತ ಧೋರಣೆಯ ಪೂರಕ ಶಕ್ತಿ ಮಾತ್ರ. ಇದರಿಂದಾಗಿ ಮಂಜಪ್ಪನವರ ಸಾಹಿತ್ಯದಲ್ಲಿ ಅಂದಿನ ನವೋದಯ ಸಾಹಿತ್ಯವಲ್ಲಿಯಂತೆ ಕಲಾತ್ಮಕತೆಯನ್ನು ಗುರುತಿಸುವದು ಕಷ್ಟ. ಅತಿಯಾದ ಭಾವುಕತೆ, ಕನಸುಗಾರಿಕೆ, ಅಂತರ್ಮುಖತೆ, ಸೌಂದರ್ಯಾರಾಧನೆ – ಇತ್ಯಾದಿಗಳು ಇವರ ಸಾಹಿತ್ಯದ ಲಕ್ಷಣಗಳಲ್ಲ. ಹೀಗಾಗಿ ಮಂಜಪ್ಪನವರ ಸಾಹಿತ್ಯದಲ್ಲಿ ಆತ್ಮಚರಿತ್ರೆ, ಜೀವನಚರಿತ್ರೆ, ಮಕ್ಕಳಸಾಹಿತ್ಯ ಜೊತೆಗೆ ಪದ್ಯ ಸಾಹಿತ್ಯ ಕಂಡುಬಂದರೂ, ಸ್ವರೂಪ ಮತ್ತು ಆಶಯಗಳಲ್ಲಿ ನವೋದಯ ಸಾಹಿತ್ಯಕ್ಕಿಂತ ತೀರ ಭಿನ್ನ. ಅವರ 'ಸಂಗನ ಬಸವಸ್ತೋತ್ರ' ವನ್ನು ನೋಡಿದರೂ ಸಾಕು ಈ ಮಾತು ಅನುಭವಕ್ಕೆ ಬರುತ್ತದೆ. ಒಟ್ಟಿನಲ್ಲಿ ಕಲಾತ್ಮಕತೆ ಅವರ ಸಾಹಿತ್ಯದ ಕೇಂದ್ರ ಆಶಯವಲ್ಲ ಎನ್ನುವುದು ಗಮನಾರ್ಹ. ಅದೇ ಕಾರಣಕ್ಕಾಗಿ ಎಷ್ಟೋ ಸಲ ಅವರ ಸಾಹಿತ್ಯ ಅವರ ಉಪನ್ಯಾಸಗಳ ಲಿಖಿತರೂಪದಂತೆ ಕಂಡುಬಂದರೆ ಆಶ್ಚರ್ಯವಿಲ್ಲ. ಕೆಲವು ರಚನೆಗಳಂತೂ ಆಶುಬರಹಗಳಾಗಿಯೂ ಕಾಣಿಸಿಕೊಳ್ಳುತ್ತವೆ. ಹೀಗೆ ಮಂಜಪ್ಪನವರ ಸಾಹಿತ್ಯ ಕಲಾತ್ಮಕವಾದ, ಸೃಜನಶೀಲ ಸಾಹಿತ್ಯದ ಸಾಲಿಗೆ ಸೇರಿದುದಾಗಿರದೆ ಲೋಕೋಪಯೋಗಿಯಾದ, ಜನಪ್ರಿಯ ಸಾಹಿತ್ಯದ ಸಾಲಿಗೆ ಸೇರುವ ರಚನೆಗಳಾಗಿವೆ.

ಹೇಳಬೇಕೆಂದರೆ, ಮಂಜಪ್ಪನವರಿಗೆ ತಾವು ಇದ್ದ ಪರಿಸ್ಥಿತಿಯಲ್ಲಿ, ನವೋದಯ ಪರಿಸರಕ್ಕೆ ಸ್ಪಂದಿಸುವದಾದಲಿ, ಅದರ ಸೊಗಡು–ಸತ್ವವನ್ನು ಜೀರ್ಣಿಸಿಕೊಳ್ಳುವದಾಗಲಿ ಸಾಧ್ಯವಿರಲಿಲ್ಲ. ಅವರು ಕೃತಿರಚನೆಗೆ ತೊಡಗಿದ ಆರಂಭದಲ್ಲಿಯೇ, ಪಾಶ್ಚಾತ್ಯ ಸಾಹಿತ್ಯದ ಪರಿಚಯದ ಪರಿಣಾಮವಾಗಿ, ನಮ್ಮಲ್ಲಿ ನವೋದಯದ ಹೊಸಗಾಳಿ

ಸುಳಿಯಲಾರಂಭಿಸಿತ್ತು. ಅದು ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯ ಪರಿಣಾಮವೇ ಆದ್ದರಿಂದ ಅದು ನಗರವಾಸಿಗಳಾದ ಮಧ್ಯಮವರ್ಗದ ವಿದ್ಯಾವಂತರಿಗೆ ದಕ್ಕುವಷ್ಟು ಇತರರಿಗೆ ಸುಲಭವಾಗಿ ದಕ್ಕುವದು ಸಾಧ್ಯವಿರಲಿಲ್ಲ. ಆಗತಾನೆ ಮುಲ್ಕಿ ಪರೀಕ್ಷೆಯನ್ನು ಪಾಸುಮಾಡಿದ, ಕನ್ನಡವನ್ನುಳಿದು ಯಾವ ಭಾಷೆ ಅಥವಾ ಸಾಹಿತ್ಯದ ಸಂಪರ್ಕವೂ ಇಲ್ಲದ, ಇಂಗ್ಲಿಷ್ ಭಾಷೆಯ ಪ್ರಾಥಮಿಕ ಪರಿಚಯವೂ ಇರದ ಗ್ರಾಮೀಣ ಪರಿಸರದ ಮಂಜಪ್ಪನವರು ನವ್ಯೋದಯ ಸಾಹಿತ್ಯದಿಂದ ಆಕರ್ಷಿತರಾಗದೇ ಹೋದರು. ಎಲ್ಲಕ್ಕೂ ಮುಖ್ಯವಾಗಿ ಮಂಜಪ್ಪನವರದು ನವ್ಯೋದಯ ಸಾಹಿತ್ಯ ರಚನೆಗೆ ಹೇಳಿಮಾಡಿಸಿದ ಮನೋಧರ್ಮವಾಗಿರಲಿಲ್ಲ. ಮೇಲಾಗಿ ಅವರದು ಆ ಜಾಯಮಾನದ ಪ್ರತಿಭೆಯೂ ಆಗಿರಲಿಲ್ಲ. ಅವರ ಸಾಹಿತ್ಯದಲ್ಲಿ ಶರಣಸಾಹಿತ್ಯದ ಕಸುವನ್ನು ಕಾಣುವುದೂ ಕಷ್ಟ. ಆದರೆ ಮಂಜಪ್ಪನವರ ಈ ಮಿತಿಯೇ ಅವರ ಸಾಹಿತ್ಯ ರಚನೆಯ ಹೊಸ ಆಯಾಮಕ್ಕೆ ಮತ್ತು ಪ್ರಯೋಜನಕ್ಕೆ ಕಾರಣವಾಯಿತು ಎಂಬುದೂ ಅಷ್ಟೇ ಗಮನಾರ್ಹ. ಈ ಮಿತಿಯಿಂದಾಗಿಯೇ ಅವರ ಗದ್ಯಸಾಹಿತ್ಯದ ಶಿಲ್ಪ ಪ್ರತ್ಯೇಕ ಅಸ್ತಿತ್ವವನ್ನು ಪಡೆಯುವಂತಾಯಿತು. ಇದರಿಂದಾಗಿಯೇ ಅವರ ಗದ್ಯದಲ್ಲಿ ಸರಳತೆ, ಸ್ಪಷ್ಟತೆ ಕಾಣಿಸಿಕೊಂಡು ಪರಿಣಾಮಕಾರಿಯಾದ ಸಂವಹನವೇರ್ಪಡಲು ಸಾಧ್ಯವಾಯಿತು.

ಮಂಜಪ್ಪನವರದು ಉಜ್ವಲವಾದ ಸೃಜನಶೀಲ ಪ್ರತಿಭೆಯಾಗಿರಲಿಲ್ಲವೆಂದ ಮಾತ್ರಕ್ಕೆ ಅವರದು ಕಸುವನ್ನು ಕಳೆದುಕೊಂಡ ಶುಷ್ಕ ಬರಹವೆಂದೇನೂ ಭಾವಿಸಬೇಕಾಗಿಲ್ಲ. ರಾಶಿರಾಶಿಯಾಗಿ ಗ್ರಂಥಗಳನ್ನು ರಚಿಸಿದ ಮಂಜಪ್ಪನವರಿಗೆ ತಾವು ರಚಿಸಲಿದ್ದ ಒಂದೊಂದು ಗ್ರಂಥದ ಹಿಂದಿದ್ದ ಆಶಯ, ಧೋರಣೆ, ಸ್ವರೂಪದ ಬಗೆಗೆ ಮಾತ್ರವಲ್ಲ, ಓದುಗರ ಮಟ್ಟ–ಮನೋಧರ್ಮಗಳ ಬಗ್ಗೆಯೂ ನಿಚ್ಚಳವಾದ ಕಲ್ಪನೆಯಿತ್ತು. ಒಂದೊಂದು ಗ್ರಂಥದ ಆಶಯ ಹಾಗೂ ಸ್ವರೂಪದ ಹಿನ್ನೆಲೆಗೆ ಅನುಗುಣವಾಗಿ ಭಾಷೆ–ತಂತ್ರ–ನಿರೂಪಣೆಯ ವಿಧಾನಗಳೂ ಬೇರೆಯಾಗುತ್ತಿದ್ದವು. ಮಂಜಪ್ಪನವರು ಸಂವೇದನಾಶೀಲರಾಗಿಯೂ ಕನಸುಗಾರರಾಗಿರಲಿಲ್ಲ. ಪ್ರತ್ಯಕ್ಷ ಜೀವನಾನುಭವಕ್ಕೆ ಸಾಕ್ಷಾತ್ತಾಗಿ ಸ್ಪಂದಿಸುತ್ತಿದ್ದ ಅವರಿಗೆ ಕನಸು ಹಾಗೂ ವಾಸ್ತವಗಳ ನಡುವಿನ ವ್ಯತ್ಯಾಸಗಳ ಬಗೆಗೆ ನಿಷ್ಠುರ ಕಲ್ಪನೆಯಿತ್ತು. ಆದ್ದರಿಂದ ಸ್ವಪ್ನಲೋಕದ ಸಂಚಾರಿಗಳಾಗಿ ಸೌಂದರ್ಯದ ಬೇಟೆಗೆ ಹೊರಡದೆ ನಿಷ್ಠುರ ವಾಸ್ತವವಾದಿಗಳಾಗಿ ಸತ್ಯದ ಶೋಧನೆಗೆ ಹೊರಟರು. ಆ ಸತ್ಯವನ್ನು ಹಾಗೂ ಮೌಲ್ಯಗಳನ್ನು ತಮ್ಮ ವೈಯಕ್ತಿಕ ಬದುಕಿನಲ್ಲಿ, ಬರಹದಲ್ಲಿ ಮತ್ತು ಸಮೂಹದಲ್ಲಿ ಅಳವಡಿಸುವ ಹೋರಾಟಕ್ಕೆ ಇಳಿದರು. ಮಾತು–ಮನಸ್ಸು ಹಾಗೂ ಕೃತಿಗಳಲ್ಲಿಯ ಸಾಮರಸ್ಯದಿಂದ ಕೂಡಿದ ಅವರ ಧವಳ ವ್ಯಕ್ತಿತ್ವದಿಂದಾಗಿ ಅವರ ನೇರ–ಸರಳ ಮಾತಿಗೂ ಉಪನಿಷತ್ತಿನ ಮಹತ್ವ, ಪಾವಿತ್ರ್ಯ ಉಂಟಾಯಿತು. ಅವರಲ್ಲಿ ಸಹಜ ಗಾಂಭೀರ್ಯವೂ ಕಾಣಿಸಿಕೊಳ್ಳುತ್ತಿತ್ತು. ಕಳಕಳಿಸಿ ನಿಂತ ಅಂತಃಕರಣ ನಿರ್ಭರವಾದ ಅವರ ಬರಹ ಕಲಾಸೌಂದರ್ಯವನ್ನು ಮೀರಿ ಪ್ರಭಾವಕಾರಿಯಾಗಿರುತ್ತಿತ್ತು. ಹಾಗೆಂದೇ ಅಂದಿನ ಜನ ಅವರ ಬರಹವನ್ನು ಅತ್ಯಂತ ಶ್ರದ್ಧೆಯಿಂದ, ಪವಿತ್ರ ಭಾವನೆಯಿಂದ ಪರಿಭಾವಿಸುತ್ತಿತ್ತು.

ಮಂಜಪ್ಪನವರದು ಕಾವ್ಯಪ್ರತಿಭೆಯಲ್ಲದಿದ್ದರೂ ಜನೋಪಯೋಗಿ ಸಾಹಿತ್ಯಪ್ರತಿಭೆಯಂತೂ ಆಗಿತ್ತು. ಅವರ ನಿಷ್ಠೆ, ಅಧ್ಯಯನ ತತ್ಪರತೆ, ಆಲೋಚನೆ– ಚಿಂತನೆ ಹಾಗೂ ಸಾಮಾಜಿಕ ಕಾಳಜಿಯಿಂದಾಗಿ ಅವರ ಬರಹ ಹೆಚ್ಚು ಮೌಲಿಕವೆನಿಸುತ್ತಿತ್ತು. ಅವರ ಜನಪ್ರಿಯ ಸಾಹಿತ್ಯಕ್ಕಿಂತ ಬಸವೇಶ್ವರ ಜೀವನ ಚರಿತ್ರೆ, ಹಿಂದೂಗಳ ದೇಶಭಕ್ತಿಯಂಥ ಸಂಶೋಧನ ಕೃತಿಗಳು ಅವರ ಅಧ್ಯಯನ ಶ್ರದ್ಧೆಗೆ, ಸತ್ಯಸಂಶೋಧನೆಯ ಪ್ರಾಮಾಣಿಕತೆಗೆ ಉಜ್ವಲ ನಿದರ್ಶನಗಳು.

ಅವರ ಜನೋಪಯೋಗಿ ಸಾಹಿತ್ಯರಚನೆಯ ಹಿಂದೆ ಎರಡು ಸ್ಪಷ್ಟ ಉದ್ದೇಶಗಳಿದ್ದವು. ಒಂದು: ತಮ್ಮ ಮೂಲಭೂತ ಗುರಿಯಾಗಿದ್ದ ಗ್ರಾಮೀಣ, ಅವಿದ್ಯಾವಂತ, ನಿರ್ಗತಿಕ ಜನಾಂಗದ ಶ್ರೇಯೋಭಿವೃದ್ಧಿ; ಎರಡು: ಆ ಜನಾಂಗದ ಶ್ರೇಯೋಭಿವೃದ್ಧಿಗೆ ಮೌಲ್ಯಗಳನ್ನು, ಮಾರ್ಗಗಳನ್ನು ಕುರುತು ನಡೆಸಿದ ಶೋಧನೆಯ ಫಲಗಳನ್ನು ಸಾಹಿತ್ಯದ ಮೂಲಕವಾಗಿ ಪ್ರತಿಫಲಿಸಿಕೊಡುವದು. ಮೊದಲನೆಯದು ಗ್ರಾಮೀಣ ಜನಸಾಮಾನ್ಯರನ್ನು ಉದ್ದೇಶವಾಗಿ ಹೊಂದಿದ್ದರೆ, ಎರಡನೆಯದು ವಿದ್ಯಾವಂತ ಅಂದರೆ ರಾಷ್ಟ್ರೀಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ, ಸಮಾನ ಮನೋಧರ್ಮದ ಸುಶಿಕ್ಷಿತ ವರ್ಗವನ್ನು ಗುರಿಯಾಗಿ ಇಟ್ಟುಕೊಂಡಿದ್ದಿತು. ಗಾಂಧಿ ಸಂದೇಶ, ಗೃಹಶಿಕ್ಷಣ, ಜಾತ್ರೆಗಳ ಸುಧಾರಣೆ, ತರುಣರ ಕೈಪಿಡಿ, ಆರೋಗ್ಯಜೀವನ, ದಾಂಪತ್ಯಧರ್ಮ, ಬುದ್ಧಿಮಾತು, ಕಚದೇವನ ಕಥೆ, ಅಕ್ಕನ ಉಪದೇಶ, ಸ್ತ್ರೀನೀತಿ ಸಂಗ್ರಹ ಇತ್ಯಾದಿಗಳು ಮೊದಲವರ್ಗದ ಜನಪ್ರಿಯ ಸಾಹಿತ್ಯವಾದರೆ, ಬಸವಚರಿತ್ರೆ, ಲಿಂಗಪೂಜೆಯ ಇತಿಹಾಸ ಇತ್ಯಾದಿಗಳು ಎರಡನೆಯ ವರ್ಗಕ್ಕೆ ಸೇರಿದ ಅಂದರೆ ಸಂಶೋಧನಾತ್ಮಕ ಕೃತಿಗಳು. ಮೊದಲ ವರ್ಗದ ಸಾಹಿತ್ಯದಲ್ಲಿ ಸರಳತೆ, ಆತ್ಮೀಯತೆ, ರಸರುಚಿಗಳು ಮುಂದಾಗಿದ್ದರೆ ಎರಡನೆಯ ವರ್ಗದ ಸಾಹಿತ್ಯದಲ್ಲಿ ಸಂಶೋಧನೆ ಹಾಗೂ ವೈಚಾರಿಕತೆಯೊಂದಿಗೆ ಅವರ ವಿದ್ವತ್ತು, ಪ್ರೌಢಿಮೆ, ಗಮನ ಸೆಳೆಯುತ್ತವೆ.

ಒಂದು ಜನಾಂಗದ ಬದುಕಿನ ಶೈಲಿಯನ್ನೇ ಬದಲಿಸ ಹೊರಟ ಮಂಜಪ್ಪನವರು ತಾವು ಕಂಡುಕೊಂಡ ಮೌಲ್ಯಗಳ ಪ್ರತಿಪಾದನೆಗೆ ಮತ್ತು ಅವುಗಳ ಪ್ರಸಾರಕ್ಕೆ ಸಾಹಿತ್ಯದ ಬಗೆಗೆ ಇರಿಸಿಕೊಂಡ ಭರವಸೆಯೇ ಅಗಾಧವಾಗಿತ್ತು. ತಮ್ಮ ಎಷ್ಟೋ ಯೋಜನೆಗಳು ವಿಫಲಗೊಂಡಿದ್ದರೂ, ಎಷ್ಟೋ ಕಾರ್ಯಕ್ರಮಗಳು ನಿರಾಶೆಗೊಳಿಸಿದ್ದರೂ ಸಾಹಿತ್ಯ ರಚನೆಯಲ್ಲಿ ಮಾತ್ರ ಶ್ರದ್ಧೆಯನ್ನು ಕಳೆದುಕೊಂಡಿರಲಿಲ್ಲ. ಸಾಹಿತ್ಯ ರಚನೆ ಅವರನ್ನು ಯಾವ ಹಂತದಲ್ಲೂ ನಿರಾಶೆಗೊಳಿಸಿರಲಿಲ್ಲ. ಅದು ಅವರ ಎಲ್ಲ ಯೋಜನೆಗಳ ಚಾಲಕಶಕ್ತಿಯಾಗಿತ್ತು. ಸಾಹಿತ್ಯರಚನೆ ಅವರ ಆಸಕ್ತಿಯೂ ಆಗಿತ್ತು. ಅಗತ್ಯವೂ ಆಗಿತ್ತು. ಆದ್ದರಿಂದ ಮುದ್ರಕರಾಗಿ, ಪ್ರಕಾಶಕರಾಗಿ, ಪ್ರಸಾರಕರಾಗಿ, ಲೇಖಕರಾಗಿ, ಪತ್ರಿಕಾಕರ್ತರಾಗಿ, ಸಂಗ್ರಹಕಾರರಾಗಿ, ಸಂಶೋಧಕರಾಗಿ, ಅನುವಾದಕರಾಗಿ, ಚರಿತ್ರೆಕಾರರಾಗಿ– ಹೀಗೆ ಹತ್ತು ಹಲವು ರೀತಿಯಲ್ಲಿ ಅವಿರತವಾಗಿ ಸಾಹಿತ್ಯ ಕೃಷಿಗಾಗಿ ಶ್ರಮಿಸಿದರು. ಪ್ರೆಸ್ಸಿನ

ಬಗೆಗೆ ಪ್ರಾಥಮಿಕ ತಿಳುವಳಿಕೆ ಇರದಿದ್ದರೂ ಪರಿಶ್ರಮಪಟ್ಟು ಅನುಭವವನ್ನು ಸಂಪಾದಿಸಿ ದಾವಣಗೆರೆಯಲ್ಲಿ 'ಸಚ್ಚಿದಾನಂದ ಪ್ರೆಸ್' ಹಾಕಿದರು. ಆಲಮಟ್ಟಿಯ ವೀರಶೈವ ವಿದ್ಯಾಲಯದಲ್ಲಿ ಬಸವಲಿಂಗ ಮುದ್ರಣ ಮಂದಿರ ಸ್ಥಾಪಿಸಿದರು. ತಾವೇ ಸಂಪಾದಕರಾಗಿ, ಮ್ಯಾನೇಜರರಾಗಿ, ಕಂಪ್ರೋಜಿಟರ್ ಆಗಿ ಏನೆಲ್ಲ ತಾವೇ ಆಗಿ ನಿಂತು ಪತ್ರಿಕೆ ಹಾಗೂ ಪುಸ್ತಕಗಳ ಪ್ರಕಟನೆಯ ಕಾರ್ಯವನ್ನು ನಿಭಾಯಿಸುತ್ತಿದ್ದರು.

ಸ್ವತಃ ಧನುರ್ಧಾರಿ, ಉದ್ಯೋಗ, ಶರಣಸಂದೇಶ, ಇತ್ಯಾದಿ ಪತ್ರಿಕೆಗಳನ್ನು ಹೊರಡಿಸುವದೇ ಅಲ್ಲದೆ ಇತರರು ಹೊರಡಿಸುತ್ತಿದ್ದ ಪತ್ರಿಕೆಗಳಿಗೂ, ಗ್ರಂಥ ಪ್ರಕಟನೆಗೂ ಸಾಕಷ್ಟು ಉತ್ತೇಜನವನ್ನಿತ್ತರು. ವಿವಿಧೋದ್ದೇಶಗಳ ಹಿನ್ನೆಲೆಯಲ್ಲಿ 'ರಾಷ್ಟ್ರಜೀವನ ಗ್ರಂಥಮಾಲೆ' ಸತ್ಯಾಗ್ರಹ ಗ್ರಂಥಾವಳಿ, ಜ್ಞಾನೋದಯ ಗ್ರಂಥಮಾಲೆ, ಜನಜಾಗೃತಿ ಗ್ರಂಥಮಾಲೆ, ಮಕ್ಕಳ ಸಾಹಿತ್ಯಮಾಲೆ, ಪ್ರಗತಿ ಗ್ರಂಥಮಾಲೆ, ವೀರಶೈವ ವಿದ್ಯಾಲಯ ಗ್ರಂಥಮಾಲೆ– ಇತ್ಯಾದಿ ಗ್ರಂಥ ಪ್ರಕಟಣೆ ಯೋಜನೆಗಳಿಗೆ ಹುಟ್ಟುಹಾಕಿ ಆ ಕಾಲದಲ್ಲಿ ಅದ್ವಿತೀಯ ಹಾಗೂ ಅದ್ಭುತವೆನ್ನುವಂಥ ಕ್ರಾಂತಿಯನ್ನು ಮಾಡಿದರು. ರಾಶಿರಾಶಿಯಾಗಿ ಗ್ರಂಥಗಳು ಪ್ರಕಟಗೊಂಡವು. ಅದರಿಂದ ಸಂಶೋಧನ ಸಾಹಿತ್ಯಕ್ಕೆ ಭಾಷಾಂತರ ಸಾಹಿತ್ಯಕ್ಕೆ ಮಕ್ಕಳ ಸಾಹಿತ್ಯಕ್ಕೆ ಮೌಲಿಕವಾದ ಕೊಡುಗೆ ಸಂದಿತು.

ಹೀಗೆ ಮಂಜಪ್ಪನವರಿಂದ ವಿಪುಲ ಸಾಹಿತ್ಯವೇ ರಚನೆಯಾಗಿದ್ದು ಇಂದು ಅವುಗಳ ಸಂಖ್ಯಾನಿರ್ಣಯವೇ ಒಂದು ಸಂಶೋಧನೆಯ ವಿಷಯವಾಗಿ, ಸಂಶೋಧಕರಿಗೆ ಒಂದು ಸವಾಲಾಗಿ ನಿಂತಿರುವದು ಅಚ್ಚರಿಯ ಸತ್ಯವಾಗಿದೆ. ಆದರೆ ಸಣ್ಣ–ದೊಡ್ಡ ಪುಸ್ತಕಗಳನ್ನು ಒಳಗೊಂಡು ಒಟ್ಟು 83 ಗ್ರಂಥಗಳು ರಚನೆಯಾಗಿರುವಂತೆಯೂ[1] ಹಾಗೂ ಅವುಗಳಲ್ಲಿ ಋಗ್ವೇದಸಾರ, ಹಳ್ಳಿಯ ಸಂಚಾರ, ಸತ್ಯಾರ್ಥ ಪ್ರಕಾಶಿಕೆ ಈ ಮೂರು ಗ್ರಂಥಗಳು ಅಪ್ರಕಟಿತ ರೂಪದಲ್ಲಿ ಉಳಿದುಬಂದಿರುವದೂ ವೇದ್ಯವಾಗುತ್ತದೆ.

ಹೀಗೆ ವಿವಿಧ ಉದ್ದೇಶಗಳ ಹಿನ್ನೆಲೆಯಲ್ಲಿ ಹುಟ್ಟುಹಾಕಿದ ಬೇರೆ ಬೇರೆ ಗ್ರಂಥಮಾಲೆಗಳಲ್ಲಿ ಮಂಜಪ್ಪನವರು ರಚಿಸಿದ ಕೃತಿಗಳಿಗೆ, ಪ್ರತಿಗಳಿಗೆ ಲೆಕ್ಕವಿಲ್ಲ. ಸಮಾಜ ಸೇವೆಯಲ್ಲಿ ಗ್ರಂಥರಚನೆಗಳ ಪ್ರಚಾರ – ಪ್ರಸಾರಗಳ ಬಗೆಗೆ ಅವರು ಇಟ್ಟುಕೊಂಡಿದ್ದ

---

1.ಕಲಬುರ್ಗಿ ಎಂ.ಎಂ. (ಡಾ): 'ಮಂಜಪ್ಪನವರ ಸಾಹಿತ್ಯ : ಸ್ವರೂಪ –ಸಂಖ್ಯೆ',

-'ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ', 239-341.

ಭರವಸೆಯಂತೂ ಎಂದೂ ಹುಸಿಯಾಗಲಿಲ್ಲ. ಜನಸಾಮಾನ್ಯರಿಂದ ಬರುತ್ತಿದ್ದ ಉತ್ಸಾಹಪೂರ್ಣ ಪ್ರತಿಕ್ರಿಯೆಯೇ ಅವರ ಗ್ರಂಥ ರಚನೆಯ ಪ್ರಮುಖ ಉತ್ತೇಜನವಾಗಿತ್ತು. ಆಗಿನ ಗ್ರಾಮೀಣ ಜನಸಮುದಾಯಕ್ಕಂತೂ ಮಂಜಪ್ಪನವರ ಕೃತಿಗಳನ್ನು ಕೊಳ್ಳುವದು ಹಾಗೂ ಓದುವದು ತಮ್ಮ ಸಂಸ್ಕೃತಿಯ ಹಾಗೂ ಧಾರ್ಮಿಕ ಜೀವನದ ಆಚರಣೆಯ ಒಂದು ಅಂಗವೆನಿಸಿತ್ತು. ರೈಲಿನಲ್ಲಿ, ಜಾತ್ರೆಯಲ್ಲಿ, ಸಂತೆಯಲ್ಲೂ ಅವರ ಜನಪ್ರಿಯ ಪುಸ್ತಕಗಳ ಮಾರಾಟ; ಜಾತ್ರೆಗೆ ಹೋದ ಜನಕ್ಕಂತೂ ದೇವರ ದರ್ಶನ, ಪ್ರಸಾದ, ಫರಾಳವನ್ನು ಪಡೆಯುವಷ್ಟೇ ಮಂಜಪ್ಪನವರ ಪುಸ್ತಕಗಳನ್ನು ಕೊಳ್ಳುವದು ಧಾರ್ಮಿಕ ಕ್ರಿಯೆಯಾಗಿತ್ತು. ಹಾಗೆಂದೇ ಮಂಜಪ್ಪನವರು ಬರೆದ ಒಟ್ಟು ಪುಸ್ತಕಗಳ ಸುಮಾರು ಮೂರು ಲಕ್ಷ ಪ್ರತಿಗಳು ಆ ಕಾಲಕ್ಕಾಗಲೇ ಮಾರಾಟವಾದವು. ಅದು ಆಗಿನ ಕರ್ನಾಟಕದ ಶೈಕ್ಷಣಿಕ ಹಾಗೂ ಸಾಹಿತ್ಯಿಕ ಸಂದರ್ಭದ ಹಿನ್ನೆಲೆಯಲ್ಲಿ ಒಂದು ಮಹಾಪವಾಡವೆಂದರೂ ಸಂದೀತು.

ಮಂಜಪ್ಪನವರು ತಾವು ರಚಿಸಿದ ಗ್ರಂಥಗಳನ್ನಲ್ಲದೆ ದೇರೆಯವರಿಂದಲೂ ಬರೆಯಿಸಿ ಪ್ರಕಟಿಸುತ್ತಿದ್ದರು. ಲಿಂಗಪೂಜೆಗೆ ಫಲಪುಷ್ಪಗಳನ್ನು ಬಳಸುವಂತೆ ಸಮಾಜೋಪಾಸನೆಗೆ ಪುಸ್ತಕಗಳನ್ನು ಬಳಸುತ್ತಿದ್ದ ಮಂಜಪ್ಪನವರು ಅದೆಷ್ಟೋ ಕೃತಿಗಳ ಸಹಸ್ರಾರು ಪ್ರತಿಗಳನ್ನು ಉಚಿತವಾಗಿ ಹಂಚಿದರು, ಅದನ್ನು ತಮ್ಮ ಯೋಜನೆಯ ಒಂದು ಅಂಗವನ್ನಾಗಿಯೇ ಮಾಡಿಕೊಂಡಿದ್ದರು. 1933ರಲ್ಲಿ ಬಸವಜಯಂತಿಯ ಕಾಲಕ್ಕೆ ಬಸವಣ್ಣನವರ ನೂರೊಂದು ವಚನಗಳನ್ನು ಸಂಗ್ರಹಿಸಿ, ಒಂದೇ ದಿನದಲ್ಲಿ ಅದರ 50 ಸಾವಿರ ಪ್ರತಿಗಳನ್ನು ಹಂಚಿದರು. ಅವರೇ ಹೇಳುವಂತೆ ಇದು ನಿಜಕ್ಕೂ "ಕರ್ನಾಟಕದಲ್ಲಿಯೇ ಒಂದು ಅಭೂತಪೂರ್ವ ಪ್ರಸಂಗ"ವೆನ್ನಬಹುದು. ಒಂದು ದಿನ ಇಷ್ಟು ಪ್ರತಿಗಳು ಹೀಗೆ ಹಂಚಲ್ಪಟ್ಟ ಒಂದಾದರೂ ಪ್ರಸಂಗವು ಆ ಮುಂಚೆ ಎಂದೂ ಸಂಭವಿಸಿರಲಿಲ್ಲ. ಇದರಿಂದ ಬಸವಣ್ಣನವರು ವಚನ ಪಾಠವು ಚಿಕ್ಕ ಚಿಕ್ಕ ವಿದ್ಯಾರ್ಥಿಗಳಲ್ಲಿ ಎಷ್ಟೋ ಪ್ರಸಾರವಾಯಿತು. [2] ಈ ಯೋಜನೆಗೆ ದೊರೆತ ಉತ್ತೇಜನದಿಂದ ಪ್ರಭಾವಿತರಾಗಿ ಅದೇ ವರುಷ 'ವೀರಶೈವ ಏಕೀಕರಣ' ಎಂಬ ಪುಸ್ತಕವನ್ನು ಪ್ರಕಟಿಸಿ 15 ಸಾವಿರ ಪ್ರತಿಗಳನ್ನು ಹಂಚಿದರು. 1934 ರಂದು ಬಸವಜಯಂತಿಯ ಕಾಲಕ್ಕೆ 'ಭಕ್ತಿಯ ಬೆಳಕು' ಎಂಬ ಹೆಸರಿನಲ್ಲಿ, ಬಸವಣ್ಣನವರ ಕೆಲವು ವಚನಗಳಿಗೆ ಅರ್ಥ ಬರೆದು ಅದರ 20 ಸಾವಿರ ಪ್ರತಿಗಳನ್ನು ಹಂಚಲಾಯಿತು. ಹೀಗೆ ಒಟ್ಟು ನಾಲ್ಕು ವರುಷಗಳ ಅವಧಿಯಲ್ಲಿ ಸುಮಾರು ಒಂದು ಲಕ್ಷ ಸಣ್ಣ ಪುಸ್ತಕಗಳು ಪ್ರಕಟಗೊಂಡವು.

---

2 .ನೋಡಿ: 'ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ'— ಹರ್ಡೇಕರ ಮಂಜಪ್ಪ.

-'ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ'—ಸಂ:ಎಂ.ಎಂ. ಕಲಬುರ್ಗಿ (1989).

ಈ ಸಂದರ್ಭದಲ್ಲಿ ಗಮನಿಸಬೇಕಾದ ವಿಶೇಷ ಅಂಶವೆಂದರೆ, ಸಮಾಜ, ರಾಷ್ಟ್ರ ಹಾಗೂ ಸಾಹಿತ್ಯವನ್ನು ಕುರಿತಂತೆ ಒಬ್ಬ ಪ್ರಯೋಗಶೀಲರು ಹಾಗೂ ಒಬ್ಬ ಸಾಧಕರೂ ಆಗಿದ್ದ ಮಂಜಪ್ಪನವರ ಬದುಕು, ಆಶಯ, ಆಲೋಚನೆ ಹಾಗೂ ಅನುಭವಗಳಲ್ಲಿ ತಿರುವು ಕಾಣಿಸಿಕೊಂಡ ಹಾಗೆಲ್ಲ ಅವರ ಸಾಹಿತ್ಯ ತನ್ನ ಶಿಲ್ಪ ಹಾಗೂ ಧೋರಣೆಯಲ್ಲಿ ತಿರುವು ಪಡೆದುಕೊಳ್ಳುತ್ತ ನಡೆಯಿತು. ಆದರೆ ಇದನ್ನೇ ಮುಂದುಮಾಡಿ, ಅವರ ಧನುರ್ಧಾರಿ ಪತ್ರಿಕೆ ನಿಂತಕಾರಣ ಗ್ರಂಥರಚನೆಗೆ ತೊಡಗಿ ತಮ್ಮ ಪತ್ರಿಕೆಯ ಆಶಯವನ್ನು ಕೃತಿರಚನೆಯ ಮೂಲಕ ಮುಂದುವರೆಸಿದರು ಎಂದು ಕೆಲವರು ಸರಳವಾಗಿ ಹೇಳಿಬಿಡುವದುಂಟು. ಆದರೆ ಗ್ರಂಥರಚನೆ 'ಧನುರ್ಧಾರಿ' ಯ ಆಶಯದ ಮುಂದುವರಿಕೆಯಾಗಿರಲಿಲ್ಲ. ರಾಜಕೀಯ ಹೇತುವಿನಿಂದ ಪ್ರೇರಿತವಾದ ಧನುರ್ಧಾರಿಗೂ ಮತ್ತು ಅನಂತರ ಸುಧಾರಣಾವಾದಿಗಳಾಗಿ ಸಾಮಾಜಿಕತೆಯ ಆಶಯದಿಂದ ಮೂಡಿಬಂದ ಇತರ ಜನಪ್ರಿಯ ಕೃತಿಗಳಿಗೂ ಇರುವ ಅಂತರ ಮೇಲುನೋಟಕ್ಕೆ ಒಡೆದು ಕಾಣುವಷ್ಟು ಸ್ಪಷ್ಟ. ಆದರೆ ಅನಂತರದಲ್ಲಿಯ ಅವರ ಗ್ರಂಥಗಳ ಆಶಯಕ್ಕೂ ಅದೇ ಸಂದರ್ಭದಲ್ಲಿ ಪ್ರಕಟವಾಗುತ್ತಿದ್ದ 'ಶರಣ ಸಂದೇಶ'ದ ಹಾಗೂ 'ಉದ್ಯೋಗ', 'ಖಾದಿವಿಜಯ'ದ ಆಶಯಕ್ಕೂ ಹೊಂದಾಣಿಕೆ ಇರುವುದನ್ನು ಮತ್ತು ಪತ್ರಿಕಾ ವ್ಯವಸಾಯದೊಂದಿಗೆ ಗ್ರಂಥರಚನೆ ಹಾಗೂ ಪ್ರಕಟನೆಗಳು ಏಕಕಾಲಕ್ಕೆ ಜೊತೆಜೊತೆಯಾಗಿಯೇ ಕ್ರಿಯಾಶೀಲವಾಗಿದ್ದುದನ್ನು ಲಕ್ಷಿಸಬೇಕು.

ಮಂಜಪ್ಪನವರ ಅದೆಷ್ಟೋ ಕೃತಿಗಳು ಅನ್ಯಭಾಷೆಗಳಿಗೂ ಅನುವಾದಗೊಂಡಿರುವುದನ್ನು ಅವರ ಗ್ರಂಥಗಳ ಮೌಲಿಕತೆ ಹಾಗೂ ಜನಪ್ರಿಯತೆಗೆ ಸಾಕ್ಷಿಯಾಗಿ ಸ್ಮರಿಸಬಹುದು. ಸ್ತ್ರೀನೀತಿ ಸಂಗ್ರಹ, ಬುದ್ಧಿಮಾತು, ಶ್ರೀರಾಮತೀರ್ಥರ ಉಪನ್ಯಾಸ, ಬ್ರಹ್ಮಚರ್ಯ, ಆರೋಗ್ಯಜೀವನ, ಇತ್ಯಾದಿ ಕೃತಿಗಳು ಮರಾಠಿಯಲ್ಲಿ ಅನುವಾದಗೊಂಡಿವೆ. ವೀರಶೈವ ಮತಬೋಧೆಯಂತೂ ಮರಾಠಿ ಹಾಗೂ ತೆಲುಗು ಭಾಷೆಗಳೆರಡರಲ್ಲೂ ಭಾಷಾಂತರಗೊಂಡಿದೆ.

ಒಟ್ಟಿನಲ್ಲಿ ಅವರ ಬರಹದ ಹಿಂದಿರುವ ಧೋರಣೆ ಅವರ ಸಾಧನೆ ಸಿದ್ಧಿಗಳನ್ನು ಕುರಿತು ಗಮನಿಸಬೇಕಾದ ಅಂಶಗಳು ಇಷ್ಟು –

ನವೋದಯ ಪರಂಪರೆಯ ಸೃಜನಶೀಲ ಸಾಹಿತ್ಯಕ್ಕಿಂತ ಮಂಜಪ್ಪನವರ ಜನಪ್ರಿಯ ವೈಚಾರಿಕ ಸಾಹಿತ್ಯ ರೂಪ-ಆಶಯಗಳ ದೃಷ್ಟಿಯಿಂದ ತೀರ ಭಿನ್ನ. ಮಂಜಪ್ಪನವರ ಸಾಹಿತ್ಯದಂತೆ ನವೋದಯ ಪರಂಪರೆಯ ವಸ್ತು ಕೂಡ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಷಯವೇ ಆಗಿದ್ದರೂ, ಮತ್ತು ಸಾಂಸ್ಕೃತಿಕ ಪುನರುತ್ಥಾನದ ಆಶಯವೇ ನವೋದಯದ ಆಶಯವಾಗಿದ್ದರೂ ಕೂಡ ಅಲ್ಲಿ ಆದರ ಪರಿಣಾಯ ಸಾಂದರ್ಭಿಕ, ವಸ್ತುವನ್ನು ಮೂರ್ತಗೊಳಿಸುವ ಸ್ಫೂರ್ತಿಯೂ ಆನುಷಂಗಿಕ, ಹೆಚ್ಚು ಭಾವನಾತ್ಮಕ. ಆದರೆ

ಸಾಮಾಜಿಕ ಪರಿವರ್ತನೆಯನ್ನೇ ಪ್ರಮುಖ ಕಾಳಜಿಯನ್ನಾಗಿ ಸ್ವೀಕರಿಸಿದ ಮಂಜಪ್ಪನವರ ಸಾಹಿತ್ಯದ ಪರಿಣಾಮ ಉತ್ತೇಜನಕಾರಿಯಾದುದು ಮತ್ತು ಹೆಚ್ಚು ಬಾಳಿಕೆ ಬರುವಂತಹದು. ನವೋದಯ ಸಾಹಿತ್ಯ ಬಹುಮುಖಿಯಾದದ್ದು, ಮಂಜಪ್ಪನವರ ಸಾಹಿತ್ಯ ಏಕಮುಖಿಯಾದದ್ದು. ಅಂದರೆ ರಾಷ್ಟ್ರೀಯತೆಯನ್ನುಳ್ಳದ್ದು.

ಇನ್ನು ರಾಜಕೀಯ ಚಳುವಳಿಯ ಹೊಸ ಆವೇಶದೊಂದಿಗೆ ನಿರ್ಮಾಣವಾಗಿದ್ದರೂ ನವೋದಯ ಸಾಹಿತ್ಯಕ್ಕೆ ಜನಸಾಮಾನ್ಯರನ್ನು, ಅರೆವಿದ್ಯಾವಂತರನ್ನು, ಗ್ರಾಮೀಣ ಸಮುದಾಯವನ್ನು ಸ್ಪಂದಿಸುವದು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಅಂಥ ಜನಾಂಗಕ್ಕೆ ಮೀಸಲುಗೊಂಡು, ಅವರಿಗಾಗಿಯೇ ನಿರ್ಮಾಣಗೊಂಡ ಸಾಹಿತ್ಯ ಮಂಜಪ್ಪ ನವರದಾಯಿತು. ಅಂಥ ಜನಾಂಗದಲ್ಲಿ ಓದು-ಬರಹದ ಅಭಿರುಚಿಯನ್ನು, ಸಂಸ್ಕಾರವನ್ನು ಬೆಳೆಸಿದ ಶ್ರೇಯಸ್ಸು ಅವರ ಜನಪ್ರಿಯ ವೈಚಾರಿಕ ಸಾಹಿತ್ಯದ್ದು.
ಸಂಸ್ಕಾರವನ್ನು ಬೆಳೆಸಿದ ಶ್ರೇಯಸ್ಸು ಅವರ ಜನಪ್ರಿಯ ವೈಚಾರಿಕ ಸಾಹಿತ್ಯದ್ದು.

ತನ್ನ ಸಮಕಾಲೀನ ಇತರ ಪತ್ರಿಕಾಕರ್ತರಿಗೆ, ಲೇಖಕರಿಗೆ ಉತ್ತೇಜನವನ್ನು ಕೊಟ್ಟಿದ್ದೂ, ಕನ್ನಡಿಗರ ಪ್ರತಿಭೆಗೆ ಅವಕಾಶವನ್ನು ಒದಗಿಸಿ ನಾಡನಿರ್ಮಾಣಕ್ಕೆ ಬಳಸಿಕೊಂಡಿದ್ದು ಮತ್ತು ಕನ್ನಡದಲ್ಲಿ ವೈಚಾರಿಕ ಸಾಹಿತ್ಯ ಪರಂಪರೆಯ ಉದ್ಘಾಟಕರಾಗಿ ತಾವೇ ಒಂದು ಶಿಕ್ಷಣ-ಪ್ರಕಾಶನ ಸಂಸ್ಥೆಯಾಗಿ ಆ ವೈಚಾರಿಕ ಸಾಹಿತ್ಯದ ಒಂದು ಪರಂಪರೆಯನ್ನು ನಿರ್ಮಿಸಿದುದು, ಮಕ್ಕಳಿಗಾಗಿ, ಮಹಿಳೆಯರಿಗಾಗಿ ಸಾಹಿತ್ಯ ರಚಿಸಿ ಮಕ್ಕಳ ಹಾಗೂ ಮಹಿಳಾ ಸಾಹಿತ್ಯದ ಮೊದಲಿಗರಲ್ಲಿ ಒಬ್ಬರಾದುದು ನಮ್ಮ ಸಾಹಿತ್ಯ ಪರಂಪರೆಯಲ್ಲಿಯೇ ಒಂದು ಗಮನಾರ್ಹ ವಿಷಯ.

ಗಾಂಧೀವಾದ ಮತ್ತು ಬಸವವಾದದಲ್ಲಿ ಆಶ್ಚರ್ಯಕರವಾದ ಸಾಮ್ಯವನ್ನು ಗುರುತಿಸಿ, ರಾಷ್ಟ್ರೀಯ ಪುನರುಜ್ಜೀವನದ ಚಟುವಟಿಕೆಗಳಲ್ಲಿ ಬ್ರಾಹ್ಮಣೇತರರನ್ನು ತೊಡಗಿಸಿದುದೂ ಅಷ್ಟೇ ಸ್ಮರಣಾರ್ಹ. ಉತ್ತರದಿಂದಲೇ ರಾಷ್ಟ್ರೀಯ ವಿಚಾರಧಾರೆ ಹರಿದುಬರುತ್ತಿದ್ದ ಕಾಲದಲ್ಲಿ ಮತ್ತು ಆಧುನಿಕ ಕಾಲದ ವೈಚಾರಿಕ ಹೊಸ ಸ್ಪಂದನಕ್ಕೆ ಉತ್ತರದ ವಿಚಾರವಾದಿಗಳನ್ನೇ ಅವಲಂಬಿಸಿದೇಕಿದ್ದ ಕರ್ನಾಟಕದ ಸಂದರ್ಭದಲ್ಲಿ ಮಂಜಪ್ಪನವರ ಸಾಹಿತ್ಯ ವೈಚಾರಿಕವಾಗಿ, ಮೌಲಿಕವಾಗಿ ಇಡೀ ರಾಷ್ಟ್ರಕ್ಕೆ ಒಂದು ಕೊಡುಗೆಯಾಗಿ ನಿಂತಿದ್ದು ರಾಷ್ಟ್ರೀಯ ಹೋರಾಟದ ಕರ್ನಾಟಕದ ಚರಿತ್ರೆಯಲ್ಲಿಯೇ ಗಮನಾರ್ಹವಾದ ವಿಷಯ.

ಒಟ್ಟಿನಲ್ಲಿ ಅಂದಿನ ರಾಷ್ಟ್ರೀಯ ಪುನರುತ್ಥಾನ ಸಂದರ್ಭದಲ್ಲಿ ಅಗತ್ಯವಾದ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಿದ ಕೀರ್ತಿ ಮಂಜಪ್ಪನವರದಾದರೆ, ಅದರ ಒಂದು ಪ್ರಮುಖ ಮಾಧ್ಯಮವಾಗಿ ಆ ಜವಾಬ್ದಾರಿಯನ್ನು ಪ್ರತಿಫಲಿಸಿಕೊಟ್ಟ ಶ್ರೇಯಸ್ಸು ಅವರ ಸಾಹಿತ್ಯದ್ದು.

•

# ಧಾರ್ಮಿಕ ಸಾಹಿತ್ಯ - ಶರಣ ಸಾಹಿತ್ಯ

ಕೌಟುಂಬಿಕವಾಗಿ, ಸಾಮಾಜಿಕವಾಗಿ, ಮಂಜಪ್ಪನವರು ಒಂದು ನಿರ್ಗತಿಕ ವೆನ್ನಬಹುದಾದ ನಿರ್ವಾತ ಪರಿಸರದಲ್ಲಿ ಬೆಳೆದು ಬಂದವರಾಗಿದ್ದರು. ಯಾವೊಂದರ ಅಂತಃಕರಣದ ಆರೈಕೆಯೂ ಅವರಿಗೆ ದೊರೆತಿರಲಿಲ್ಲ. ಅದಕ್ಕೆಂದೇ ಇರಬಹುದು, ಅವರಿಗೆ ತಮ್ಮ ಆರಂಭದ ಜೀವನದಲ್ಲಿ ಯಾವುದೇ ಸಮಾಜದ ಬಗೆಗಾಗಲಿ, ಧರ್ಮದ ಬಗೆಗಾಗಲಿ ತನ್ನದೆಂದು ಹೇಳಿಕೊಳ್ಳವಂಥ ಅಭಿಮಾನ- ಆತ್ಮೀಯತೆ ಬೆಳೆದುಬರಲು ಅವಕಾಶವಿರಲಿಲ್ಲ. ಮೇಲು ನೋಟಕ್ಕೇ ಕಾಣುವಂತೆ ಒಳಜಾತಿ, ಒಳಪಂಗಡ ಒಡಕು-ಒಳಜಗಳಗಳನ್ನು ಬೆಳೆಸಿಕೊಂಡು ಬಂದಿದ್ದ ತಮ್ಮ ಲಿಂಗಾಯತ ಧರ್ಮ ಮತ್ತು ಸಮಾಜದ ಬಗೆಗೂ ಒಂದು ಬಗೆಯ ಉದಾಸೀನ ಮನೋಭಾವನೆ ಒಳಗೊಳಗೇ ಪಾಚಿಗಟ್ಟಿತ್ತು. ಸಮಾಜ ಮತ್ತು ಧರ್ಮಗಳ ಸ್ವರೂಪ ಹಾಗೂ ಅವುಗಳ ಪರಸ್ಪರ ಸಂಬಂಧದ ಸೂಕ್ಷ್ಮವನ್ನು ಗ್ರಹಿಸುವ ಅರ್ಥೈಸುವ ಸ್ವತಂತ್ರ ಒಳನೋಟವೂ ಅವರಲ್ಲಿನ್ನೂ ಬೆಳೆದಿರಲಿಲ್ಲ. ಆರಂಭದಲ್ಲಿ ಆನುಷಂಗಿಕವೆನ್ನುವಂತೆ ಕಾಣಿಸಿಕೊಂಡ ಆರ್ಯಸಮಾಜದ ಪ್ರಭಾವವೂ ಬಹುಕಾಲ ತಾಳಿಕೆಬರಲಿಲ್ಲ. ಮೇಲಾಗಿ ಸ್ವತಃ ಮಂಜಪ್ಪನವರೇ ಒಪ್ಪಿಕೊಳ್ಳುವಂತೆ ಅವರು ಮೂಲತಃ ದೈವವಾದಿಗಳಲ್ಲ. ಅವರ ಧಾರ್ಮಿಕ ತಿಳುವಳಿಕೆಯೇ ವಿಲಕ್ಷಣವಾಗಿತ್ತು. ಹೀಗಾಗಿ, ಅಂದಿನ ರಾಜಕೀಯ ಚಳುವಳಿಯ ಪರಿಸರದಲ್ಲಿಯೇ ಕುಡಿ ಚಾಚುತ್ತಿದ್ದ ಮಂಜಪ್ಪನವರು, ಟಿಳಕ ಮತ್ತು ಗಾಂಧಿಯವರ ಜ್ವಲಂತ ವ್ಯಕ್ತಿತ್ವಕ್ಕೆ ಮಾರುಹೋದರು. ಅದರ ಪರಿಣಾಮವಾಗಿ ಇತರ ಯಾವ ಧರ್ಮಕ್ಕೆ ಅಂಟಿಕೊಳ್ಳದೇ ಇದ್ದ ಅವರಿಗೆ ರಾಷ್ಟ್ರಧರ್ಮವೇ ಧರ್ಮವಾಯಿತು. ಗಾಂಧೀಜಿಯವರೇ ಅವರ ಗುರುಗಳಾದರು. ಈ ರಾಷ್ಟ್ರೀಯತೆಯ ನೆಲೆಯಲ್ಲಿಯೇ ಅವರೊಬ್ಬರು ಗಾಂಧಿಯಂತೆ ಸತ್ಯಸಂಶೋಧಕರಾದರು, ಅದರ ಮಾರ್ಗಾನ್ವೇಷಣೆಗೆ ತೊಡಗಿದರು. ನಮ್ಮ ಭಾರತೀಯ ಸಂಸ್ಕೃತಿಯ, ಅದರ ಪರಂಪರೆಯ ಅಧ್ಯಯನ ಮಾತ್ರವಲ್ಲ ಜಗತ್ತಿನ ವಿಚಾರವಾದಿಗಳ ಸಮಕಾಲೀನ ರಾಷ್ಟ್ರೀಯ ಮುಖಂಡರ, ದಾರ್ಶನಿಕರ ಅನುಭವ-ಚಿಂತೆನಗಳನ್ನು ಅವರೊಂದಿಗೆ ವಿವಿಧ ಮತ-ದರ್ಶನಗಳನ್ನು ಬಗೆದು ವಿಶ್ಲೇಷಿಸಿ ಪರೀಕ್ಷೆಗೆ ಒಳಪಡಿಸಿದರು. ಇಂಥ ಮಾರ್ಗಾನ್ವೇಷಣೆಯ ಸಂದರ್ಭದಲ್ಲಿಯೇ ಮಂಜಪ್ಪನವರ ಪ್ರಜ್ಞೆ ಶರಣ ಧರ್ಮದಲ್ಲಿ ಶಾಶ್ವತವಾಗಿ ನೆಲೆಯೂರಿತು. ಅಂದಿನ ರಾಷ್ಟ್ರದ ಅಧೋಗತಿಯ ಅಸ್ಪಷ್ಟತೆಯ ಪರಿಸ್ಥಿತಿಯಲ್ಲಿ ಅದರ ಎಲ್ಲ ಸಮಸ್ಯೆಗಳ ಪರಿಹಾರವನ್ನು ಶರಣಧರ್ಮದಲ್ಲಿಯೇ ನಿಚ್ಚಳವಾಗಿ ಕಂಡುಕೊಂಡರು. ಅವರಿಗೆ ಶರಣಧರ್ಮ ಹಾಗೂ ಸತ್ಯಾಗ್ರಹ ಧರ್ಮಗಳು ಒಂದೇ ದೇಟಿನ ಫಲಗಳಾಗಿ ಕಾಣಿಸಿಕೊಂಡವು. ಅದರ ಪರಿಣಾಮವಾಗಿ ಅಂದಿನ ರಾಷ್ಟ್ರೀಯ

ಚಳುವಳಿಗೆ ಉಂಟಾದ ಪ್ರಯೋಜನ ಕರ್ನಾಟಕದ ಮಟ್ಟಿಗಂತೂ ಚಿರಸ್ಮರಣೀಯ. ಒಟ್ಟಿನಲ್ಲಿ ಮಂಜಪ್ಪನವರು ವೀರಶೈವ ಧರ್ಮದ ಬಗೆಗೆ ತಾಳಿದ ಶ್ರದ್ಧೆ ಖಂಡಿತವಾಗಿಯೂ ಸ್ವಧರ್ಮಾಭಿಮಾನದಿಂದ ಪ್ರೇರಿತವಾದದ್ದಲ್ಲ. ಈ ಕುರಿತು ತಮ್ಮನ್ನು ಆತ್ಮಸಾಕ್ಷಿಯಾಗಿ ಸಮರ್ಥಿಸಿಕೊಳ್ಳಲೆಂಬಂತೆ ತಮ್ಮ ಆತ್ಮಚರಿತ್ರೆಯ ಹಲವು ಸಂದರ್ಭಗಳಲ್ಲಿ ಸ್ಪಷ್ಟೀಕರಣ ಒದಗಿಸಿದ್ದಾರೆ.

12ನೆಯ ಶತಮಾನದ ವೀರಶೈವ ಸಾಮಾಜಿಕ ಆಂದೋಲನ ಹಾಗೂ ಮಾನವೀಯ ಮೌಲ್ಯಗಳಿಂದ ಪ್ರಭಾವಿತರಾದ ಮಂಜಪ್ಪನವರು ಸಮಾಜವನ್ನು ಕುರಿತು ಕಟ್ಟಿಕೊಂಡ ತಮ್ಮ ಕನಸುಗಳನ್ನು ವಾಸ್ತವೀಕರಿಸುವಲ್ಲಿ ವೀರಶೈವ ತತ್ವ- ಸಿದ್ಧಾಂತಗಳು ಹೆಚ್ಚು ಭರವಸೆಯಾಗಿ ಕಂಡವು.ಅನ್ಯ ಮೂಲಗಳಿಂದ ಬಂದ ಮೌಲ್ಯಗಳು ಪೂರಕ ಶಕ್ತಿಯಾಗಿ, ಪೋಷಕಾಂಶಗಳಾಗಿ ಪ್ರಸ್ತುತವೆನಿಸಿದವು. ಅಂತೆಯೇ 1910ರಿಂದ ಈಚೆಗೆ ವೀರಶೈವ ಸಿದ್ಧಾಂತಗಳಿಗೆ ಬದ್ಧರಾಗಿಯೇ ಅವರ ಬದುಕು ಬರಹ ಮುಂದುವರೆಯಿತು. ಸಾಮಾನ್ಯವಾಗಿ ಅವರು ಹಮ್ಮಿಕೊಂಡ ಯೋಜನೆಗಳೆಲ್ಲ ಸಂಘ ಸಂಸ್ಥೆಗಳೆಲ್ಲ ವೀರಶೈವ ತತ್ವಗಳ ಅಡಿಯಲ್ಲಿಯೇ ರೂಪಗೊಂಡವುಗಳು. ಭಜನಾಸಂಘ, ಶ್ರಾವಣ ಮಾಸೋಪನ್ಯಾಸಮಾಲೆ, ಬಸವಜಯಂತಿ, ವೀರಶೈವ ಹಿತೋಪದೇಶಕ ಸಂಘ, ವೀರಶೈವ ತರುಣ ಸಂಘ, ಬಸವೇಶ್ವರ ಸೇವಾದಳ ರಚನೆ, ವೀರಶೈವ ವಿದ್ಯಾಲಯ ಸ್ಥಾಪನೆ, ಶರಣ ಸಂದೇಶ ಪತ್ರಿಕೆ, ವೀರಶೈವ ತತ್ವ ಪ್ರಚಾರಕ ಸಂಘ, ಅಕ್ಕಮಹಾದೇವಿ ಜಯಂತಿ, ಶರಣಸಾಹಿತ್ಯ ಪ್ರಕಟನೆ– ಪ್ರಚಾರ – ಇತ್ಯಾದಿಗಳೆಲ್ಲ ವೀರಶೈವ ಪರಿಸರದಲ್ಲಿಯೇ ಅಸ್ತಿತ್ವಕ್ಕೆಬಂದವುಗಳು. ಅವರ ಬಹಳಷ್ಟು ಯೋಜನೆಗಳ ಯಶಸ್ಸಿನ ಹಿಂದೆ ಕಂಡುಬರುವುದು ಅಂದಿನ ವೀರಶೈವ ಮಠಾಧೀಶರ ಪ್ರೋತ್ಸಾಹವೆ. ಮಂಜಪ್ಪನವರಿಗೆ ಸಕಲ ರೀತಿಯಿಂದಲೂ ಸಹಾಯ –ಸಹಕಾರವಿತ್ತವರು, ಹೆಗಲು ಕೊಟ್ಟವರೂ ಅಂದಿನ ವೀರಶೈವ ಮುಖಂಡರೆ. ಮೇಲಾಗಿ ಅವರು ಬರೆದು ಪ್ರಕಟಿಸಿದ 80 ಕೃತಿಗಳಲ್ಲಿ ಸುಮಾರು ಅರ್ಧದಷ್ಟು ಕೃತಿಗಳು ವೀರಶೈವ ಧರ್ಮ-ತತ್ವ ಸಮಾಜ ಸಂಸ್ಕೃತಿಗಳಿಗೆ ಸಂಬಂಧಿಸಿದವುಗಳೆ.

ಹೀಗೆ ಅವರ ಬಹಳಷ್ಟು ಯೋಜನೆಗಳು ವೀರಶೈವ ಭೂಮಿಕೆಯಲ್ಲಿ ಬೇರು ಬಿಟ್ಟರೂ ಅವೆಲ್ಲ ರಾಷ್ಟ್ರೀಯತೆಯ ಎತ್ತರದಲ್ಲಿಯೇ ಅರಳಿನಿಂತವುಗಳು ಎಂಬುದನ್ನು ನೆನಪಿಡಬೇಕು.

ಒಟ್ಟಿನಲ್ಲಿ ಸಾಮಾಜಿಕತೆ ಹಾಗೂ ರಾಷ್ಟ್ರೀಯತೆಯನ್ನೇ ಕೇಂದ್ರಆಶಯವನ್ನಾಗಿ ಇಟ್ಟುಕೊಂಡ ಅವರ ಬರಹ ಗಾಂಧೀವಾದ ಹಾಗೂ ಬಸವವಾದದ ಸಮೀಕರಣ ಸಿದ್ಧಾಂತಕ್ಕೆ ಬದ್ಧವಾಗಿತ್ತು. ಹಾಗೆಂದೇ ಅವರ ಒಟ್ಟು ಬರಹದ ಮುಕ್ಕಾಲು ಪಾಲು ಗಾಂಧೀವಾದಕ್ಕೆ ಬಸವಧರ್ಮಕ್ಕೆ ಸಂಬಂಧಿಸಿದರೆ ಕಾಲುಭಾಗ ಮಾತ್ರ ಬೇರೆಮೂಲದ ಮೌಲ್ಯಗಳ ನಿರೂಪಣೆಗೆ ಮೀಸಲಾಗಿರುವದನ್ನು ಗುರುತಿಸಬಹುದು.

ಶರಣಸಾಹಿತ್ಯ ರಚನೆಯ ಹಿಂದೆ ಇದ್ದ ಎರಡು ಸ್ಪಷ್ಟ ಉದ್ದೇಶಗಳನ್ನು ಇಲ್ಲಿ ಗಮನಿಸಬೇಕು. ಮೊದಲನೆಯದಾಗಿ ಕಾಲಗರ್ಭದಲ್ಲಿ ಮರೆಯಾಗಿ ಹೋಗಿದ್ದ ವೀರಶೈವ ಧರ್ಮ ಮತ್ತು ಸಾಹಿತ್ಯ ಪರಂಪರೆಯ ಪಳೆಯುಳಿಕೆ ಹಾಗೂ ಅವುಗಳ ಕ್ಷೀಣ ವಾಸನೆ ಮಾತ್ರ ಉಳಿದುಕೊಂಡಿದ್ದ ಕಾಲವದು. ಆದ್ದರಿಂದ ಅದರ ಸಂಪೂರ್ಣವಾದ ಸ್ವರೂಪ ಜ್ಞಾನಕ್ಕೆ ಆ ಕುರಿತು ಪ್ರಾಮಾಣಿಕ ಸಂಶೋಧನೆ, ವಿಶ್ಲೇಷಣೆ, ವಿಮರ್ಶೆ ಅಂದಿನ ಕಾಲದ ಅಗತ್ಯಗಳಲ್ಲಿ ಒಂದಾಗಿತ್ತು. ಎರಡನೆಯದಾಗಿ ವೀರಶೈವ ಶರಣರ ಬದುಕು, ಆದರ್ಶ, ತತ್ವ ಸಿದ್ಧಾಂತಗಳನ್ನು ನೇರವಾಗಿ, ಸ್ಪಷ್ಟವಾಗಿ ಅಷ್ಟೇ ಹೃದ್ಯವಾಗಿ ಜನಸಾಮಾನ್ಯರಿಗೆ ಪರಿಚಯಿಸಿಕೊಡುವುದು ಆ ಮೂಲಕ ಒಂದು ಆದರ್ಶ ಸಮಾಜ ನಿರ್ಮಾಣಕ್ಕೆ ಸಮರ್ಥರನ್ನಾಗಿಸುವುದು ಮತ್ತೊಂದು ಅಗತ್ಯವಾಗಿತ್ತು. ಆದ್ದರಿಂದ ಮಂಜಪ್ಪನವರು ಅಂದಿನ ವಿದ್ವಾಂಸರನ್ನು ಮತ್ತು ವಿಚಾರವಾದಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಶೋಧನೆ ವಿಮರ್ಶೆಯನ್ನೊಳಗೊಂಡ ಪ್ರೌಢಸಾಹಿತ್ಯವನ್ನು ಹಾಗೂ ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಜನಪ್ರಿಯ ವಿಚಾರಸಾಹಿತ್ಯವನ್ನು ಹೀಗೆ ಎರಡು ಪ್ರತ್ಯೇಕ ಪ್ರಕಾರದ ಸಾಹಿತ್ಯವನ್ನು ರಚಿಸಿದರು.

ಅವರ ಸಂಶೋಧನಾತ್ಮಕ ಪ್ರೌಢ ಸಾಹಿತ್ಯಕ್ಕೂ ಹಾಗೂ ಜನಪರವಾದ ಸರಳ ಸಾಹಿತ್ಯಕ್ಕೂ ಭಾಷೆ. ಶೈಲಿ, ಹಾಗೂ ಆಶಯ ಧೋರಣೆಗಳಲ್ಲಿ ಕಂಡುಬರುವ ಅಗಾಧ ವ್ಯತ್ಯಾಸ ಗಮನಿಸಬೇಕಾದದ್ದು.

ಸುದೀರ್ಘವಾದ ಪರಿಶ್ರಮ, ಅಧ್ಯಯನ, ಆಲೋಚನೆ, ಕ್ಷೇತ್ರಕಾರ್ಯಗಳ ಸತ್ಫಲಗಳಾದ ಅವರ ಕೆಲವು ಸಂಶೋಧನ ಕೃತಿಗಳು–ಅವುಗಳ ಮಿತಿ ಏನೇ ಇರಲಿ –ಕಾಲದ ಹಿಂದೆ ನಿಂತು ನೋಡಿದಾಗ ಅವೆಲ್ಲ ಅವರ ವಾಙ್ಮಯತಪಸ್ಸಿನ ಸಿದ್ಧಿಯ ಶಿಖರಗಳೆನಿಸುತ್ತವೆ. ಅಂಥ ಸಂಶೋಧನ ಸಾಹಿತ್ಯದ ಭಾಷೆ ಪ್ರಜ್ಞಾಪೂರ್ವಕವಾಗಿಯೇ ಹೆಚ್ಚು ಪರಿಷ್ಕೃತವಾದದ್ದು; ಗಂಭೀರವಾದ, ಕೆಲವು ಸಲ ಸಂಕೀರ್ಣವೂ ಎನ್ನಬಹುದಾದ ಪ್ರೌಢಭಾಷೆ. ಸ್ಪಷ್ಟತೆ ಮತ್ತು ಪ್ರಾಮಾಣಿಕತೆ ಅದರ ಪ್ರಮುಖ ವೈಶಿಷ್ಟ್ಯ. ಭಾಷೆಯನ್ನು ದುಡಿಸಿಕೊಳ್ಳುವಲ್ಲಿಯೂ ಒಂದು ಬಗೆಯ ಉದ್ದೇಶಪೂರ್ವಕವಾದ ಯತ್ನ ಅಲ್ಲಿ ಒಡೆದು ಕಾಣುತ್ತದೆ.

ಇನ್ನು ಅವರ ಜನಪ್ರಿಯ ಸಾಹಿತ್ಯದಲ್ಲಿ, ಅದರಲ್ಲೂ ಮಕ್ಕಳ ಸಾಹಿತ್ಯದಲ್ಲಿ ಒಂದು ಬಗೆಯ ಸಿದ್ಧಭಾಷೆ, ಸಿದ್ಧಶೈಲಿ, ಸಿದ್ಧತಂತ್ರ ಎದ್ದು ಕಾಣುವಂತಹದು. ಆದರೆ ಪರಿಪಕ್ವ ಜೀವಿಯೊಂದರ ಕಳಕಳಿಯಿಂದ ಮೂಡಿಬಂದ ರಚನೆಗಳಾಗಿ ಒಂದು ಹಿತವಾದ ಆವರಣವನ್ನು ರೂಪಿಸುವ ಮೂಲಕ ಓದುಗರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತವೆ. ಇವೆರಡಕ್ಕಿಂತ ಭಿನ್ನವಾದದ್ದು ಅವರ ಪತ್ರಿಕಾಶೈಲಿ ಮತ್ತು ಭಾಷೆ. ಮೊದಲೆರಡರಲ್ಲಿ ಎದ್ದುಕಾಣದ ವಿಶಿಷ್ಟವಾದ, ಸಂದರ್ಭ ಬಂದರೆ ಬಿಗುವಿನಿಂದ ವರ್ತಿಸುವ ಭಾಷೆ–ಅವರ

ಪತ್ರಿಕೆಗಳಮು.

ಈ ಎಲ್ಲ ಮಾತುಗಳು ಮಂಜಪ್ಪನವರ ಧಾರ್ಮಿಕ ಸಾಹಿತ್ಯಕ್ಕೆ ಅನ್ವಯಿಸುವಂತೆ ಅವರ ಇತರ ಪ್ರಕಾರದ ಸಾಹಿತ್ಯಕ್ಕೂ ಅನ್ವಯಿಸುವಂತಹಮು. ಒಟ್ಟಾರೆ ಅವರ ಶರಣಸಾಹಿತ್ಯ ರಾಷ್ಟ್ರೀಯ ಸಾಹಿತ್ಯದ ಒಂದು ಮಹತ್ವಪೂರ್ಣ ಅಂಗವಾಗಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ, ತನ್ನ ಉಪಯುಕ್ತತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಮುಖ್ಯವಾಗಿ ಅವರ ಶರಣಸಾಹಿತ್ಯದ ಮೂಲಭೂತ ಆಶಯವೂ ಕೂಡ ಸಾಹಿತ್ಯ ಸೃಷ್ಟಿಯಾಗಿರದೆ ಮತ್ತು ಮತಪ್ರಚಾರವೂ ಆಗಿರದೆ ಅವೆಲ್ಲವನ್ನೂ ಮೀರಿದ ಸಾಮಾಜಿಕ ಕಳಕಳಿಯಾಗಿತ್ತು ಎಂಬುದನ್ನು ಮತ್ತೆ ಸ್ಮರಿಸದೇಕಾಗುತ್ತದೆ. ಅಂದರೆ ವೀರಶೈವ ವಚನಕಾರರ ಅಭಿವ್ಯಕ್ತಿಯ ಧೋರಣೆಯೇ ಮಂಜಪ್ಪನವರ ಸಾಹಿತ್ಯದ ಧೋರಣೆಯೂ ಆಗಿತ್ತು. ಒಟ್ಟಿನಲ್ಲಿ ಸಾಮಾಜಿಕತೆ ಆ ಮೂಲಕವಾಗಿ ಸಾಧಿಸುವ ರಾಷ್ಟ್ರೀಯತೆ ಅವರ ಸಾಹಿತ್ಯದ ಧೋರಣೆಯೂ ಹೌದು, ಅದರ ವೈಶಿಷ್ಟ್ಯವೂ ಹೌದು.

ಮಂಜಪ್ಪನವರ ಧಾರ್ಮಿಕ ಸಾಹಿತ್ಯವನ್ನು ಸದ್ಯದ ಅನುಕೂಲಕ್ಕಾಗಿ ಎರಡು ಬಗೆಯಲ್ಲಿ ವಿಂಗಡಿಸಬಹುದು. 1)ಸಂಶೋಧನೆ, ವಿಮರ್ಶೆ 2) ಜನಪ್ರಿಯ ಸಾಹಿತ್ಯ. ಮತ್ತೆ ಮುಂದುವರೆದು ಜನಪ್ರಿಯ ಸಾಹಿತ್ಯವನ್ನೆ ಅ) ಜೀವನ ಚರಿತ್ರೆ ಬ) ವೈಚಾರಿಕ ಸಾಹಿತ್ಯ ಕ) ಸಂಗ್ರಹ – ಸಂಪಾದನೆ ಡ) ಸ್ವತಂತ್ರ ರಚನೆ ಇ) ಪತ್ರಿಕಾಸಾಹಿತ್ಯ –ಎಂದು ಐದು ಪ್ರಕಾರವಾಗಿ ವಿಂಗಡಿಸಬಹುದು.

ಶ್ರೀಬಸವಚರಿತ್ರೆ, ಲಿಂಗಪೂಜೆಯ ಇತಿಹಾಸ, ಶುದ್ಧಿ-ಸಂಘಟನೆ ಈ ಎಲ್ಲ ಗ್ರಂಥಗಳು ಮಂಜಪ್ಪನವರ ಅಗಾಧ ವಿದ್ವತ್ತಿಗೆ, ಸುದೀರ್ಘ ಪರಿಶ್ರಮಕ್ಕೆ, ಸಂಶೋಧನಾ ಪ್ರತಿಭೆಗೆ ಉಜ್ವಲ ನಿದರ್ಶನಗಳಾದ ಸಂಶೋಧನ ಗ್ರಂಥಗಳು. ಜನಸಾಮಾನ್ಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಹುಟ್ಟಿಸುವ ಗ್ರಂಥಗಳು. ಅಷ್ಟೇ ಅಲ್ಲ, ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಉತ್ಕೃಷ್ಟ ಕೊಡಿಗೆಗಳೂ ಕೂಡ.

ಶ್ರೀಬಸವಚರಿತ್ರೆ (1924) ಒಬ್ಬ ಸಂಶೋಧಕನ ಎಲ್ಲ ಆದರ್ಶ–ಅರ್ಹತೆಯನ್ನು ಎಲ್ಲ ಸಾಧ್ಯತೆಗಳನ್ನು ಮೈಗೂಡಿಸಿಕೊಂಡ ಒಂದು ಅಮೂಲ್ಯವಾದ ಸಂಶೋಧನ ಕೃತಿ. ಮಂಜಪ್ಪನವರ ಬಗೆಗೆ ಒಳಗೊಳಗೇ ಕುದಿಯುತ್ತಿದ್ದ, ವೀರಶೈವರೆ ಆದ, ವಿರೋಧಿಗಳ ಒಂದು ಕರಾಳ ತಂಡವೇ ನಿರ್ಮಾಣವಾದ ಸಂದರ್ಭದಲ್ಲಿ, ಹೇಗಾದರೂ ಮಾಡಿ ಅವರ ತೇಜೋವಧೆಗೈಯುವದಕ್ಕೆಂದೇ ಹೊಂಚುಹಾಕಿಕೊಂಡು ಕುಳಿತ ಕೆಟ್ಟ ಪರಿಸ್ಥಿತಿಯಲ್ಲಿ, ಬಸವಣ್ಣನವರಂಥ ವೀರಶೈವ ಚಾರಿತ್ರಿಕ ಪುರುಷನನ್ನು ಕುರಿತು, ವೀರಶೈವ ಧರ್ಮದ ಚರಿತ್ರೆ – ಪರಂಪರೆಯಂಥ ಧಾರ್ಮಿಕ ಸೂಕ್ಷ್ಮ ವಿಷಯವನ್ನು ಕುರಿತು ಸಂಶೋಧನೆಗೆ ತೊಡಗಿದುದೇ ಅವರ ಧೀರವ್ಯಕ್ತಿತ್ವಕ್ಕೆ ದೊಡ್ಡನಿದರ್ಶನ. ಆ ಎಲ್ಲ ವಿಷಯಗಳ ಬಗೆಗೆ

ಆಗಲೇ ಪ್ರಚಲಿತವಿದ್ದ ಮೂಢನಂಬಿಕೆಗಳನ್ನು, ತಳಬುಡವಿಲ್ಲದ ಅತಿರಂಜಿತ ಕಲ್ಪನೆಗಳನ್ನು, ಹುಚ್ಚುಭ್ರಮೆಗಳನ್ನು ಬುಡಮೇಲು ಮಾಡುವ ಸತ್ಯಸಂಗತಿಗಳನ್ನು ಮೊಟ್ಟಮೊದಲ ಸಲ ಪ್ರಕಟಿಸಿದ್ದೇ ಒಂದು ಅದ್ಭುತ ಸಾಹಸ. ಆಗಿನ ದಿನಮಾನಗಳಲ್ಲಿ, ಮಂಜಪ್ಪನವರೇ ಸೂಚಿಸಿದಂತೆ ಬಸವಣ್ಣನವರನ್ನು ಐತಿಹಾಸಿಕ ಪುರುಷರೆಂದು ತಿಳಿಯುವುದು ಕೂಡ ಅಪಚಾರವೆಂದು ಕೆಲವರ ಭಾವನೆ. ಬಸವಣ್ಣ ನಂದಿಯ ಅವತಾರವೇ ವಿನಾ ಮನುಷ್ಯವರ್ಗದವರಲ್ಲವೆಂದೇ ಆಗಿನ ಜನರ ವಿಶ್ವಾಸ. ಗ್ರಾಮೀಣ ಅಶಿಕ್ಷಿತರಂತೂ ಉಳುವ ಎತ್ತೇ ಬಸವಣ್ಣನವರೆಂದು ಭಾವಿಸಿದ್ದರು. "ಮಹಾನುಭಾವರಾದ ಈ ಬಸವಣ್ಣನವರ ವಿಷಯದಲ್ಲಿ ಐತಿಹಾಸಿಕ ಗ್ರಂಥಗಳಲ್ಲಿಯೂ ಸುಳ್ಳು ಸಂಗತಿಗಳೇ ಹೆಚ್ಚು ಪ್ರಕಟವಾಗಿರುವುದರಿಂದ ಪರಮತೀಯರಲ್ಲಿಯೇ ಅಲ್ಲ; ಸ್ವಮತೀಯರಲ್ಲಿಯೂ ಶ್ರೀ ಬಸವಣ್ಣನವರ ವಿಷಯಕ್ಕೆ ತಪ್ಪು ಅಭಿಪ್ರಾಯವೂ, ತಿರಸ್ಕಾರ ಭಾವನೆಯೂ ಉಂಟಾಗಲವಕಾಶವಾಗುತ್ತದೆ" ಎಂಬ ಮಂಜಪ್ಪನವರ ಮಾತಿನ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿರಚನೆಯ ಪ್ರೇರಣೆಗಳನ್ನು ಗುರುತಿಸಬೇಕು.

ಹೀಗೆ ಕರ್ನಾಟಕದ ಬಹುತೇಕ ಜನರಲ್ಲಿ ಒಬ್ಬ ಧಾರ್ಮಿಕ ಪವಾಡ ಪುರುಷನಾಗಿಯೇ ಉಳಿದುಕೊಂಡು, ಚಾರಿತ್ರಿಕ ಅಂಶಗಳೆಲ್ಲ ಮರೆಯಾಗಿಹೋಗಿದ್ದ ಬಸವಣ್ಣನವರನ್ನು ಕುರಿತು ಇಂಥ ಸಂಶೋಧನಾತ್ಮಕ ಗ್ರಂಥಕ್ಕೆ ಬೇಕಾಗುವ ಸಾಮಗ್ರಿಗಳ ಸಂಗ್ರಹವೇ ಒಂದು ದೊಡ್ಡ ಸಮಸ್ಯೆ. ಆಗಿನ ಕಾಲದಲ್ಲಂತೂ ಇನ್ನೂ ದೊಡ್ಡ ಸವಾಲು. ಮೇಲಾಗಿ ಆಗಿನ್ನೂ ಸಾಕಷ್ಟು ಶಾಸನಗಳು ಉಪಲಬ್ಧವಿರಲಿಲ್ಲ; ಬಸವಣ್ಣನವರ ಬಗೆಗಿನ ಪುರಾಣಗಳೂ ಮುದ್ರಣಗೊಂಡಿರಲಿಲ್ಲ. ಮುದ್ರಣಗೊಂಡವುಗಳೂ ಉಪಲಬ್ಧವಿರಲಿಲ್ಲ. ಆದರೂ ಸಿಂಗಿರಾಜಪುರಾಣ, ಸಂಸ್ಕೃತ ಬಸವಪುರಾಣ, ಚೆನ್ನಬಸವಪುರಾಣ, ಶರಣ ಲೀಲಾಮೃತ, ಬಸವಣ್ಣನವರ ವಚನಗಳು–ಮುಂತಾದ ಗ್ರಂಥಗಳನ್ನು ಆಕರ ಸಾಮಗ್ರಿಯನ್ನಾಗಿ ಬಳಸಿಕೊಂಡರು. ಇತರ ಸಾಮಗ್ರಿಗಳ ಸಂಗ್ರಹಕ್ಕಾಗಿ ಕ್ಷೇತ್ರಕಾರ್ಯವನ್ನು ಕೈಕೊಂಡರು. ಬಸವಣ್ಣನವರ ಜನ್ಮಸ್ಥಳ ಬಾಗೇವಾಡಿ ಹಾಗೂ ಅವರ ಕಾರ್ಯಕ್ಷೇತ್ರವಾದ ಕೂಡಲಸಂಗಮಕ್ಕೂ ಭೆಟ್ಟಿ ಇತ್ತರು. ಸಾಲದೆನ್ನುವಂತೆ ವಿಜಾಪುರ, ಬಾಗಿಲುಕೋಟೆ ಮೊದಲಾದ ಸ್ಥಳಗಳಲ್ಲಿ ಆ ವಿಷಯವನ್ನೇ ಕುರಿತು ಉಪನ್ಯಾಸಮಾಡಿ ಜನರ ಪ್ರತಿಕ್ರಿಯೆಯನ್ನು ಗ್ರಹಿಸಿ, ವಾದಗ್ರಸ್ತ ವಿಷಯವನ್ನು ಬಲ್ಲವರೊಂದಿಗೆ ಚರ್ಚಿಸಿ ತಮ್ಮ ಅಭಿಪ್ರಾಯಗಳಿಗೆ ಖಚಿತತೆಯನ್ನು ತಂದುಕೊಂಡರು. ಬಸವಣ್ಣನವರ ವ್ಯಕ್ತಿತ್ವಕ್ಕೆ ಪೂರಕ ಸಾಮಗ್ರಿಯಾಗಿ ಅಂದಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪರಿಸರವನ್ನು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಶ್ರದ್ಧೆಯಿಂದ ಅಧ್ಯಯನಗೈದರು. ಆ ಬಗೆಗೆ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಪಂಡಿತರ ಹಾಗೂ ಸಂಶೋಧಕರ ಅಭಿಪ್ರಾಯಗಳನ್ನು ವಿಷಯ ಸಮರ್ಥನೆಗಾಗಿ ಬಳಸಿಕೊಂಡು ಬಸವಣ್ಣನವರನ್ನು ಕುರಿತ ಒಂದು ಸಂಶೋಧನೆಯ ಫಲವನ್ನು ಮೊಟ್ಟಮೊದಲ ಬಾರಿಗೆ ಕೊಟ್ಟ ಶ್ರೇಯಸ್ಸಿಗೆ ಪಾತ್ರರಾದರು.

ಈ ಕೃತಿಯ ಒಟ್ಟು ವಿಷಯವನ್ನು 1) ಬಸವಣ್ಣನವರ ಹಿಂದಣ ಕರ್ನಾಟಕ ಮತ್ತು ವೀರಶೈವ ಮತ 2) ಜನನ ಮತ್ತು ಗುರುಕುಲವಾಸ 3) ವಿವಾಹ ಹಾಗೂ ಅಧಿಕಾರ ಪ್ರಾಪ್ತಿ 4) ಮತಪ್ರಸಾರ ಮತ್ತು 5) ಉಪಸಂಹಾರ ಎಂದು ಐದು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಅದರಿಂದಾಗಿ ಒಟ್ಟು ಕೃತಿಗೆ ಒಂದು ಪ್ರೌಢ ಪ್ರಬಂಧದ ಶಿಸ್ತು, ಗಾಂಭೀರ್ಯ ಉಂಟಾಗಿದೆ.

ಮೊದಲ ಪ್ರಕರಣದಲ್ಲಿ ಕರ್ನಾಟಕದ ಧಾರ್ಮಿಕ ಪರಿಸರವನ್ನು ಆವಿಷ್ಕರಿಸಿಕೊಡುತ್ತ ಕರ್ನಾಟಕದ ವಿವಿಧ ಮತ-ಧರ್ಮಗಳ ಸ್ವರೂಪದೊಂದಿಗೆ ಅವುಗಳ ಮಿತಿಗಳನ್ನು ಕೂಡ ವೈಜ್ಞಾನಿಕವಾಗಿ ಸೂಕ್ಷ್ಮ ಒಳನೋಟದಿಂದ ಗ್ರಹಿಸಿದ್ದಾರೆ. "ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಕರ್ನಾಟಕದಲ್ಲಿದ್ದ ಶೈವ, ವೈಷ್ಣವ ಮತ್ತು ಜೈನ ಮತೀಯರ ಮತಪ್ರಸಾರಣೆಯ ಕಾರ್ಯವು ಮುಖ್ಯವಾಗಿ ಉತ್ತಮ ವರ್ಣದವರಲ್ಲಿ ಜರುಗುತ್ತಿದ್ದಿತೇ ಹೊರತು ಸಾಮಾನ್ಯ ಕುಲದವರ ಕಡೆಗೆ ಹೋಗಿರಲಿಲ್ಲ. ಈ ತ್ರಿಮತದವರ ವಿಚಾರಕ್ರಾಂತಿಯು ಕೀಳುಕುಲದವರೆಂದು ಹೇಳಿಕೊಳ್ಳುತ್ತ ಹೀನಾವಸ್ಥೆಯಲ್ಲಿದ್ದ ಜನಗಳ ತಿಳುವಳಿಕೆಯನ್ನು ಹೆಚ್ಚಿಸಿ ಅವರ ಆತ್ಮೋನ್ನತಿಗೇನೂ ಸಹಾಯ ಮಾಡಲಿಲ್ಲ. ಇವರ ಮತ ಚರ್ಚೆಗಳೂ, ಉಪದೇಶಗಳೂ ಸಂಸ್ಕೃತ ಬಾಷೆಯಲ್ಲಿಯೇ ಹೆಚ್ಚಾಗಿ ಜರುಗುತ್ತಿದ್ದವಾದುದರಿಂದ ಜನಸಾಮಾನ್ಯರಲ್ಲಿ ವಿಚಾರಕ್ರಾಂತಿಯಾಗಲು ಅವಕಾಶವೇ ಇರಲಿಲ್ಲ." - ಬಸವಣ್ಣನವರ ಕ್ರಾಂತಿಗೆ ಅಂದಿನ ಪರಿಸರದ ಹಾರೈಕೆಯನ್ನು ಕಲ್ಪನೆಗೆ ತಂದುಕೊಡುವ ಈ ಮಾತುಗಳನ್ನು 1924 ರಷ್ಟು ಹಿಂದೆಯೇ ಹೇಳಿದ್ದನ್ನು ನೆನೆದರೆ ಮಂಜಪ್ಪನವರ ಸಂಶೋಧನೆಯ ಒಟ್ಟು ಧೋರಣೆಯನ್ನು ಅರ್ಥೈಸಿಕೊಳ್ಳಬಹುದಾಗಿದೆ. ಅದರೊಂದಿಗೆ ಬೌದ್ಧಧರ್ಮದ ಉದಾರ ಧೋರಣೆಯನ್ನು ಮತ್ತು ರಾಮಾನುಜರು ಕುಲಕ್ಕಿಂತ ಗುಣಕ್ಕೆ ಕೊಟ್ಟ ಪ್ರಾಶಸ್ತ್ಯವನ್ನು ಎತ್ತಿ ಹೇಳಿರುವದು ಸಂಶೋಧಕನೊಬ್ಬನ ಪ್ರಾಂಜಲ ಮನಸ್ಸಿನ ಪ್ರಾಮಾಣಿಕತೆಗೆ ನಿದರ್ಶನ.

ಇನ್ನು ವೀರಶೈವಮತ ಹಾಗೂ ಬಸವಣ್ಣನವರನ್ನು ಕುರಿತಂತೆ ಈಗಲೂ ಇರುವ ವಿವಾದಾಸ್ಪದ ವಿಷಯವನ್ನು ಕುರಿತು "ವೀರಶೈವ ಮತವೇನೋ ಶ್ರೀ ಬಸವಣ್ಣನವರ ಪೂರ್ವದಲ್ಲಿಯೂ ಇದ್ದಿತು. ಆದರೆ ಅಂತ್ಯಜಾದಿಯಾಗಿ ಎಲ್ಲರಿಗೂ ಲಿಂಗಧಾರಣಮಾಡಿ ಅವರ ಪೂರ್ವಜಾತಿಯನ್ನೇ ಮರೆತು ಬಳಕೆಯಲ್ಲಿಟ್ಟುಕೊಳ್ಳುವಂತಹ ಮತ್ತು ಜನ್ಮಕ್ಕೆ ಪ್ರಾಧಾನ್ಯವಿಲ್ಲದೆ ಶೀಲಾಚರಣೆಗಳಿಗೇನೇ ಪ್ರಾಮುಖ್ಯತೆಯನ್ನು ಕೊಟ್ಟು ವರ್ಣಗಳನ್ನೇ ತೆಗೆದುಹಾಕಿ, ಸ್ತ್ರೀಯರಿಗೂ ಪುರುಷರಂತೆಯೇ ಧಾರ್ಮಿಕ ಸ್ವಾತಂತ್ರ್ಯವನ್ನುಂಟು ಮಾಡಿದ ಬಸವಣ್ಣನವರ ವೀರಶೈವ ಮತವೇ ಪೂರ್ವದಲ್ಲಿಯೂ ಇದ್ದಿತೆ? ಎಂದು ಅನೇಕರು ಪ್ರಶ್ನೆಮಾಡುವದುಂಟು....ಇದು ಯುಕ್ತವಲ್ಲ" ಎಂಬ ತಮ್ಮ ನಿಲುವನ್ನು ಮುಂದಿಟ್ಟಿದ್ದಾರೆ. ಪಾರಮೇಶ್ವರಾಗಮ, ಸೂಕ್ಷ್ಮಾಗಮ ಇತ್ಯಾದಿಗಳ ಆಧಾರಗಳಿಂದ ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ. ಹೀಗೆ ಪ್ರೊ .ಗ.ಸ. ಹಾಲಪ್ಪನವರು ಅಭಿಪ್ರಾಯ

ಪಡುವಂತೆ "ಕೇವಲ ಪ್ರಸಿದ್ಧವಾಗಿದ್ದ ವ್ಯಕ್ತಿಯನ್ನು ಮಂಜಪ್ಪನವರು ಭಾರತದ ರಾಷ್ಟ್ರೀಯ ಮುಂದಾಳುಗಳ ಮಾಲಿಕೆಯಲ್ಲಿ ಸೇರುವಂತೆ ಮಾಡಿದರು." ಒಟ್ಟು ಕೃತಿಗೆ ಸಮಗ್ರತೆಯನ್ನು ಒದಗಿಸಲು ಹಾಗೂ ಅವರ ಮೌಲಿಕತೆಯನ್ನು ಹೆಚ್ಚಿಸಲು ಸ್ಥೂಲವಾಗಿಯಾದರೂ ಚಿಂತೆಯಿಲ್ಲ ವೀರಶೈವ ತತ್ವ–ಸಿದ್ಧಾಂತಗಳನ್ನು ಪರಿಚಯಿಸಿದ್ದಾರೆ. ಅದರೊಂದಿಗೆ ಆಗಮೋಕ್ತಿಗಳಿಗೆ ಸರಳಾನುವಾದವನ್ನು ಕೊಟ್ಟಿರುವದು ಹಾಗೂ ಬಸವಣ್ಣನವರ ವಚನಗಳನ್ನು ತೌಲನಿಕ ಅಧ್ಯಯನಕ್ಕಾಗಿ ಬಳಸಿಕೊಂಡಿರುವದು ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಿದೆ. ಒಟ್ಟಿನಲ್ಲಿ ಈ ಕೃತಿಯ ಮಿಕ್ಕ ಅರಕೆಗಳು, ಮಿತಿಗಳು ಏನೇ ಇರಲಿ, ಇಂದಿಗೂ ನಮ್ಮ ಸಂಶೋಧನೆಗೆ ಒಂದು ಉತ್ತಮ ಮಾದರಿಯಾಗಿದೆ.

ಶುದ್ಧಿ ಮತ್ತು ಸಂಘಟನೆ (1936) ಇಂಥದೇ ಇನ್ನೊಂದು ಕುತೂಹಲಕಾರಿಯಾದ, ಮಂಜಪ್ಪನವರ ಸಂಶೋಧನಾ ಪ್ರತಿಭೆಗೆ ನಿದರ್ಶನವಾದ ವಿಸ್ತೃತ ಕೃತಿ. ಅವರ ಸಾಮಾಜಿಕ ಹಾಗೂ ಮಾನವೀಯ ಪ್ರಜ್ಞೆಯನ್ನು ಪ್ರತಿನಿಧಿಸುವ ಕೃತಿಯೂ ಹೌದು. ಒಂದು ದೃಷ್ಟಿಯಿಂದ ಇದು 'ಶ್ರೀ ಬಸವಚರಿತ್ರೆ'ಗೆ ಪೂರಕವಾದ ರಚನೆ, ಇಲ್ಲಿಯೂ ಕೂಡ ಬಸವಣ್ಣನವರ ಚರಿತ್ರೆ, ಅವರ ವ್ಯಕ್ತಿತ್ವ ಹಾಗೂ ಅವರ ಚಟುವಟಿಕೆಗಳನ್ನು ಕುರಿತಂತೆ ಜನಸಾಮಾನ್ಯರಲ್ಲಿ ಹರಡಿಕೊಂಡ ಅಜ್ಞಾನ ಮಂಜಪ್ಪನವರನ್ನು ಅದೆಷ್ಟು ತೀವ್ರವಾಗಿ ಬಾಧಿಸಿತ್ತು ಎಂಬುದೂ ವೇದ್ಯವಾಗುತ್ತದೆ. ಅದುವೇ ಒಂದು ಪ್ರಮುಖ ಪ್ರೇರಣೆಯಾಗಿಯೂ ಅನುಭವಕ್ಕೆ ಬರುತ್ತದೆ. ಕೃತಿಯ ಮುನ್ನುಡಿಯಲ್ಲಿ "ಈ ಪುಸ್ತಕವು ಕೇವಲ ಐತಿಹಾಸಿಕ ಮತ್ತು ಸಂಶೋಧನಾತ್ಮಕ ಪದ್ಧತಿಯಿಂದಲೇ ಬರೆಯಲ್ಪಟ್ಟಿದೆ. -------- ವೇದಾಗಮಗಳೆಲ್ಲ ದೇವರಿಂದ ಬಂದ ಗ್ರಂಥಗಳೆಂತಲೂ ಬಸವಾದಿ ಪ್ರಮಥರೆಲ್ಲ ಪವಾಡ ಪುರುಷರೇ ವಿನಾ ನಮ್ಮಂತೆ ಸೃಷ್ಟಿಯ ನಿಯಮವನ್ನನುಸರಿಸಿ ನಡೆದವರಲ್ಲವೆಂತಲೂ, ಅವರ ಉಕ್ತಿಗಳೆಲ್ಲ ಅವತಾರಿ ಪುರುಷರ ಆಚರಣೆಗೆ ಸಲ್ಲುವಂಥವುಗಳೇ ವಿನಾ ನಮ್ಮ ನಡವಳಿಕೆಯಲ್ಲಿ ಬರತಕ್ಕವುಗಳಲ್ಲವೆಂತಲೂ ತಿಳಿದ ಭಾವಿಕರಿಗೆ ಈ ಪುಸ್ತಕದಲ್ಲಿಯ ವಿಚಾರ ಸರಣಿಯೇ ಸರಿದೋರುವುದಿಲ್ಲ" ಎಂದು ಹೇಳಿಕೊಂಡಿದ್ದಾರೆ. ಒಟ್ಟಿನಲ್ಲಿ ಬಸವಣ್ಣವನರ ಸಾಮಾಜಿಕ ಚಟುವಟಿಕೆ, ಮತ್ತು ಸಿದ್ಧಾಂತಗಳನ್ನು ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತಗೊಳಿಸಿಕೊಡುವದು ಈ ಕೃತಿಯ ಪ್ರಮುಖ ಧೋರಣೆ. ಹಾಗೆಂದೇ "ಐತಿಹಾಸಿಕ ಹಿನ್ನೆಲೆಯಲ್ಲಿ ಸಮಾಜ ಸುಧಾರಕನಾದ ಬಸವಣ್ಣನವರ ಬೆಲೆಕಟ್ಟುವ ಶ್ರೇಷ್ಠವಾದ ವಿಮರ್ಶಾತ್ಮಕ ಗ್ರಂಥವಾಗಿ ಇಂದಿಗೂ ಮಹತ್ವಪೂರ್ಣವೆನಿಸುತ್ತದೆ" ಎಂಬ ಪ್ರೊ. ಹಾಲಪ್ಪನವರ ಮಾತು ಗಮನಾರ್ಹವೆನಿಸುತ್ತದೆ.

ಕೃತಿಯ ಉದ್ದೇಶಕ್ಕೆ ಅನ್ವಯವಾಗಿ ಇಲ್ಲಿ ಪ್ರಾಚೀನ ಭಾರತೀಯ ಜನಾಂಗ, ವೇದಕಾಲದ ಜನಾಂಗಗಳು, ಯಾರು ರಾಕ್ಷಸರೆಂದು ಕರೆಯಲ್ಪಟ್ಟರು, ಲಿಂಗಪೂಜೆಯು ವೇದಗಳ ಮುಂಚೆ, ದ್ರಾವಿಡರು ಮತ್ತು ಆರ್ಯರ ಕಲಹ, ದ್ರಾವಿಡ ಸಮಾಜ ರಚನೆ,

ಆದಿವಾಸಿಗಳ ಅನುಕರಣ, ಬುದ್ಧನಿಂದ ಬಸವನವರೆಗೆ, ಬೌದ್ಧಮತದಿಂದುಂಟಾದ ಪರಿಣಾಮ, ಶೈವಮತದ ನಾನಾಭೇದಗಳು, ಲಿಂಗಧಾರಿ ಶೈವರು, ಶಿವಾಗಮಗಳ ಕಾಲ, ಹನ್ನೆರಡನಯ ಶತಮಾನದ ಸ್ಥಿತಿ, ಬಸವಣ್ಣನವರ ಸುಧಾರಣೆ ಇತ್ಯಾದಿ ವಿಷಯಗಳ ಸ್ಥೂಲ ವಿವರಣೆಯಿಂದ ಮೂಲ ವಿಷಯಕ್ಕೆ ನೆಲೆಗಟ್ಟನ್ನು ಒದಗಿಸಿ ಮುಖ್ಯ ವಿಷಯದ ನಿರೂಪಣೆಗೆ ಮಾರ್ಗವನ್ನು ನಿರ್ಮಿಸಿಕೊಂಡಿದ್ದಾರೆ. ಮುಂದೆ ಬಸವಣ್ಣವನರ ಉಪನಯನದ ಸಂಸ್ಕಾರ, ಲಿಂಗಧಾರಣೆ, ಭಕ್ತಿಮಾರ್ಗ ತತ್ವಜ್ಞಾನ, ನಾನಾದೇವಾಲಯ ನಿಷೇಧ, ಸ್ಥಾವರಲಿಂಗ ಪೂಜೆಯ ನಿರಾಕರಣೆ, ಜನ್ಮವಿಶಿಷ್ಟ ಜಾತಿಯ ನಿಷೇಧ, ವರ್ಣಗಳ ನಿಷೇಧ, ಸಹಭೋಜನ ಮತ್ತು ಶರೀರ ಸಂಬಂಧ ಎಂಬ ಮುಂತಾದ ವಿಷಯಗಳ ಸ್ಥೂಲ ಆದರೆ ಪ್ರಭಾವಕಾರಿ ನಿರೂಪಣೆಯಿಂದ ಅಂದಿನ ವೀರಶೈವ ಶರಣರ ಸ್ವರೂಪ-ಆಶಯಗಳ ಸ್ಪಷ್ಟ ಚಿತ್ರವನ್ನು ಕೊಡುವಲ್ಲಿ ಈ ಕೃತಿ ತುಂಬ ಯಶಸ್ವಿಯಾಗುತ್ತದೆ. ಮುಖ್ಯವಾಗಿ ಈ ಕೃತಿಯಲ್ಲಿ ಮಂಜಪ್ಪವನರು ತಮ್ಮ ಸಮಕಾಲೀನ ಜನಾಂಗದ ಮುಂದಿರುವ ಜವಾಬ್ದಾರಿಯ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತಾರೆ. ಆ ಮೂಲಕ ಒಬ್ಬ ಆಶಾವಾದಿಯಾಗಿ ಓದುಗರೆದುರು ಮುಖಾಮುಖಿಯಾಗಿ ನಿಲ್ಲುತ್ತಾರೆ. ಅವರೊಂದಿಗೆ ಸಂದರ್ಭೋಚಿತವಾಗಿ ಪ್ರೊ.ಟಿ.ಎಸ್.ವೆಂಕಣ್ಣಯ್ಯನವರಂಥ ಸಂಶೋಧಕರನ್ನು, ವಿಮರ್ಶಕರನ್ನು ಉದ್ಧರಿಸುವದಂತೂ ವರ್ತಮಾನದ ಸಾಹಿತ್ಯ ಹಾಗೂ ಸಂಶೋಧನೆಯನ್ನು ಕುರಿತ ಅವರ ಆಸಕ್ತಿಗೆ, ಜಾಗೃತ ಪ್ರಜ್ಞೆಗೆ ನಿದರ್ಶನ. ಬಸವಣ್ಣನವರ ವಚನಗಳೊಂದಿಗೆ ಉಳಿದ ವಿದ್ವಾಂಸರ ಹಾಗೂ ಪತ್ರಿಕೆಗಳ ಹೇಳಿಕೆಗಳನ್ನು ಪೂರಕವಾಗಿ ಬಳಸಿಕೊಂಡಿರುವದು ಈ ಕೃತಿಯ ಮತ್ತೊಂದು ವೈಶಿಷ್ಟ್ಯ.

ಇಷ್ಟಾಗಿಯೂ ಈ ಕೃತಿ ಮಂಜಪ್ಪನವರ ಸಂಶೋಧನೆಯ ಅತ್ಯಂತ ಮಹತ್ವ ಪೂರ್ಣವಾದ ಪ್ರಾತಿನಿಧಿಕ ಕೃತಿಯೆಂದು ತೀರ್ಮಾನಿಸಲಾಗದು. ವಿಪುಲವಾದ ವಿಷಯವನ್ನು ಕೇಂದ್ರ ಉದ್ದೇಶಕ್ಕೆ ಪೂರಕವಾಗಿ ಹರಿಗೊಳಿಸಿಕೊಳ್ಳುವಲ್ಲಿ, ಕೃತಿಯನ್ನು ನಿಶ್ಚಿತ ಗುರಿಯತ್ತ ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುವಲ್ಲಿ ತನ್ನ ಶಿಥಿಲ ಬಂಧದಿಂದಾಗಿ ದುರ್ಬಲಗೊಳ್ಳುತ್ತದೆ. ಸಂಕೀರ್ಣ ವಸ್ತುವಿನ ವ್ಯಾಪಕ ವಿವರಣೆಯಿಂದಾಗಿ ಮೂಲ ವಿಷಯ ದೂರ ದೂರ ಸರಿಯುತ್ತ ಹೋಗುತ್ತದೆ. ಈ ಕೃತಿ ಮಂಜಪ್ಪನವರ ಸಂಶೋಧನೆಯ ಕಕ್ಷೆಯಲ್ಲಿಯೇ ಬರಬಹುದಾದರೂ ಅದರ ಜಾಯಮಾನ 'ಶ್ರೀ ಬಸವಚರಿತ್ರೆ'ಗಿಂತ ಭಿನ್ನವಾಗಿ ನಿಲ್ಲುತ್ತದೆ. ವಿಸ್ತೃತ ಅನುಭವ-'ಕಳಕಳಿಯುಳ್ಳ ಬಹುಶ್ರುತ ಬರಹಗಾರನೊಬ್ಬನ 'ಅಂಕಣಸಾಹಿತ್ಯ' ದ ಬಿಡಿಭಾಗಗಳನ್ನು ಒಟ್ಟಾಗಿ ಸಂಗ್ರಹಿಸಿ ಸಂಯೋಜನೆಗೆ ಒಳಪಡಿಸಿದಂತಾಗಿವೆ. ಇಲ್ಲಿ ಸಂಶೋಧಕ ಮಂಜಪ್ಪನವರ ಮನೋಧರ್ಮಕ್ಕಿಂತ ಪತ್ರಿಕಾಕರ್ತ ಮಂಜಪ್ಪನವರ ಮನೋಧರ್ಮವೇ ಮುಂದಾಗಿ ನಮ್ಮ ಗಮನ ಸೆಳೆಯುತ್ತದೆ. 1936ಕ್ಕಾಗಲೇ ಸಾಕಷ್ಟು ಅನುಭವ-ವಿದ್ವತ್ತನ್ನು ಪಡೆದ ಮಂಜಪ್ಪನವರಿಗೆ ವಿಚಾರ ಮತ್ತು ವಿಮರ್ಶೆಯ ಗತಿ ಹಾಗೂ ಅಭಿವ್ಯಕ್ತಿಯ ಕ್ರಿಯೆ ಅದೆಷ್ಟು

ಲೀಲಾಜಾಲವಾಗಿತ್ತು ಎನ್ನುವದಕ್ಕೆ ಈ ಕೃತಿಯನ್ನು ಉದಾಹರಿಸಬಹುದು. 1934 ರಿಂದ 1936 ರ ವರೆಗೆ ಸಾಮಾಜಿಕ ಕಾರ್ಯಾಚರಣೆಯಲ್ಲಿಯೇ ತಮ್ಮನ್ನು ಬಿಡುವಿಲ್ಲದೆ ತೊಡಗಿಸಿಕೊಂಡಿದ್ದ ಮಂಜಪ್ಪನವರಿಗೆ ಈ ಕೃತಿಯ ರಚನೆಗೆ ಬೇಕಾದ ಸಮಯ ಮತ್ತು ಸಂಯಮತೆಯನ್ನು ಪೂರೈಸುವದು ಸಾಧ್ಯವಾಗಿಲ್ಲವೇನೋ ಎನಿಸುತ್ತದೆ. ಹಾಗಾಗಿ ಇದರ ಎಷ್ಟೋ ಭಾಗಗಳು ಅವಸರಕ್ಕಾಗಿ ಬರೆದ 'ಅಂಕಣಸಾಹಿತ್ಯ' ದ ಮಟ್ಟಕ್ಕೆ ನಿಲ್ಲುತ್ತವೆ. ಹಾಗೆಂದು ಅದರ ಒಟ್ಟು ಉಪಯುಕ್ತತೆಯನ್ನೇ ನಿರಾಕರಿಸುವಂತಿಲ್ಲ. ಅದರ ನಿರ್ವಹಣೆ ಮತ್ತು ವಿಷಯ ಸಂಯೋಜನೆಯಲ್ಲಿನ ಬಿಗುವಿನ ಅಭಾವವನ್ನು ಅವರ ವಿಚಾರ–ಆಲೋಚನೆ ಹಾಗೂ ಸಾಮಾಜಿಕ ಕಳಕಳಿ ನಿಸ್ಸಂದೇಹವಾಗಿ ತುಂಬಿಕೊಡುತ್ತವೆ.

"ಲಿಂಗಪೂಜೆಯ ಇತಿಹಾಸ ವಿವೇಚನೆ," 'ಶ್ರೀಬಸವ ಚರಿತ್ರೆ' ಹಾಗೂ 'ಶುದ್ಧಿ–ಸಂಘಟನೆ'ಯಷ್ಟು ಗಾತ್ರದಲ್ಲಿ ಹಿರಿದಾದ ಕೃತಿಯಲ್ಲ. ಅದೊಂದು ವಿಸ್ತೃತವಾದ ಸಂಶೋಧನ ಲೇಖನದ ಗಾತ್ರವುಳ್ಳದ್ದು. ಮಂಜಪ್ಪನವರ ಚಿಕಿತ್ಸಕ ಮನೋಧರ್ಮಕ್ಕೆ ಸಾಕ್ಷಿಯಾದದ್ದು. ತನ್ನ ವಸ್ತುವಿನ ವಿನೂತನತೆಯಿಂದ ಕುತೂಹಲವನ್ನು ಕೆರಳಿಸುತ್ತ ಧಾರ್ಮಿಕ ಕಲ್ಪನೆಯ ಬೆಳವಣಿಗೆಯ ವಿವಿಧ ಘಟ್ಟಗಳ ಸ್ವರೂಪವನ್ನು ಕುರಿತು ಲೀಲಾಜಾಲವಾಗಿ ಅರಿವನ್ನು ಮೂಡಿಸುವಲ್ಲಿ ಅನನ್ಯತೆಯನ್ನು ಪಡೆಯುತ್ತದೆ.

ಲಿಂಗಪೂಜೆಯ ಪರಿಕಲ್ಪನೆಯ ಮೂಲವನ್ನು ಅದರ ಬೆಳವಣಿಗೆಯ ವಿವಿಧ ಘಟ್ಟಗಳ ಸ್ವರೂಪವನ್ನು ಬಿಡಿಬಿಡಿಯಾಗಿ ಬಿಚ್ಚಿಕೊಡಲಾಗಿದೆ. ಪೌರಾಣಿಕವಾಗಿ ಮತ್ತು ಮತೀಯ ಹಿನ್ನೆಲೆಯಲ್ಲಿಯೇ ಪರಿಭಾವನೆಗೆ ಒಳಪಡುತ್ತ ಬಂದ ಇಂಥ ಗಹನ ವಿಷಯವನ್ನು ಮಂಜಪ್ಪವನರು ಒಬ್ಬ ಸಂಶೋಧಕರಾಗಿ ಐತಿಹಾಸಿಕ ವಿಶ್ಲೇಷಣೆಗೆ ಗುರಿಪಡಿಸಿದ್ದಾರೆ. ಅವರ ವಿಶ್ಲೇಷಣೆಯಲ್ಲಿಯ ವೈಜ್ಞಾನಿಕ ದೃಷ್ಟಿ ಹಾಗೂ ಅವರ ವಿಶ್ವಬಂಧುತ್ವದ ಗುರಿ ಆಶ್ಚರ್ಯಕರವಾಗಿ ಸೆರೆಹಿಡಿದು ಓದುಗರನ್ನು ಹೊಸ ಮನುಷ್ಯರನ್ನಾಗಿ ಮಾಡುತ್ತದೆ. ಮಂಜಪ್ಪನವರ ಇಂಥ ಸಂಶೋಧನೆ ವಿಷಯದ ಮೇಲೆ ಹೊಸ ಬೆಳಕನ್ನು ಕೆಡೆಯುವಲ್ಲಿ ಮಾತ್ರ ಸಂತೃಪ್ತಗೊಳ್ಳದೆ ಅದರ ಪ್ರತಿಫಲವನ್ನು ವರ್ತಮಾನಕ್ಕೆ ಒಗ್ಗಿಸಿಕೊಡುವಲ್ಲಿ ಸಾರ್ಥಕಗೊಳ್ಳುತ್ತದೆ.

ಜ್ಯೋತಿರ್ಲಿಂಗೋದ್ಭವ, ಶಿವಲಿಂಗ ಪತನ, ಓಂಕಾರವೇ ಲಿಂಗ, ಯೂಪಸ್ತಂಭವೇ ಲಿಂಗ, ಜನನೇಂದ್ರಿಯ ಸಂಯೋಗವೇ ಲಿಂಗ, ದೇವರ ಕಲ್ಪನೆಯ ಉಗಮ, ಆಕಾಶದ ಪ್ರತೀಕವೇ ಲಿಂಗ,..........ಲಿಂಗವು ವಿಶ್ವದ ಪ್ರತೀಕ ಇತ್ಯಾದಿ ತಲೆಬರಹಗಳ ಅಡಿಯಲ್ಲಿ ಆಯಾ ವಿಷಯಗಳನ್ನು ಕುರಿತು ಸೊಗಸಾಗಿ ವಿವರಿಸಲಾಗಿದೆ. ಪ್ರಾಚೀನ ಭಾರತೀಯರ ಪರಿಕಲ್ಪನೆಯನ್ನು ಹಾಗೂ ಜಗತ್ತಿನ ಆಧುನಿಕ ವಿದ್ವಾಂಸರ, ತತ್ವಜ್ಞಾನಿಗಳ ವಿಚಾರಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ಶಿವಪುರಾಣದಂಥ ವಿಷಯವನ್ನು ಉದ್ಧರಿಸುವ ವಲ್ಲದೆ ವಿವೇಕಾನಂದ, ಮ್ಯಾಕ್ಸ್‌ಮುಲ್ಲರ್, ಲಾರ್ಡಗಿಫರ್ಡ್ ಮೊದಲಾದವರ ಅಭಿಪ್ರಾಯ

ಗಳನ್ನು ಅವರಲ್ಲೂ ವಿಶೇಷವಾಗಿ ಮಾರ್ಕ್ಸ್‌ಮುಲ್ಲರ ವಿಚಾರಗಳನ್ನು ನೇರವಾಗಿ ಹಾಗೂ ಧಾರಾಳವಾಗಿ ಬಳಸಿಕೊಂಡು ತಮ್ಮ ಅಭಿಪ್ರಾಯಕ್ಕೆ ಖಚಿತತೆಯನ್ನು, ಕೃತಿಗೆ ಮೌಲಿಕತೆಯನ್ನು ಒದಗಿಸಲಾಗಿದೆ. ಹಿಂದೂಗಳ ನಂಬಿಕೆಯಂತೆ ಕ್ರೈಸ್ತ, ಮಹಮ್ಮದೀಯರ ಕಲ್ಪನೆಗಳನ್ನು ತಮ್ಮ ಸಮರ್ಥನೆಗಾಗಿ ಅಂದರೆ 'ಆಕಾಶದ ಪ್ರತೀಕವೇ ಲಿಂಗ' ಎಂಬ ವಿಚಾರದ ಸಮರ್ಥನೆಗಾಗಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. 'ಲಿಂಗವು ವಿಶ್ವದ ಪ್ರತೀಕ' ಎಂಬ ವಿಚಾರ ಪ್ರತಿಪಾದನೆಯಲ್ಲಂತೂ ಮಂಜಪ್ಪನವರು ವಿಶ್ವಧರ್ಮ ಪ್ರತಿಪಾದಕರಾಗಿ ಪ್ರಜ್ವಲಿಸುತ್ತಾರೆ.

ಇವಿಷ್ಟು ವೀರಶೈವ ಶರಣರನ್ನು, ಧರ್ಮವನ್ನು ಕುರಿತ ಸಂಶೋಧನಾತ್ಮಕ ಪ್ರೌಢ ಗ್ರಂಥಗಳಾದರೆ 'ವೀರಶೈವ ಮತಬೋಧೆ,' 'ವಚನಕಾರರ ಸಮಾಜರಚನೆ,' 'ವೀರಶೈವ ಸಮಾಜ ಸುಧಾರಣೆ,' 'ವೀರಶೈವ ಏಕೀಕರಣ' ಇತ್ಯಾದಿಗಳು ಶರಣ ತತ್ವ ಹಾಗೂ ಸಮಾಜವನ್ನು ಕುರಿತು ಒಂದು ವಿಶಿಷ್ಟ ಧೋರಣೆಯ ಹಿನ್ನೆಲೆಯಲ್ಲಿ ಬರೆದ ಚಿಕ್ಕ ಚಿಕ್ಕ ಜನಪ್ರಿಯ ಕೃತಿಗಳಾಗಿವೆ. 'ವೀರಶೈವ ಮತಬೋಧೆ'ಯಂತೂ ಇನ್ನೂ ಹೆಚ್ಚು ಜನಪ್ರಿಯವಾದ ಕೃತಿ. ಆಗಲೇ ಅದರ 5 ಸಾವಿರ ಪ್ರತಿಗಳು ಪ್ರಸಾರವಾಗಿದ್ದವಲ್ಲದೆ ಮರಾಠಿ ಮತ್ತು ತೆಲುಗು ಭಾಷೆಯಲ್ಲೂ ಭಾಷಾಂತರಗೊಂಡಿತ್ತು. ವಚನಕಾರರ ಸಮಾಜರಚನೆಯಂತೂ ಇಂಗ್ಲಿಷಿನಲ್ಲಿ ಅನುವಾದಗೊಂಡು ವಿದ್ವಾಂಸರ ಗಮನ ಸೆಳೆದ ಜನಪ್ರಿಯ ಕೃತಿ.

ಮಂಜಪ್ಪನವರ 'ವೀರಶೈವ ಸಮಾಜ ಸುಧಾರಣೆ' (1921) ಅಂದಿನ ಸಾಮಾಜಿಕ ಹಾಗೂ ರಾಜಕೀಯ ತುರ್ತು ಆಶಯವನ್ನು ಒಳಗೊಂಡದ್ದು. ಬ್ರಾಹ್ಮಣೇತರ ಪಕ್ಷದಲ್ಲಿ ಸೇರಿಕೊಂಡು ರಾಷ್ಟ್ರೀಯ ಚಳುವಳಿಯನ್ನು ದುರ್ಬಲಗೊಳಿಸುತ್ತಿದ್ದ ಅಂದಿನ ಕರ್ನಾಟಕ ವೀರಶೈವರ ಹುಚ್ಚನ್ನು ಬಿಡಿಸಿದ ಹಾಗೂ ವಾಸ್ತವ ಪ್ರಜ್ಞೆಯನ್ನು ಮೂಡಿಸಿದ ಮಹತ್ವದ ಕೃತಿ. ಬಸವಣ್ಣನವರ ಸಾಮಾಜಿಕ ಮೌಲ್ಯಗಳ ಪುನರನುಷ್ಠಾನಕ್ಕೆ ಪ್ರೇರೇಪಿಸಿದ ಅತ್ಯಂತ ಜನಪ್ರಿಯವಾದ ಚಿಕ್ಕ ಕೃತಿ. ಇದೇ ಕೃತಿಯ 15 ಸಾವಿರ ಪ್ರತಿಗಳನ್ನು ಅಂದಿನ ಕಾಲದಲ್ಲಿ ಉಚಿತವಾಗಿ ಹಂಚಲಾಗಿತ್ತು.

ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ಮಕ್ಕಳ ಸ್ಥಾನಮಾನವನ್ನು, ರಾಷ್ಟ್ರದ ಭವಿಷ್ಯದಲ್ಲಿ ಅವರ ಪಾತ್ರವನ್ನು ಅರ್ಥಮಾಡಿಕೊಂಡಿದ್ದ ಮಂಜಪ್ಪನವರು ಆ ಕುರಿತು ಸಾಕಷ್ಟು ದೂರದೃಷ್ಟಿಯುಳ್ಳವರಾಗಿದ್ದರು. ಆ ಉದ್ದೇಶಕ್ಕಾಗಿ ಬಸವಣ್ಣನವರ ಚರಿತ್ರೆ, ಅಕ್ಕನ ಉಪದೇಶ, ಪ್ರಭುವಿನ ಕಥೆ, ಶರಣ ಬಸವೇಶ್ವ ಚರಿತ್ರೆ, ಬಸವಭಕ್ತಿ ಇತ್ಯಾದಿ ಕನ್ನಡ ಪ್ರಾಚೀನ ಶಿವಶರಣರ ಚರಿತ್ರೆಯನ್ನು ಹಾಗೂ ಲಜಪತರಾಯರ ಚರಿತ್ರೆ, ದಾದರ ಅವರ ಚರಿತ್ರೆ ಇತ್ಯಾದಿಯಾಗಿ ಮಕ್ಕಳ ಸಾಹಿತ್ಯ ರಚನೆಗೂ ಆದ್ಯ ಗಮನ ಹರಿಸಿದರು. ಮಕ್ಕಳ ಅದರಲ್ಲೂ ಗ್ರಾಮೀಣ ಪರಿಸರದ ಮಕ್ಕಳ ಮನೋಧರ್ಮಕ್ಕೆ ಮಂಜಪ್ಪನವರು ಸ್ಪಂದಿಸಿದ ರೀತಿಯೇ

ಅತ್ಯಂತ ಆಕರ್ಷಕ. ಮುಖ್ಯವಾಗಿ ಮಂಜಪ್ಪನವರಿಗೆ ಏನನ್ನು ಸಾಧಿಸಬೇಕು? ಹೇಗೆ ಸಾಧಿಸಬೇಕು ಎಂಬುವರ ಸ್ಪಷ್ಟ ಕಲ್ಪನೆಯಿತ್ತು. ಅಂತೆಯೇ ಅತ್ಯಂತ ತಿಳಿಯಾದ, ಸರಳವಾದ ಮತ್ತು ಅಷ್ಟೇ ಸ್ಪಷ್ಟವಾದ ಭಾಷೆಯಲ್ಲಿ ವಿಷಯವನ್ನು ಆತ್ಮೀಯವಾಗಿ ಸಂವಹನಗೊಳಿಸುವ ಪ್ರಯತ್ನ ಎದ್ದು ಕಾಣುತ್ತದೆ. ಇದೇ ಕಾರಣಕ್ಕಾಗಿ ಅವುಗಳಲ್ಲಿ ಒಂದು ಬಗೆಯ ಸಿದ್ಧಭಾಷೆ, ಸಿದ್ಧಶೈಲಿ, ಸಿದ್ಧತಂತ್ರವೂ ಎದ್ದುಕಾಣುತ್ತದೆ. ಅವರ ಕಾಳಜಿ ಏನಿದ್ದರೂ ಸಾಮಾಜಿಕವೇ ಹೊರತು ಸಾಹಿತ್ಯಿಕವಲ್ಲ ಎಂಬ ಮಾತು ಮತ್ತೆ ನೆನಪಿಗೆ ಬರುತ್ತದೆ.

ಬಸವಣ್ಣನವರನ್ನು ಕುರಿತು 'ಶ್ರೀಬಸವಚರಿತ್ರೆ' ಎಂಬ ಸಂಶೋಧನಾತ್ಮಕ ಗ್ರಂಥವನ್ನು ಬರೆದ ಮಂಜಪ್ಪನವರು 'ಬಸವಣ್ಣನವರ ಚರಿತ್ರೆ' ಎಂಬ ಕೃತಿಯನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಅವೆರಡರಲ್ಲಿಯ ಭಾಷ-ಶೈಲಿ ಇತ್ಯಾದಿಗಳಲ್ಲಿಯ ಪ್ರಜ್ಞಾಪೂರ್ವಕ ವ್ಯತ್ಯಾಸ ಗಮನಾರ್ಹವೆನಿಸುತ್ತದೆ.

"ತಮ್ಮಾ, ಈ ದಿನ ನಿನಗೆ ಒಬ್ಬ ಮಹಾನುಭಾವರ ಚರಿತ್ರೆಯನ್ನು ಹೇಳುತ್ತೇನೆ. ಮನಸ್ಸಿಟ್ಟು ಕೇಳು," ಎಂದು ಆರಂಭಗೊಳ್ಳುವ ಬಸವಣ್ಣನವರ ಚರಿತ್ರೆ, "ತಂಗಿ, ನಿನಗೆ ಒಬ್ಬ ಅಕ್ಕನ ಕಥೆಯನ್ನು ಹೇಳುತ್ತೇನೆ, ಅತ್ತಿತ್ತ ನೋಡದೆ ಮನಸ್ಸುಗೊಟ್ಟು ಕೇಳು" ಎಂದು ಆರಂಭವಾಗುವ ಮಹಾಶಿವಶರಣೆ ಅಕ್ಕನ ಚರಿತ್ರೆ, ಲೇಖಕರ ಹಾಗೂ ಓದುಗರ ನಡುವೆ ಒಂದು ವಿಶೇಷ ಬಾಂಧವ್ಯವನ್ನುಂಟುಮಾಡುತ್ತದೆ. ಮಕ್ಕಳ ಮನಸ್ಸನ್ನು ಒಲಿಸಿಕೊಳ್ಳುವ, ವಿಷಯದ ಗಾಂಭೀರ್ಯದ ಬಗ್ಗೆ ಆರಂಭದಲ್ಲಿಯೇ ಎಚ್ಚರಿಕೆಯನ್ನು ಮೂಡಿಸುವ ಮತ್ತು ವಿಷಯವನ್ನು ಮನನಮಾಡಿಸಿಕೊಡಲು ಬೇಕಾದ ಮಾನಸಿಕ ಪೂರ್ವಸಿದ್ಧತೆಗೆ ಅಣಿಗೊಳಿಸಿಕೊಡುವ ರೀತಿ ಆಪ್ತವೆನಿಸುತ್ತದೆ. ಬಸವಣ್ಣನವರ ಚರಿತ್ರೆಯನ್ನು ಹೇಳು ಹೇಳುತ್ತಲೇ, ಬಾಲಬಸವನ ಬುದ್ಧಿವಂತಿಕೆಯನ್ನು ವಿವರಿಸುತ್ತಲೇ "ಕೆಟ್ಟ ಮಾತುಗಳಂತೂ ಒಂದು ಸಲವಾದರೂ ಈತನ ಬಾಯಿಯಿಂದ ಹೊರಡುತ್ತಿರಲಿಲ್ಲ" ಎಂದು ಹೇಳುತ್ತ ಅದೇ ಉಸಿರಿನಲ್ಲಿ "ತಮ್ಮಾ ಒಳ್ಳೆಯ ಹುಡುಗರು ಹೀಗೆಯೇ ಇರುತ್ತಾರೆ," ಎಂದು ಚರಮ ಸಂದೇಶಕ್ಕೆ ಬಂದು ನಿಲ್ಲುವದು – ಇವೆಲ್ಲ ಕೃತಿಯ ಒಟ್ಟು ಆಶಯವನ್ನು ವ್ಯಂಜಿಸಿಕೊಡುವಂಥವುಗಳಾಗಿವೆ. ಇದರಿಂದ ಬಾಲಬಸವನ ಚರಿತ್ರೆ ಮಕ್ಕಳಿಗೆ ಒಂದು ಆದರ್ಶ ಮಾದರಿಯಾಗಿಬಿಡುತ್ತದೆ. ಈ ತಂತ್ರ ಇದೇ ಕೃತಿಯಲ್ಲಲ್ಲದೆ ಮಿಕ್ಕ ಕೃತಿಗಳಲ್ಲಿಯೂ ಎದ್ದು ಕಾಣುವ ವೈಶಿಷ್ಟ್ಯ. ಬಸವ ಹಾಗೂ ಪ್ರಭುವಿನ ಚರಿತ್ರೆಯ ಕೊನೆಯಲ್ಲಿ ಅವರ ವಚನಗಳನ್ನು ಉದ್ಧರಿಸುವದು, ಅದಕ್ಕೂ ಹೆಚ್ಚಾಗಿ "ಅಕ್ಕನ ಉಪದೇಶ" ದಲ್ಲಿ ಅಕ್ಕನ ವಚನಗಳನ್ನು ಉದ್ಧರಿಸಿ ಅರ್ಥವಿವರಣೆಯನ್ನೂ ಕೊಟ್ಟಿದ್ದು ಮೂಲ ಉದ್ದೇಶಕ್ಕೆ ಹೆಚ್ಚು ಪೂರಕವಾಗಿದೆ. ಇಷ್ಟಾಗಿಯೂ ಇಲ್ಲಿಯ ಬರವ ಮಕ್ಕಳಲ್ಲಿ ಲವಲವಿಕೆ, ತನ್ಮಯತೆ, ಉಲ್ಲಾಸವನ್ನು ಮೂಡಿಸುವಂತಹದಲ್ಲ. ಕೈಕಟ್ಟಿಕೊಂಡು ಉಸಿರನ್ನು ಬಿಗಿಹಿಡಿದು ಕೇಳುವ ಒಂದು ಬಗೆಯ ದೆದರಿಕೆಯ ಆವರಣವನ್ನು ಉಂಟು ಮಾಡುವಂತಹದು. ಇಲ್ಲಿಯದು

ಪ್ರಭುಸಮ್ಮಿತ್ರೋಕ್ತಿಯೇ ಹೊರತು ಮಿತ್ರಸಮ್ಮಿತ್ರೋಕ್ತಿಯಲ್ಲ. ಹೀಗಾಗಿ ಲೇಖಕ ಒಬ್ಬ ಶಿಕ್ಷಕನಾಗಿ, ಓದುಗ ವಿದ್ಯಾರ್ಥಿಯಾಗಿ ಕಾಣಿಸಿಕೊಂಡು ಅವರಿಬ್ಬರ ಸಂಬಂಧ ಗುರು–ಶಿಷ್ಯರದಾಗಿ ಉಳಿಯುತ್ತವೆ.

ಇನ್ನು 'ಬಸವಬೋಧಾಮೃತ' 'ಬಸವಸಂದೇಶ' 'ಭಕ್ತಿಯ ಬೆಳಕು'– ಈ ಎಲ್ಲ ಕೃತಿಗಳು ಜನಸಾಮಾನ್ಯರ ದೃಷ್ಟಿಯಿಂದ ಹೆಚ್ಚು ಉಪಯುಕ್ತವಾದ ವಚನಗಳ ಸಂಗ್ರಹಗಳಾಗಿವೆ. 'ಬಸವಬೋಧಾಮೃತ' 'ಭಕ್ತಿಯ ಬೆಳಕು', ಗಳಲ್ಲಿ ವಚನಗಳಿಗೆ ಸರಳಾರ್ಥವನ್ನೂ ಒದಗಿಸಲಾಗಿದೆ. ಅವರಲ್ಲೂ ಬಸವಬೋಧಾಮೃತ ಮರಾಠಿಗೂ ಅನುವಾದವಾದ ಜನಪ್ರಿಯ ಕೃತಿ.

'ಸುಬೋಧಸಾರ' ಇಂದಿಗೂ ಜನಮನದಲ್ಲಿ ರಿಂಗಣಿಸುತ್ತಿರುವ ಕರ್ನಾಟಕದ ಖಿಯಿಧಿಖ್ಯಾತ ಅನುಭಾವಿಗಳಾದ ಮುಪ್ಪಿನ ಷಡಕ್ಷರಿಗಳ ಹಾಡುಗಳ ಸಂಗ್ರಹ.

ಮಂಜಪ್ಪನವರು ಮೂಲತಃ ಒಬ್ಬ ಕವಿಯಲ್ಲದಿದ್ದರೂ, ಕಾವ್ಯರಚನೆಗೆ ಅವರ ಪ್ರತಿಭೆ ಉಪೇಕ್ಷಿತವಲ್ಲ. ಆದರೆ ಅವರ ಪದ್ಯ ಅವರ ಗದ್ಯಕ್ಕಿಂತ ರೂಪಾಂಶದಲ್ಲಿ ಬೇರೆಯೇ ಹೊರತು ಆಶಯ–ಧೋರಣೆಯಲ್ಲಲ್ಲ. ಅವರ ಪದ್ಯವೂ ಸಾಮಾಜಿಕ ಬದ್ಧತೆಯಿಂದಲೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಂತಹದು.

'ಸಂಗನ ಬಸವಸ್ತುತಿ' ಎಂಬ ಅವರ ಪದ್ಯದ ತಲೆಬರಹವೇ ಅವರ ಆಶಯ–ಸ್ವರೂಪದ ಇತಿಮಿತಿಯನ್ನು ಸೂಚಿಸುವಂತಹದು. ಬಸವಣ್ಣವನರ ಧಾರ್ಮಿಕ, ಸಾಮಾಜಿಕ ಚಟುವಟಿಕೆ ಮತ್ತು ಅವರ ಸಮೃದ್ಧ ವ್ಯಕ್ತಿತ್ವನ್ನು ಕುರಿತು ಸ್ತುತಿಪರವಾದ, ಸುದೀರ್ಘವಾದ ಸರಳ ಪದ್ಯವದು. ಪ್ರತಿಯೊಂದು ಚರಣವೂ ಎರಡು ಘಟಕಗಳಿಂದ ಕೂಡಿದ್ದು ಮೊದಲನೆಯ ಘಟಕ ಬಸವಣ್ಣನವರ ಚಾರಿತ್ರಿಕ ಅಂಶವನ್ನು ಮತ್ತು ವ್ಯಕ್ತಿತ್ವವನ್ನು ಉಗ್ಗಡಿಸಿದರೆ ಎರಡನೆಯದು "ಶರಣು ಶರಣು ಸಂಗನ ಬಸವ" ಎಂಬ ಪಲ್ಲವಿಯ ಪುನರಾವರ್ತನೆಯಿಂದ ಮುಕ್ತಾಯಗೊಳ್ಳುತ್ತದೆ. ಅದರಿಂದ ಭಜನೆಯ ಸಂದರ್ಭದಲ್ಲಿ ಹಿಮ್ಮೇಳ–ಮುಮ್ಮೇಳಗಳಿಗೆ ಅವಕಾಶ ದೊರೆಯುತ್ತದೆ; ಇಂಥ ಜಾನಪದ ತಂತ್ರವು ಸರಳ ಚರಣಗಳಿಗೂ ಸ್ವಾರಸ್ಯವನ್ನು ತನ್ಮಯತೆಯನ್ನು ಒದಗಿಸುತ್ತದೆ. ಆದಿ ಪ್ರಾಸ ಹಾಗೂ ಅಂತ್ಯ ಪ್ರಾಸಗಳ ಸಹಜತೆ ಅವರ ವಾಚ್ಯತೆಯಲ್ಲೂ ಸೊಗಸನ್ನು ಮೂಡಿಸುತ್ತದೆ.

"ಅಪ್ಪ ಮಾದರ ಚೆನ್ನನೆಂದೆ | ಶರಣು ಶರಣು ಸಂಗನ ಬಸವ
ದೊಪ್ಪ ಡೋಹರ ಕಕ್ಕನೆಂದೆ| ಶರಣು ಶರಣು ಸಂಗನಬಸವ"

ಕೆಲವೆಡೆ ಪದ್ಯ ಲಯದಿಂದ, ಗೇಯತೆಯಿಂದ ವಂಚಿತವಾದಂತೆ ಕಂಡುಬಂದರೂ

ಹಾಡಿನ ಸಂದರ್ಭದಲ್ಲಿ ಲಯಕ್ಕೆ ಸ್ಥಿತಿಸ್ಥಾಪಕಗುಣವಿರುವದರಿಂದ ಒಟ್ಟು ಹಾಡು ರಸಾನುಭವವನ್ನು ಕೊಡುವಲ್ಲಿ ಯಶಸ್ವಿಯಾಗುತ್ತದೆ. ಇಷ್ಟಾಗಿಯೂ ಇದು ಕೂಡ ಮಂಜಪ್ಪವನರ ಸೃಜನಶೀಲ ಪ್ರತಿಭೆಯನ್ನು ಪ್ರತಿನಿಧಿಸುವ ಕೃತಿಯಲ್ಲ.

ಅವರ ಸೃಜನಶೀಲ ಪ್ರತಿಭೆ ಮೈನೆರದು ನಿಂತಿರುವದನ್ನು ಅವರ 'ಪ್ರಭುದೇವ' ಎಂಬ ಅಂಕಿತದಲ್ಲಿ ರಚಿತವಾದ ವಚನಗಳಲ್ಲಿ ಕಾಣಬಹುದು. "ಜನಸೇವಕನ ವಚನಗಳು" ಎಂಬ ಕೃತಿ ಮಂಜಪ್ಪವನರ ಸಂಕಲನ, ಅವರ ಲೋಕಾನುಭವ–ಶಿವಾನುಭವ ಹಾಗೂ ವ್ಯಕ್ತಿತ್ವದ ಕಲಾತ್ಮಕ ಅಭಿವ್ಯಕ್ತಿಯ ಪ್ರತಿಫಲನವಾಗಿದೆ. ಅವುಗಳಲ್ಲಿ ಸಾಮಾಜಿಕ ಕಳಕಳಿ ಇದೆ. ಧರ್ಮವನ್ನು ಕುರಿತ ಮತ್ತು ಆಧ್ಯಾತ್ಮವನ್ನು ಕುರಿತ ಸೂಕ್ಷ್ಮಜಿಜ್ಞಾಸೆಯೂ ಇದೆ. ಈ ಮಾತಿಗೆ ಒಂದು ಸಣ್ಣ ಉದಾಹರಣೆ:

**"ಧರ್ಮವು ಮನಕಲ್ಲದೆ ತನುವಿಗುಂಟೆ ಅಯ್ಯ**
**ಮನ ಭಿನ್ನವಿರುವ ಸಿರಿ ಧರ್ಮಭಿನ್ನವಾಗಿಪ್ಪದು ಸಹಜ ನೋಡಾ**
**ಗೋವಿಗೆ ನಾನಾ ವರ್ಣಗಳಲ್ಲದೆ ಕ್ಷೀರಕೆ ನಾನಾ ವರ್ಣಗಳುಂಟೆ**
**ಧರ್ಮ ಭಿನ್ನವಾಗಿರ್ದೊಡೆ ದಯಭಿನ್ನವಾಗಿರಬಹುದೆ**
**ಪ್ರಭುದೇವಾ ಜನಸೇವಕಂಗೆ ಗೋವರ್ಣಕಾಣದೆ**
**ಕ್ಷೀರವೊಂದೇ ಕಾಣುವಂತೆ ಮಾಡಯ್ಯ"**

ಯಾವ ವಿವರಣೆಯ ಹಂಗನ್ನೂ ಹರಿದುನಿಂತ ಇಲ್ಲಿಯ ಚಿಂತನೆಗಳು ಆಕಾರಗೊಳ್ಳುವ ಪರಿಯನ್ನು ನಿರೀಕ್ಷಿಸದೇಕು. ಪರಿಚಿತವೆನ್ನಬಹುದಾದ ದೃಷ್ಟಾಂತಗಳೇ ಅಪರಿಚಿತ ವಿಚಾರ–ಭಾವವನ್ನು ಆವಿಷ್ಕರಿಸಿಕೊಡುವ ಪರಿ ಮೆಚ್ಚುವಂತಹದು.

ಹೀಗೆ ಮಂಜಪ್ಪನವರ ಧಾರ್ಮಿಕ ಸಾಹಿತ್ಯ ವೀರಶೈವ ಶರಣರನ್ನು ಹಾಗೂ ಮತತತ್ವಗಳನ್ನು ಕೇಂದ್ರವಾಗಿಟ್ಟುಕೊಂಡಂತೆ ಕಂಡುಬಂದರೂ ಅದು ಸಾಮಾಜಿಕ, ರಾಷ್ಟ್ರೀಯ ವಸ್ತು–ವಿಷಯವನ್ನು ಸಮೀಕರಿಸಿಕೊಡುವಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ.

●

# ರಾಷ್ಟ್ರೀಯ ಸಾಹಿತ್ಯ

ರಾಷ್ಟ್ರೀಯತೆ ಮಂಜಪ್ಪನವರ ವ್ಯಕ್ತಿತ್ವದ ಮೂಲದ್ರವ್ಯ. ಅವರ ಬದುಕಿನ ಎಲ್ಲ ಆದರ್ಶ ಹಾಗೂ ಸಾಹಿತ್ಯವನ್ನು ಒಳಗೊಂಡಂತೆ, ಅದು ಅವರ ಬದುಕಿನ ಎಲ್ಲ ಚಟುವಟಿಕೆಗಳ ಕೇಂದ್ರ ಶಕ್ತಿಯೂ ಹೌದು. ಹಾಗೆಂದೇ ಅವರ ಸೈದ್ಧಾಂತಿಕ ಬದುಕಿನ ಸಾಧನೆ–ಸಿದ್ಧಿ ಮತ್ತು ಅವರ ಒಟ್ಟು ಸಾರ್ಥಕತೆಯ ಸಂದರ್ಭದಲ್ಲಿ ಅವರ ರಾಷ್ಟ್ರೀಯ ಪ್ರಜ್ಞೆ ಹಾಗೂ ಕಳಕಳಿಯನ್ನೇ ಕುರಿತು ಮತ್ತೆ ಮತ್ತೆ ಒತ್ತುಗೊಟ್ಟು ಹೇಳಬೇಕಾಗುತ್ತದೆ.

ರಾಜಕೀಯ ಆಂದೋಲನದ ಒಂದು ವಿಶಿಷ್ಟ ಕಾಲಾವಧಿಯ ಸಂದರ್ಭದಲ್ಲಿಯೇ ಮಂಜಪ್ಪನವರ ವ್ಯಕ್ತಿತ್ವ ಆಕಾರಗೊಂಡದ್ದು; ಮತ್ತು ರಾಷ್ಟ್ರಕ್ಕಾಗಿಯೇ ತಮ್ಮನ್ನು ಒಮ್ಮನಸ್ಸಿನಿಂದ ಸಮರ್ಪಿಸಿಕೊಂಡಿದ್ದ ಮಂಜಪ್ಪನವರಿಗೆ ಆ ದಿಸೆಯಲ್ಲಿ ಪ್ರೇರಣೆ–ಪ್ರಚೋದನೆ ಒದಗಿದ್ದು ಕೂಡ ಅಂದಿನ ರಾಷ್ಟ್ರದ ಪುಣ್ಯಜೀವಿಗಳಾಗಿದ್ದ ಟಿಳಕ, ಗಾಂಧಿ, ಸ್ವಾಮಿ ರಾಮತೀರ್ಥರಂಥವರ ತತ್ವನಿಷ್ಠ ಬದುಕು ಮತ್ತು ಹೋರಾಟದಿಂದಲೆ. ಹೀಗೆ ಅಂದಿನ ರಾಷ್ಟ್ರೀಯ ಹೋರಾಟದ ಸಂದರ್ಭ ಹಾಗೂ ಅಂದಿನ ಮುಖಂಡರ ಪ್ರಭಾವವಲಯದಲ್ಲಿಯೇ ಬೆಳೆದು ಬಂದಿದ್ದರೂ ಮಂಜಪ್ಪನವರ ವ್ಯಕ್ತಿತ್ವ ತನ್ನ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಂಡದ್ದು ಅಂದಿನ ದಿನಮಾನಗಳ ಹಿನ್ನೆಲೆಯಲ್ಲಿ ಒಂದು ದೊಡ್ಡ ವಿಸ್ಮಯ. ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆ, ಅದು ಎಷ್ಟೇ ದೊಡ್ಡದೆನಿಸಿದರೂ ಚಿಂತೆಯಿಲ್ಲ, ಅದಕ್ಕೆ ಇರುವ ಇತಿಮಿತಿಯನ್ನು ಮಂಜಪ್ಪನವರು ಸ್ಪಷ್ಟವಾಗಿ ಕಂಡುಕೊಂಡಿದ್ದರು.' ಅಂತೆಯೇ ಯಾವ ರಾಜಕೀಯ ಮುಖಂಡರ ಅನುಯಾಯಿಗಳಾಗುವದಕ್ಕಾಗಲಿ ಅಥವಾ ತಾವೇ ಸ್ವತಃ ಒಬ್ಬ ಮುಖಂಡರಾಗುವದಕ್ಕಾಗಲಿ ಕನಸು–ಮನಸಿನಲ್ಲೂ ಬಯಸಲಿಲ್ಲ. ಅದು ಅವರ ಜಾಯಮಾನವೂ ಆಗಿರಲಿಲ್ಲ. ಒಂದು ರೀತಿಯಲ್ಲಿ ಗಾಂಧಿಯವರ ಅನುಯಾಯಿಯಾಗಿ ಕಂಡರೂ ಅವರ ಕುರುಡು ಹಿಂಬಾಲಕರಂತೆ ಹೆಜ್ಜೆ ಹಾಕಿರಲಿಲ್ಲ. ಅಂದಿನ ರಾಜಕೀಯ ಚಳುವಳಿಯಲ್ಲಿ ಧುಮಿಕಿ ಸೆರೆಮನೆ ಸೇರಿ ನಿಷ್ಕ್ರಿಯರಾಗುವದೂ ಅವರಿಗೆ ಬೇಕಿರಲಿಲ್ಲ. ಕೊನೆಯ ಪಕ್ಷ ರಾಷ್ಟ್ರೀಯ ಸಭೆಯ ಸದಸ್ಯರೂ ಆಗಿರಲಿಲ್ಲ. ಅಷ್ಟೇಯೇಕೆ, ತಾವೇ ಕಟ್ಟಿದ ಸಂಸ್ಥೆಗೆ ಬದ್ಧರಾಗಿರುವದು ಆತ್ಮವಂಚನೆ ಎಂದು ಕಂಡುಬಂದಾಗ, ಅಂಥ ಸಂಸ್ಥೆಯಿಂದ ದೂರವಾದದ್ದೂ ಉಂಟು. ಹೀಗೆ ಮಹಾತ್ಮರೆನಿಸಿಕೊಳ್ಳುವ ಯಾವ ವ್ಯಕ್ತಿಗಳನ್ನು ಕುರುಡು ನಂಬಿಕೆಯಿಂದ ಅನುಸರಿಸದ ಮಂಜಪ್ಪನವರು ತಾವೇ ಒಬ್ಬ ಮಹಾತ್ಮರಾದರು; ಯಾವ ಸಂಸ್ಥೆಗೂ ಜೋತುಬೀಳದ ಮಂಜಪ್ಪನವರು ತಾವೇ ಒಂದು ಸಂಸ್ಥೆಯಾಗಿ ತಮ್ಮ ಜೀವನದುದ್ದಕ್ಕೂ

ದುಡಿದರು. ಅವರ ಮೇರೆಗೆ ಯಾವುದೇ ವ್ಯಕ್ತಿ–ತತ್ವ–ಸಿದ್ಧಾಂತ ಯಾವುದೂ ಸ್ಥಿರವಲ್ಲ; ಸ್ಥಿರವಾದದ್ದೇ ಆದರೆ, ಆಗ ಅದು ಸ್ಥಾವರ; ಸ್ಥಾವರವೇ ಆದರೆ ಅದಕ್ಕೆ ಚಲನಶೀಲತೆ ಇಲ್ಲ. ಆದ್ದರಿಂದ ಚಲನಶೀಲತೆಯನ್ನೇ ನಂಬಿದ ಮಂಜಪ್ಪನವರು ತಮ್ಮ ಜೀವನದುದ್ದಕ್ಕೂ ಸ್ವತಂತ್ರ ಮನೋಧರ್ಮದ ಪ್ರಯೋಗಶೀಲರಾಗಿ ಬದುಕಿದರು.

ತನ್ನ ಎಲ್ಲ ನೆಲೆಗಳಲ್ಲಿಯೂ ಜೊಳ್ಳಿಸಿಹೋಗಿದ್ದ ರಾಷ್ಟ್ರದ ಪುನರ್ನಿರ್ಮಾಣಕ್ಕೆ ಮಂಜಪ್ಪನವರು ಒಂದು ವಿಶಿಷ್ಟ ಹಾಗೂ ಪರಿಣಾಮಕಾರಿಯಾದ ವಿನೂತನ ಮಾರ್ಗವೊಂದರ ಅನ್ವೇಷಣೆಗೆ ಮತ್ತು ಹೊಸ ಸಿದ್ಧಾಂತಗಳ – ಪ್ರಣಾಳಿಕೆಗಳ ಶೋಧನೆಗೆ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದರು. ಮಂಜಪ್ಪನವರಂಥ ರಾಷ್ಟ್ರೀಯವಾದಿಗಳು ಅಂದಿನ ಭಾರತದಂಥ ಸಂಕೀರ್ಣ ಸಂದರ್ಭದಲ್ಲಿ ಹಲವಾರು ಕಠಿಣ ಸಮಸ್ಯೆಗಳನ್ನು, ಹಲವಾರು ಬಿರುಸಿನ ಸವಾಲುಗಳನ್ನು ಎದುರಿಸಬೇಕಿತ್ತು. ಅದಕ್ಕಾಗಿ ತಮ್ಮ ಮಿತಿಯಲ್ಲಿಯೇ ಒಂದು ನಿರ್ದಿಷ್ಟ ನೆಲೆಯನ್ನು ಆಯ್ಕೆಮಾಡಿಕೊಳ್ಳುವದು ಅನಿವಾರ್ಯವಾಗಿತ್ತು. ಹಾಗಾಗಿ ಸಮಗ್ರ ರಾಷ್ಟ್ರದ ಹಿತಚಿಂತಕರಾಗಿಯೂ ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡರು. ವೀರಶೈವ ಧರ್ಮದ ಅಡಿಯಲ್ಲಿಯೇ ರಾಷ್ಟ್ರೀಯ ಚಟುವಟಿಕೆಗಳನ್ನು ತೀವ್ರಗೊಳಿಸಿದರು. ರಾಷ್ಟ್ರನಿರ್ಮಾಣದ ದೃಷ್ಟಿಯಿಂದ ಅಂದಿನ ಜನಾಂಗದ ಬೌದ್ಧಿಕತೆಗೆ ಸಾಣೆಹಿಡಿದು ಅದಕ್ಕೆ ಹೊಸ ಆಯಾಮ ಒದಗಿಸುವದು, ವೈಚಾರಿಕತೆಗೆ ಹೊಸ ತಿರುವನ್ನು ಕೊಡುವದು, ಭಾವನಾತ್ಮಕತೆಯನ್ನು ಪರಿಷ್ಕರಣಕ್ಕೆ ಒಳಪಡಿಸುವುದು ಮತ್ತು ಪ್ರಾಚೀನ ಹಾಗೂ ಆಧುನಿಕ ಮೌಲ್ಯಗಳನ್ನು ಸಮೀಕರಿಸಿ ವರ್ತಮಾನಕ್ಕೆ ಹೊಂದಿಸಿಕೊಡುವುದು– ಈ ಎಲ್ಲಗಳ ಮೂಲಕ ರಾಷ್ಟ್ರನಿರ್ಮಾಣಕ್ಕೆ ಸಮುದಾಯವನ್ನು ಸಮರ್ಥಗೊಳಿಸುವುದು ಅವರ ಮಹತ್ವಾಕಾಂಕ್ಷೆಯ ನೀಲನಕ್ಷೆಯಾಗಿತ್ತು.

ಸಾಹಿತ್ಯರಚನೆ ಅವರ ರಾಷ್ಟ್ರೀಯ ಚಟುವಟಿಕೆಗಳ ಪ್ರಮುಖ ಅಂಗವಾದ್ದರಿಂದ ಮತ್ತು ಅದನ್ನು ಒಂದು ಉಪಯುಕ್ತ ಸಾಧನೆ ಹಾಗೂ ಹವ್ಯಾಸವನ್ನಾಗಿಯೂ ಬೆಳೆಸಿಕೊಂಡು ಬಂದದ್ದರಿಂದ ರಾಷ್ಟ್ರಜೀವನದ ಪ್ರತಿಯೊಂದು ಘಟಕಾಂಶಗಳನ್ನು ಕುರಿತೂ ಅವರ ಸಾಹಿತ್ಯ ವಿಶೇಷ ಕಾಳಜಿಯನ್ನು ವಹಿಸಿತ್ತು. ಕುಟುಂಬ, ಸಮಾಜ, ಧರ್ಮ, ಪ್ರದೇಶ–ಪ್ರಾಂತಗಳೆಲ್ಲ ಒಂದು ರಾಷ್ಟ್ರದ ಅವಿಭಾಜ್ಯ ಅಂಗವೆಂದು ಮನಗಂಡಿದ್ದರಿಂದ ಅವುಗಳಲ್ಲಿಯ ಆಂತರಿಕ ಸಂಬಂಧದ ಬಗೆಗೂ ಒಳನೋಟವನ್ನು ಹರಿಸಿದ್ದರು. ಅವುಗಳ ಆರೋಗ್ಯಪೂರ್ಣವಾದ ಬೆಳವಣಿಗೆಯ ಅನಿವಾರ್ಯದ ಬಗ್ಗೆ ಅವರಿಗೆ ನಿಜವಾದ ಅರಿವು ಇತ್ತು. ಅಂದಿನ ರಾಜಕೀಯ ಚಳುವಳಿಯ ಆವೇಶದಲ್ಲಿ ತಮ್ಮನ್ನೇ ತಾವು ಗುರುತಿಸಿಕೊಳ್ಳದಷ್ಟು ಕಳೆದುಕೊಂಡು ಹೋಗಿದ್ದ ಮುಖಂಡರಿಗೆ ಇಂಥ ಸಮಗ್ರ ಪ್ರಜ್ಞೆ ಇಲ್ಲದಾಗ ಮಂಜಪ್ಪನವರು ಆ ಕುರಿತು ಕ್ರಿಯಾಶೀಲರಾಗಿ ತಮ್ಮನ್ನು ತೊಡಗಿಸಿಕೊಂಡದ್ದು ದೊಡ್ಡ ಮಾತು. ಅದರ ಪರಿಣಾಮವಾಗಿ ವ್ಯಕ್ತಿ, ಕುಟುಂಬ, ಸಮಾಜ, ಧರ್ಮ ಇತ್ಯಾದಿಗಳ

ಬಗ್ಗೆ ವಿಪುಲ ಸಾಹಿತ್ಯ ಹುಲುಸಾಗಿ ಬೆಳೆಯಿತು. ವಿಷಯ ವೈವಿಧ್ಯತೆ ಹಾಗೂ ರೂಪ ವೈವಿಧ್ಯತೆಯಿಂದ ಕೂಡಿದ ಅವರ ಸಾಹಿತ್ಯದ ಒಟ್ಟು ಉದ್ದೇಶ ರಾಷ್ಟ್ರೀಯತೆಯೇ ಎಂಬುವರಲ್ಲಿ ಎರಡು ಮಾತಿಲ್ಲ.

ಒಟ್ಟಿನಲ್ಲಿ 'ಬಸವಣ್ಣನವರ ವಚನಗಳಲ್ಲಿ ಉಪಮೆ' ಎಂಬಂಥ ಒಂದೆರಡು ಕೃತಿಗಳನ್ನು ಬಿಟ್ಟರೆ ಅವರ ಒಟ್ಟು ಸಾಹಿತ್ಯವೇ ರಾಷ್ಟ್ರೀಯ ಧೋರಣೆಗಾಗಿ ಮೀಸಲಾದದ್ದು. ಆದರೂ ರಾಷ್ಟ್ರೀಯತೆಯನ್ನೇ ನೇರಗುರಿಯನ್ನಾಗಿಟ್ಟುಕೊಂಡು ವೈಚಾರಿಕ, ಸಂಶೋಧನಾತ್ಮಕ ಕೃತಿಗಳನ್ನು ಶುದ್ಧ ರಾಷ್ಟ್ರೀಯ ಸಾಹಿತ್ಯವೆಂದು ಪ್ರತ್ಯೇಕವಾಗಿ ಪರಿಗಣಿಸಬೇಕಾಗುತ್ತದೆ. ಇಂಥ ರಾಷ್ಟ್ರೀಯ ಶುದ್ಧ ಸಾಹಿತ್ಯದಲ್ಲಿಯೇ ಅನುವಾದ ಹಾಗೂ ಸ್ವತಂತ್ರ ಕೃತಿಗಳೆಂದು ಮತ್ತೆ ಎರಡು ಪ್ರಕಾರಗಳನ್ನು ಗುರುತಿಸಬಹುದು. ಈ ಎರಡು ಪ್ರಕಾರಗಳಲ್ಲಿ ಜೀವನ ಚರಿತ್ರೆ, ಸಂಶೋಧನೆ ಹಾಗೂ ಇತರ ಜನಪ್ರಿಯ ಸಾಹಿತ್ಯವೂ ಸಮಾವೇಶಗೊಳ್ಳುತ್ತದೆ.

ಶ್ರೀರಾಮತೀರ್ಥರವರ ಉಪನ್ಯಾಸಗಳು, ಹಿಂದುತ್ವ, ಕೇರ್ ಹಾರ್ಡಿಯವರ ಭಾರತ ಪರ್ಯಟನ, ಮಹಾತ್ಮಾ ಗಾಂಧೀಜಿಯವರ ಚರಿತ್ರೆಯ ಸುದೀರ್ಘ ಅನುಬಂಧ– ಇವೇ ಮುಂತಾದವುಗಳು ಭಾಷಾಂತರ ಕಕ್ಷೆಯಲ್ಲಿ ಬರುವ ಕೃತಿಗಳು. ಭಾರತೀಯರ ದೇಶಭಕ್ತಿ, ಎಚ್ಚೆತ್ತ ಹಿಂದುಸ್ತಾನ, ಸತ್ಯಾಗ್ರಹ ಧರ್ಮ, ಖಾದಿಶಾಸ್ತ್ರ ಇತ್ಯಾದಿಗಳು ಸ್ವತಂತ್ರ ರಾಷ್ಟ್ರೀಯ ಸಾಹಿತ್ಯಕ್ಕೆ ಸೇರುವಂಥವುಗಳು. ಇನ್ನು ಕಚದೇವ, ಬುದ್ಧ ಲಜಪತರಾಯ, ಸ್ತ್ರೀನೀತಿ, ದಾಂಪತ್ಯಧರ್ಮ, ಹಿಂದೂ ಸಂಘಟನೆ ಇತ್ಯಾದಿಗಳು ಜನಪ್ರಿಯ ವೈಚಾರಿಕ ಸಾಹಿತ್ಯದ ವರ್ಗಕ್ಕೆ ಸೇರಬೇಕಾದವುಗಳು.

ಭಾರತೀಯ ಸಂಸ್ಕೃತಿಯ ಸುದೀರ್ಘ ಪರಂಪರೆಯ ವಾಸ್ತವ ಹಾಗೂ ಪ್ರಭಾವ ಕಾರಿಯಾದ ಚಿತ್ರಣವನ್ನೊಳಗೊಂಡ 'ಶ್ರೀಸ್ವಾಮಿ ರಾಮತೀರ್ಥರ ಉಪನ್ಯಾಸಗಳು' (1921), ಮಂಜಪ್ಪನವರ ಅನುವಾದ ಸಾಹಿತ್ಯದಲ್ಲಿಯೇ ಉಜ್ವಲ ಕೃತಿ. ಹಿಂದೂ ಸಂಸ್ಕೃತಿ ಹಾಗೂ ಪರಂಪರೆಯನ್ನು ಕುರಿತ ಶ್ರೀಸ್ವಾಮೀಜಿಯವರ ಮಹೋನ್ನತ ವಿಚಾರಗಳನ್ನು ನಾಲ್ಕು ಭಾಗಗಳಲ್ಲಿ ಈ ಕೃತಿ ಕಟ್ಟಿಕೊಡುತ್ತದೆ. ಹಿಂದೂಧರ್ಮದ ಬಗೆಗಿನ ಮಂಜಪ್ಪನವರ ಉತ್ಕಟ ಶ್ರದ್ಧೆಗೆ ಮತ್ತು ಅವರ ಅನುವಾದ ಕಲೆಗೆ ಈ ಕೃತಿ ಒಂದು ಹೇಳಿಕೊಳ್ಳುವ ನಿದರ್ಶನವೂ ಆಗುತ್ತದೆ.

ಶ್ರೀಸ್ವಾಮಿ ರಾಮತೀರ್ಥರು (1873-1909) ಹಿಂದೂಧರ್ಮ, ಮತ್ತು ದೇಶವನ್ನು ಕುರಿತು ಅಪಾರ ಕಳಕಳಿ ಹಾಗೂ ಕಾಳಜಿಯನ್ನು ತಾಳಿದ್ದ ಅತಿದೊಡ್ಡ ವಿದ್ವಾಂಸರು. ಮೇಲಾಗಿ ಮಂಜಪ್ಪನವರ ವ್ಯಕ್ತಿತ್ವವನ್ನು ರೂಪಿಸಿದ, ಅದಕ್ಕೆ ಸತ್ವವನ್ನು ಒದಗಿಸಿದ

ಕೆಲವೇ ಕೆಲವು ಮಹಾ ಚೇತನಗಳಲ್ಲಿ ಒಬ್ಬರು. ಅವರಿಂದ ಜ್ಞಾನವನ್ನು, ಆಲೋಚನಾ ಕ್ರಮವನ್ನು ಮಾತ್ರವಲ್ಲ ಆತ್ಮಸತ್ವವನ್ನೂ ಮಂಜಪ್ಪನವರು ಪಡೆದವರಾಗಿದ್ದರು. ಒಟ್ಟಿನಲ್ಲಿ ಮಂಜಪ್ಪನವರಲ್ಲಿ ಪುಟಿಯುತ್ತಿದ್ದ ರಾಷ್ಟ್ರಪ್ರೇಮವನ್ನು ಮತ್ತು ಶ್ರೀಸ್ವಾಮಿ ರಾಮತೀರ್ಥರ ವ್ಯಕ್ತಿತ್ವದ ಪ್ರಭಾವವನ್ನು ಈ ಅನುವಾದಿತ ಕೃತಿಯಲ್ಲಿ ಏಕಕಾಲಕ್ಕೆ ಗುರುತಿಸಬಹುದು.

ಶ್ರೀರಾಮತೀರ್ಥರು ಬೇರೆ ಬೇರೆ ಸ್ಥಳಗಳಲ್ಲಿ ಮಾಡಿದ ಉಪನ್ಯಾಸಗಳಲ್ಲಿ ಹದಿನೆಂಟು ಉಪನ್ಯಾಸಗಳನ್ನು ಆಯ್ದುಕೊಂಡು ಅನುವಾದಿಸುವದರೊಂದಿಗೆ ಅವನ್ನು ಒಂದು ವ್ಯವಸ್ಥೆಗೂ ಒಳಪಡಿಸಿಕೊಟ್ಟಿದ್ದಾರೆ. ಆರಂಭದಲ್ಲಿ ಸ್ಥೂಲವಾಗಿ ಶ್ರೀಸ್ವಾಮಿಯವರ ಜೀವನ ಪರಿಚಯವನ್ನು ಒದಗಿಸಲಾಗಿದೆ. ಕೆಲವನ್ನು ಹೊರತುಪಡಿಸಿ, ಉಳಿದ ಉಪನ್ಯಾಸಗಳ ಆರಂಭದಲ್ಲಿ ಆಯಾ ಉಪನ್ಯಾಸಗಳು ಜರುಗಿದ ಸ್ಥಳ ಹಾಗೂ ಕಾಲವನ್ನು ನಿರ್ದೇಶಿಸಲಾಗಿದೆ. ಇವೆಲ್ಲ ಮೂಲ ಉಪನ್ಯಾಸಗಳ ಶಬ್ದಶಃ ಅನುವಾದವಾಗಿರದೆ ಭಾವಾನುವಾದ, ಕೆಲವು ಸಲ ತಾತ್ಪರ್ಯಾನುವಾದಗಳಾಗಿರುವುದರಿಂದ ಅನುವಾದದ ಪ್ರಕ್ರಿಯೆಯಲ್ಲಿ ಅನಿವಾರ್ಯವಾದ ಇಂಬುಕೂಡ ದೊರೆತಿದೆ. ಉಪನ್ಯಾಸಗಳ ವಸ್ತುವಿನ ಹಾಗೂ ಉಪನ್ಯಾಸಕಾರನ ವ್ಯಕ್ತಿತ್ವ ಮತ್ತು ಧೋರಣೆಗಳನ್ನು ಸಾಕ್ಷಾತ್ಕರಿಸಿಕೊಂಡ ಮಂಜಪ್ಪನವರಲ್ಲಿ ಅನುವಾದಕನಿಗಿರಬೇಕಾದ ಮೂಲಭೂತ ಅರ್ಹತೆಯನ್ನು ಕಾಣುತ್ತೇವೆ. ವಿಷಯವೆಲ್ಲ ನಮ್ಮ ರಾಷ್ಟ್ರಕ್ಕೆ ಹಿಂದೂಧರ್ಮ–ದರ್ಶನಕ್ಕೆ ಸಂಬಂಧಿಸಿದುದೇ ಆದ್ದರಿಂದ ಅಲ್ಲಿಯ ಪಾರಿಭಾಷಿಕ ಶಬ್ದಗಳಿಗೆ ಸಂವಾದಿ ಶಬ್ದಗಳನ್ನು ಹೂಡುವಲ್ಲಿ ಅಂಥ ಆತಂಕವೂ ಗೋಚರಿಸುವದಿಲ್ಲ. ಅದರೊಂದಿಗೆ ನೇರವಾದ, ಸರಳ–ಸ್ಪಷ್ಟವಾದ ಭಾಷೆ, ಹೃದ್ಯವಾದ ಶೈಲಿಗಳೆಲ್ಲ ಮೂಲದ ಅನುಭವವನ್ನೇ ತಂದುಕೊಡುತ್ತವೆ. ಕೊನೆಯಲ್ಲಿ ಶ್ರೀರಾಮತೀರ್ಥರ ಉಪನ್ಯಾಸಗಳಿಂದ ಆಯ್ದ 162 ನುಡಿಮುತ್ತುಗಳನ್ನು ಜೋಡಿಸುವ ಮೂಲಕ ಕೃತಿಯ ಉಪಯುಕ್ತತೆ ಮತ್ತು ಸ್ವಾರಸ್ಯವನ್ನು ಹೆಚ್ಚಿಸಲಾಗಿದೆ. ಮಂಜಪ್ಪನವರ ಅನುವಾದ ಕಲೆಯ ಪರಿಣತಿಗೆ ನಿದರ್ಶನವಾಗಿ ಅವುಗಳಲ್ಲಿ ಒಂದೆರಡನ್ನು ನೋಡಬಹುದು.

"ಪ್ರಕೃತಿಯ ಅಂತಃಕರಣದಲ್ಲಿ ನಿಮ್ಮ ಅಂತಃಕರಣವು ಲೀನವಾದರೆ, ಇಡೀ ಪ್ರಪಂಚದ ಸಕಲ ಸಂಗತಿಗಳೂ ನಿಮಗೆ ಸೂರ್ಯಪ್ರಕಾಶದಂತೆ ಸ್ಪಷ್ಟವಾಗಿ ತೋರುವುದೆಂದು ಇಮರ್ಸನನು ಹೇಳಿದ್ದಾನೆ. ಇಡೀ ಜಗತ್ತಿಗೂ, ನಿಮಗೂ ಐಕ್ಯವಾದ ವಿನಾ ನಿಮಗೆ ಇಡೀ ಜಗತ್ತಿನ ಜ್ಞಾನ ಉಂಟಾಗುವದಿಲ್ಲವೆಂದು ವಾಲ್ಟವಿಟ್‌ಮನ್‌ನು ಹೇಳಿದ್ದಾನೆ"

"ರಾಮನು ಹೇಳುವದೇನೆಂದರೆ: ಪರಿಶ್ರಮ ಮಾಡಿರಿ, ಅವಿಶ್ರಾಂತ ಶ್ರಮಪಡಿರಿ, ಸರ್ವಶಕ್ತಿಯನ್ನು ಏಕೀಕರಿಸಿ ಪರಿಶ್ರಮ ಮಾಡಿರಿ, ಪರಿಶ್ರಮವೇ ಪರಮಾತ್ಮನ ಪೂಜೆಯು,

ಅವಿಶ್ರಾಂತ ಪರಿಶ್ರಮವೇ ನಿಜವಾದ ಜೀವಿತವು."

–ಹೀಗೆ ಉದ್ದಕ್ಕೂ ಕಾಣಿಸಿಕೊಳ್ಳುವ ಸಣ್ಣ ಸಣ್ಣ ಸೂತ್ರಬದ್ಧ ಮಾತುಗಳು ಅದೆಂಥ ಅನಾಯಾಸವ ಫಲಗಳನ್ನು ಕೊಡುತ್ತವೆ ಎಂಬುದನ್ನು ಗಮನಿಸಬೇಕು. ಆದರೆ ಅನಿವಾರ್ಯವೆನಿಸಿದಲ್ಲಿ ಭಾಷೆ ಸಂಕೀರ್ಣಗೊಂಡರೂ ಕ್ಲಿಷ್ಟತೆ ಹಾಗೂ ಅಸ್ಪಷ್ಟತೆಯ ಅಪಾಯಕ್ಕೆ ಒಳಗಾಗುವುದಿಲ್ಲ. ಇನ್ನೂ ಗಮನಿಸಬೇಕಾದ ಮಹತ್ವದ ಮಾತೆಂದರೆ, ಅನುವಾದಕ್ಕೆ ಆಯ್ದುಕೊಂಡ 'ಸುಖದ ವಾಸಸ್ಥಾನ,' 'ಕಾರ್ಯಸಿದ್ಧಿಯ ಮರ್ಮ,' 'ಭರತಖಂಡದ ಮುಂದಿರುವ ಸಮಸ್ಯೆ', 'ನಗದಿ ಧರ್ಮ,' 'ಗೃಹಸೌಖ್ಯದ ಉಪಾಯ,' 'ಗೃಹಸ್ಥಾಶ್ರಮ' ಮತ್ತು 'ಆತ್ಮಸಾಕ್ಷಾತ್ಕಾರ,' 'ಸತ್ಯವನ್ನು ಸೇರುವ ಮಾರ್ಗ', 'ವಿಶ್ವವ್ಯಾಪಕ ಪ್ರೇಮ' ಇತ್ಯಾದಿ ಉಪನ್ಯಾಸಗಳ ವಸ್ತು– ಆಶ್ರಯವನ್ನು ಮಂಜಪ್ಪನವರ 'ಭಾರತೀಯರ ದೇಶಭಕ್ತಿ', 'ದೇಶಾಭಿಮಾನ ಮತ್ತು ಧರ್ಮಾಭಿಮಾನ', 'ಸತ್ಯಾಗ್ರಹ', 'ಶುದ್ಧಿ ಮತ್ತು ಸಂಘಟನೆ', 'ಸ್ತ್ರೀ ನೀತಿ ಸಂಗ್ರಹ', 'ದಾಂಪತ್ಯ ಧರ್ಮ', 'ದಾಂಪತ್ಯ ಜೀವನ' 'ಗೃಹ ಶಿಕ್ಷಣ', 'ಸ್ವಕರ್ತವ್ಯ ಸಿದ್ಧಾಂತ' ಇವೇ ಮೊದಲಾದ ಗ್ರಂಥಗಳ ವಿಷಯ ವಸ್ತುವಿನ ಜೊತೆಗೆ ಹೋಲಿಸಿದಾಗ ಕಂಡುಬರುವ ಸಾಮ್ಯವನ್ನು ಅವರೀರ್ವರ ಮನೋಧರ್ಮದ ಹಿನ್ನೆಲೆಯಲ್ಲಿ ಗುರುತಿಸಬೇಕು. ಒಟ್ಟಿನಲ್ಲಿ ಚಿಂತನೆ– ಆಲೋಚನೆ, ಬರಹ–ಬದುಕಿನಲ್ಲಿ ಇವರಿಬ್ಬರಲ್ಲಿ ಕಂಡುಬರುವ ಸಾಮ್ಯವನ್ನು ಉಪೇಕ್ಷಿಸಲಿಕ್ಕಾಗುವದಿಲ್ಲ. ಈ ಸಾಮ್ಯವೇ ಈ ಅನುವಾದಿತ ಕೃತಿಯ ಮೂಲಪ್ರೇರಣೆಯೆಂದರೂ ಸುಳ್ಳಾಗುವದಿಲ್ಲ.

"ಮಹಾತ್ಮಾಗಾಂಧೀಜಿಯವರ ಚರಿತ್ರೆ"ಗೆ ಸೇರಿದ "ಮಹಾತ್ಮಾಗಾಂಧೀಜಿಯವರ ಲೇಖನ ಮತ್ತು ಭಾಷಣಗಳು" ಎಂಬ ಅನುಬಂಧ ಒಂದು ಹಂತದಲ್ಲಿ ಗಾಂಧೀ ಸಾಹಿತ್ಯದ ಸಂಗ್ರಹಾನುವಾದ. ಗಾಂಧೀಜಿಯವರು ರಾಷ್ಟ್ರದ ನಾನಾ ವಿಷಯ ಮತ್ತು ಸಮಸ್ಯೆಗಳನ್ನು ಕುರಿತು, ಅದರ ಭವಿಷ್ಯವನ್ನು ಕುರಿತು ದೇಶದ ಬೇರೆಬೇರೆ ಪತ್ರಿಕೆಗಳಲ್ಲಿ ಪುಸ್ತಕಗಳ ಮುನ್ನುಡಿಯ ರೂಪದಲ್ಲಿ, ಬೇರೆ ಬೇರೆ ಅರ್ಥಶಾಸ್ತ್ರಜ್ಞರ, ವಿಚಾರವಾದಿಗಳ ಪ್ರಶ್ನೆಗಳ ಸಂದರ್ಭದಲ್ಲಿ ಮತ್ತು ವಿವಿಧ ಸಭೆ ಸಮ್ಮೇಳನಗಳಲ್ಲಿ ಪ್ರಕಟಿಸದ ಆಲೋಚನೆಗಳ ಈ ಸಂಗ್ರಹಾನುವಾದವೂ ರಾಷ್ಟ್ರೀಯ ಸಾಹಿತ್ಯಕ್ಕೆ ಅವರ ಒಂದು ಉತ್ತಮ ಕೊಡುಗೆಯಾಗಿದೆ. ಗೋಖಲೆ, ಸತ್ಯಾಗ್ರಹಿಗಳು, ಅಸ್ಪೃಶ್ಯತೆ, ವರ್ತಕರು, ರೈತರು, ವಿದ್ಯಾರ್ಥಿ, ರಾಜಕಾರಣಿಗಳು–ಇತ್ಯಾದಿ ವ್ಯಕ್ತಿ, ಸಮೂಹ, ಸಮಸ್ಯೆ ಹಾಗೂ ವ್ಯವಹಾರಗಳನ್ನು ಕುರಿತು ಗಾಂಧೀಜಿಯವರ ವೈಚಾರಿಕ ಪ್ರತಿಕ್ರಿಯೆಗಳ ಮಹತ್ವದ ದಾಖಲೆಯಾಗಿದೆ. ವೈವಿಧ್ಯಮಯವಾದ ಮತ್ತು ಪ್ರಸ್ತುತವೆನ್ನಬಹುದಾದ ವಿಷಯ–ಆಲೋಚನೆಗಳ ಬಗೆಗೆ ಈ ಕೃತಿ, ಪ್ರಾಥಮಿಕವೆನ್ನಬಹುದಾದರೂ ಮಹತ್ವದ ತಿಳುವಳಿಕೆಯನ್ನು ನೀಡುತ್ತದೆ.

ಮಂಜಪ್ಪನವರ ಇದೇ ಮಾದರಿಯ ಇನ್ನೊಂದು ಕೃತಿ 'ಕೀರ್ ಹಾರ್ಡಿಯವರ

ಭಾರತ ಪರ್ಯಟನ', ಇಲ್ಲಿಯೂ ಕೂಡ ಆರಂಭದಲ್ಲಿ ಸ್ಥೂಲವಾಗಿ ಕೀರ್ ಹಾರ್ಡಿಯವರ ಜೀವನ ಚರಿತ್ರೆಯನ್ನು ಕೊಟ್ಟು ಅನಂತರ ಭಾರತೀಯರನ್ನು ಉದ್ದೇಶಿಸಿ ಅವರು ಮಾಡಿದ ಉಪನ್ಯಾಸ, ತಮ್ಮ ಬಗೆಗೆ ಬಂದ ಲೇಖನಗಳಿಗೆ ಕೊಟ್ಟ ಪ್ರತಿಕ್ರಿಯೆಯ ಅನುವಾದವಿದೆ.

'ಮಹಾತ್ಮಾ ಗಾಂಧೀಯವರ ಚರಿತ್ರೆ' ಯಲ್ಲಿ ಅವರ ಚರಿತ್ರೆ ಪ್ರಧಾನವಾಗಿದ್ದು ಅವರ ವಿಚಾರಗಳು ಪೂರಕವಾಗುತ್ತವೆ. ಇಲ್ಲಿಯಾದರೊ ಕೀರ್ ಹಾರ್ಡಿಯವರ ವಿಚಾರಗಳೇ ಕೇಂದ್ರ ಆಶಯವಾಗಿ ಚರಿತ್ರೆ ಪೂರಕವಾಗುತ್ತದೆ.

ಸ್ಕಾಟಲ್ಯಾಂಡಿನ ಕೀರ್ ಹಾರ್ಡಿ ಅಂದಿನ ಜಾಗತಿಕ ಸಂದರ್ಭದ ವಿಚಾರವಾದಿಗಳಲ್ಲಿ ಒಬ್ಬರು. ಪಾರತಂತ್ರ್ಯದಲ್ಲಿ ಬಳಲುತ್ತಿದ್ದ ದೇಶಗಳ ಪರಿಸ್ಥಿತಿಯ ಬಗೆಗೆ ಅಪಾರ ಸಹಾನುಭೂತಿಯುಳ್ಳವರು. ಬಂಗಾಲ ವಿಭಜನೆಯ ದಳ್ಳುರಿಯ ಕ್ರೂರಪರಿಣಾಮವನ್ನು ಅರಿಯಲು 1907ರಲ್ಲಿ ಭಾರತಕ್ಕೆ ಬಂದು ಅಲ್ಲಿಯ ನೈಜಸ್ಥಿತಿಯನ್ನು ಕುರಿತು ವಿವಿಧೆಡೆಯಲ್ಲಿ ತಮ್ಮ ವಿಚಾರ ಭಾವನೆಗಳನ್ನು ಪ್ರಕಟಿಸಿದರು. ಅವೆಲ್ಲ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತು ರಾಷ್ಟ್ರನಿರ್ಮಾಣಕ್ಕೆ ಧುಮುಕುವ ಸಮುದಾಯಕ್ಕೆ ಸಾಕಷ್ಟು ಉತ್ತೇಜನಕಾರಿಯಾಗಿದ್ದವು. ಆದ್ದರಿಂದ ಅವುಗಳ ಅನುವಾದ ಹೆಚ್ಚು ಸಕಾಲಿಕವೂ ಆಗಿತ್ತು.

ಈ ಕೃತಿ ಅತ್ತ ನೇರ ಅನುವಾದವೂ ಆಗಿರದೆ, ಇತ್ತ ಭಾವಾನುವಾದವೂ ಎನಿಸದೆ ಅವರ ತಾತ್ಪರ್ಯಾನುವಾದ ಮಾತ್ರವಾಗಿದೆ. ಇಂಗ್ಲೀಷ್ ಭಾಷೆಯಲ್ಲಿ ಪರಿಣತಿ ಇರದ ಮಂಜಪ್ಪನವರು ದೇಶೀಭಾಷೆಯ ಅಂದರೆ ಹಿಂದಿ ಹಾಗೂ ಮರಾಠಿ ಭಾಷೆಯ ಮೂಲಕವಾಗಿಯೇ ವಿಷಯವನ್ನು ಸಂಗ್ರಹಿಸಿರುವದು ಮತ್ತು ಅವೆಲ್ಲ ಒಂದು ಮಿತಿಯಲ್ಲಿ ಸ್ವತಂತ್ರ ಬರಹದ ಸೊಗಡನ್ನು ಹೊಂದಿರುವದು ಗಮನಿಸದೇಕಾದ ಅಂಶಗಳಾಗಿವೆ.

ಇನ್ನು ಮಂಜಪ್ಪನವರ 'ಭಾರತೀಯ ದೇಶಭಕ್ತಿ, ಎಚ್ಚೆತ್ತ ಹಿಂದುಸ್ತಾನ, ಸತ್ಯಾಗ್ರಹ ಧರ್ಮ, ಖಾದಿಶಾಸ್ತ್ರ'– ಮೊದಲಾದವುಗಳು ಸ್ವತಂತ್ರ ಕೃತಿಗಳು. ಅವರ ರಾಷ್ಟ್ರೀಯ ಪ್ರಜ್ಞೆಗೆ; ಸ್ವತಂತ್ರ ಆಲೋಚನಾ ಶಕ್ತಿಗೆ ಅವರ ವಿದ್ವತ್ತಿಗೆ ಮಾತ್ರವಲ್ಲ ಅಂದಿನ ಸಮುದಾಯದ ಮೇಲೆ ಬೀರಿದ ಪರಿಣಾಮ ಹಾಗೂ ಪ್ರಭಾವದ ಹಿನ್ನೆಲೆಯಲ್ಲೂ ಅವು ಸ್ಮರಣಾರ್ಹವಾದ ಕೃತಿಗಳಾಗಿವೆ. ಕನ್ನಡ ವೈಚಾರಿಕ ಮತ್ತು ಸಂಶೋಧನ ಸಾಹಿತ್ಯಕ್ಕೆ ಸಂದ ಉತ್ಕೃಷ್ಟ ಕೊಡುಗೆಗಳಾಗಿವೆ. ಅದರಲ್ಲೂ ಭಾರತೀಯರ ದೇಶಭಕ್ತಿಯಂತೂ ಇನ್ನೂ ಹೆಚ್ಚು ಮೌಲಿಕವಾದದ್ದು. ಜೋಸೆಫ್ ಮ್ಯಾಜನಿ, ನೀಚೆ, ಬಟ್ಲರ್, ಗಿಲ್ಬರ್ಟ್, ಹರ್ಬರ್ಟ್, ಸ್ಪೆನ್ಸರ್, ಕಾರ್ಲೈಲ್, ಮೆಕಾಲೆ– ಇತ್ಯಾದಿ ಪಾಶ್ಚಾತ್ಯ ವಿದ್ವಾಂಸರ ಹಾಗೂ ಎಸ್.ಡಿ. ಸಾತವೇಳಕರ, ಟಿಳಕ, ಗಾಂಧಿ, ಗೋಖಲೆ, ಎನ್.ಸಿ. ಕೇಳಕರ ಮೊದಲಾದ ಭಾರತೀಯ ವಿಚಾರವಾದಿಗಳ ಸುಮಾರು 50 ಕೃತಿಗಳನ್ನು ಆಕರ ಗ್ರಂಥಗಳನ್ನಾಗಿ

ಬಳಸಿಕೊಂಡಿದ್ದಾರೆ. ತಮ್ಮ ಆತ್ಮಚರಿತ್ರೆಯಲ್ಲಿ ಅವರೇ ಹೇಳಿಕೊಂಡಂತೆ ಇದು ಕನ್ನಡ ಭಾಷೆಯಲ್ಲಿಯೇ ಹೊಸತರದ ಪುಸ್ತಕ. ದೇಶಭಕ್ತಿಯನ್ನು ಒಂದು ತತ್ವಜ್ಞಾನದ ದೃಷ್ಟಿಯಿಂದ ವಿವೇಚನೆಗೆ ತೊಡಗಿಸಿದ ಪುಸ್ತಕ. ಮಂಜಪ್ಪನವರ ರಾಜಕೀಯ ಮತ್ತು ಸಾಮಾಜಿಕ ಸ್ವತಂತ್ರ ವಿಚಾರಗಳ ಉಪಯುಕ್ತ ದಾಖಲೆಯನ್ನು ಒದಗಿಸುವ ಕೃತಿ. "ನನ್ನ ಎಲ್ಲಾ ಪುಸ್ತಕಗಳಲ್ಲಿ ಅದೊಂದು ಪರಿಶೋಧನಾತ್ಮಕ ಹೆಚ್ಚಿನ ತರಗತಿಯ ಪುಸ್ತಕ" ಎಂಬ ಅವರದೇ ಮಾತಿನ ಹಿನ್ನೆಲೆಯಲ್ಲಿ ಆ ಕೃತಿಯ ಮಹತ್ವವನ್ನು ಕಂಡುಕೊಳ್ಳಬಹುದು.

ಸ್ವದೇಶಭಕ್ತಿಯ ಮೂಲತತ್ವಗಳು, ದೇಶಾಭಿಮಾನ ಮತ್ತು ಧರ್ಮಾಭಿಮಾನ, ದೇಶಭಕ್ತಿಯುಂಟಾಗದಿದ್ದ ಕಾರಣಗಳು, ದೇಶಸೇವೆ, ಭಾರತೀಯರಲ್ಲುಂಟಾದ ಸ್ವದೇಶ ಪ್ರೇಮ ಎಂಬ ಮುಖ್ಯ ವಿಭಾಗಗಳನ್ನು ಮಾಡಿಕೊಂಡು ಇತಿಹಾಸ, ಚರಿತ್ರೆ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ತತ್ವಶಾಸ್ತ್ರಗಳ ಹಿನ್ನೆಲೆಯಲ್ಲಿ ವೇದಕಾಲದಿಂದ ಹಿಡಿದು ಇಪ್ಪತ್ತನೆಯ ಶತಮಾನದ ಕಾಲದವರೆಗಿನ ಭಾರತೀಯರ ದೇಶಭಕ್ತಿಯ ಏಳುಬೀಳುಗಳನ್ನು ತರ್ಕಬದ್ಧವಾಗಿ ವಿಪುಲ ಆಧಾರ–ಸಾಮಗ್ರಿಗಳೊಂದಿಗೆ ಚರ್ಚಿಸಲಾಗಿದೆ. ಪ್ರಾಚೀನ ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯೇ ಇರಲಿಲ್ಲವೆಂಬ ತಮ್ಮ ನಿಲುವನ್ನು ಪ್ರಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಪ್ರಾಚೀನ ಭಾರತೀಯರಲ್ಲಿ ದೇಶಭಕ್ತಿಯನ್ನು ಪ್ರತಿಪಾದಿಸುವ ಕೆಲವು ವಿದ್ವಾಂಸರ ಅಭಿಪ್ರಾಯವನ್ನು ತರ್ಕಬದ್ಧವಾಗಿ ಅಲ್ಲಗಳೆಯುವ ಅವರ ವಾದಸರಣಿ ಹೆಚ್ಚು ಆಕರ್ಷಕ. "ನಮ್ಮ ವೇದೋಪನಿಷತ್ತಿನ ಪುರಾಣಕಾಲದ ಭಾರತೀಯರಿಗೆ, ಅಂದಿನ ಕೆಲವು ಋಷಿಗಳಿಗೆ ಮಾತೃಭೂಮಿಯ ಶ್ರೇಷ್ಠತ್ವ ತಿಳಿದಿತ್ತೇ ವಿನಾ, ದೇಶಭಕ್ತಿ ಅವರಲ್ಲಿ ಇತ್ತೆಂದು ಹೇಳಲಿಕ್ಕೆ ಬರುವದಿಲ್ಲ" ಎಂಬ ನೆಲೆಯನ್ನು ತಲುಪುತ್ತಾರೆ. ಇತಿಹಾಸ–ಪುರಾಣಾದಿಗಳಲ್ಲಿ ರಾಜಕೀಯ ವಿಷಯವಿದ್ದರೂ ಅವುಗಳಲ್ಲಿ ಇತರ ಸದ್ಗುಣಗಳಂತೆ 'ಸ್ವದೇಶಭಕ್ತಿ' ಕೂಡ ಒಂದು ಶ್ರೇಷ್ಠ ಸದ್ಗುಣ, ಅದಕ್ಕೂ ಪ್ರಾಮುಖ್ಯತೆ ಬೇಕು ಎಂದು ಎಲ್ಲಿಯೂ ಉಕ್ತವಾಗದಿರುವದನ್ನು ಎತ್ತಿ ತೋರಿಸುತ್ತಾರೆ. ಆರ್ಯವೃತ್ತ, ಪುಣ್ಯಭೂಮಿ ಇತ್ಯಾದಿ ಭಾವನೆಗಳೆಲ್ಲ ಮಂಜಪ್ಪನವರ ಮೇರೆಗೆ ಧಾರ್ಮಿಕ ಭಾವನೆಗಳೇ ಹೊರತು ರಾಷ್ಟ್ರೀಯ ಅಥವಾ ದೇಶಭಕ್ತಿಯ ಭಾವನೆಗಳಲ್ಲ, ಮುಸ್ಲೀಮರ ದಾಳಿಯ ಸಂದರ್ಭದಲ್ಲೂ ವಿಜಯನಗರದಲ್ಲಿ ಮತ್ತು ಮರಾಠಿಗರಲ್ಲಿ ಇದ್ದುದು ಧರ್ಮಾಭಿಮಾನವೇ ಹೊರತು ದೇಶಭಕ್ತಿಯಲ್ಲ.

ಇಂಥ ದೇಶಭಕ್ತಿಯ ಅಭಾವಕ್ಕೆ ಭಾರತೀಯರ ವರ್ಣಾಶ್ರಮವನ್ನು ಮೂಲಭೂತ ಕಾರಣವನ್ನಾಗಿ ತೋರಿಸುತ್ತಾರೆ.

ಹೀಗೆ ದೇಶಭಕ್ತಿಯ ಅಭಾವವನ್ನು ಮತ್ತು ಅದಕ್ಕೆ ಇದ್ದ ಕಾರಣಗಳನ್ನು ಶೋಧಿಸುವ ಮಟ್ಟಕ್ಕೆ ತೃಪ್ತರಾಗದೆ, ದೇಶಭಕ್ತಿಯನ್ನು ಹುಟ್ಟುಹಾಕುವದಕ್ಕೆ ವಾಸ್ತವ ಉಪಾಯಗಳನ್ನು

ಸೂಚಿಸುವ ಮೂಲಕ ಈ ಗ್ರಂಥ ವ್ಯಾವಹಾರಿಕವಾಗಿಯೂ ತನ್ನ ಉಪಯುಕ್ತತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಅದಕ್ಕಾಗಿ ಆಚರಣೆಗೆ ತರಬೇಕಾದ ಕೆಲವು ಸಾಮಾಜಿಕ ವಿಷಯ. ಮತ್ತು ತತ್ವಗಳ ಬಗೆಗೆ ವಿಶದವಾಗಿ ಚರ್ಚಿಸಿದ್ದಾರೆ. ಮುಂದುವರೆದು, ಉದ್ದೇಶ ಪೂರ್ವಕವಾಗಿಯೇ ದೇಶಾಭಿಮಾನ ಹಾಗೂ ಧರ್ಮಾಭಿಮಾನವನ್ನು ಸ್ಪಷ್ಟಪಡಿಸಿದ್ದಾರೆ. ಜೊತೆಗೆ ಮಾನವನ ಹಾಗೂ ರಾಷ್ಟ್ರದ ಕಲ್ಯಾಣಕ್ಕಾಗಿ ಅವುಗಳಿಗಿರುವ ಇತಿಮಿತಿಯನ್ನು ನಿರ್ಧರಿಸಲಾಗಿದೆ. ಕೊನೆಗೆ "ದೇಶಾಭಿಮಾನ ಮತ್ತು ಸ್ವಧರ್ಮಾಭಿಮಾನ ಈ ಉಭಯ ಅಭಿಮಾನಗಳಲ್ಲಿ ಒಂದರಿಂದುಂಟಾಗತಕ್ಕ ಕಾರ್ಯವು ಇನ್ನೊಂದಕ್ಕೆ ಬಾಧಕವಾಗಿ ಪರಿಣಮಿಸುತ್ತಿರುವಾಗ ಸ್ವದೇಶಾಭಿಮಾನವೇ ಪ್ರಾಮುಖ್ಯವಾದುದೆಂದು ತಿಳಿದು ಅದನ್ನೇ ಅವಲಂಬಿಸಬೇಕು" ಎಂಬಂಥ ಸಂದೇಶದಲ್ಲಿ ಈ ಕೃತಿ ಸಾರ್ಥಕಗೊಳ್ಳುತ್ತದೆ. ಅಲ್ಲದೆ ದೇಶಭಕ್ತಿಯಲ್ಲಿಯೇ ಸಾತ್ವಿಕ, ರಾಜಸ, ತಾಮಸವೆಂದು ವರ್ಗೀಕರಿಸಿ ಅವುಗಳ ರೂಪ–ಲಕ್ಷಣಗಳನ್ನು, ಅವುಗಳ ಸಾಧಕ–ಬಾಧಕಗಳನ್ನು ನಿರೂಪಿಸಿ ಓದುಗರನ್ನು ಆತ್ಮನಿರೀಕ್ಷೆಗೆ ಪ್ರೇರೇಪಿಸುತ್ತದೆ. "ತಾನು ವಹಿಸಿಕೊಂಡ ಕಾರ್ಯವನ್ನು ನ್ಯಾಯವಾದ ರೀತಿಯಲ್ಲಿ ತೃಪ್ತಿಕರವಾಗಿ ಮಾಡಿದರೆ, ದೇಶಸೇವೆಯನ್ನು ಮಾಡಿದಂತೆಯೇ ಆಗುತ್ತದೆ. ಇದೇ ದೇಶಸೇವೆಯ ಪ್ರಥಮ ಸೋಪಾನ" ಎನ್ನುವದು ಅವರ ಒಟ್ಟು ಸಂದೇಶದ ಮೂಲ ತಾತ್ಪರ್ಯವೆನಿಸಿದೆ.

'ಎಚ್ಚೆತ್ತ ಹಿಂದೂಸ್ತಾನ' ಮಂಜಪ್ಪನವರ ಇದೇ ಸಾಲಿಗೆ ಸೇರುವ ಮತ್ತೊಂದು ಕೃತಿ. ಅದು ಅವರ ಜೀವನದ ಕೊನೆಯ ಹಂತದಲ್ಲಿ ಅಂದರೆ 1947ರಲ್ಲಿ ಪ್ರಕಟವಾದದ್ದು. ಅವರ ವಿಚಾರ, ಅಭಿವ್ಯಕ್ತಿಯಲ್ಲಿ ಸಾಕಷ್ಟು ಪರಿಣತಿಯನ್ನು ಸಾಧಿಸಿದ ಕಾಲವದು. ಆದರೂ ಅದಕ್ಕೆ ಮಿತಿಯನ್ನು ಒದಗಿಸಿದ ಎರಡು ಕಾರಣಗಳನ್ನು ಉಪೇಕ್ಷಿಸುವಂತಿಲ್ಲ. ಮೊದಲನೆಯದಾಗಿ ಆಗಲೇ ಮಂಜಪ್ಪನವರು ತಮ್ಮ ವೃದ್ಧಾಪ್ಯದಿಂದ, ಅನಾರೋಗ್ಯದಿಂದ ಹಾಗೂ ಹೊತ್ತ ಹಲವಾರು ಯೋಜನಗಳ ಭಾರದಿಂದ ಜರ್ಜರಿತರಾಗಿದ್ದ ಕಾಲವದು. ಎರಡನೆಯದಾಗಿ ರಾಷ್ಟ್ರೀಯತೆಯನ್ನು ಕುರಿತು, ನಮ್ಮ ಭಾರತದ ಸಂಸ್ಕೃತಿ, ಪರಂಪರೆ, ಇತಿಹಾಸ ಇತ್ಯಾದಿಗಳನ್ನು ಕುರಿತ ವಿಷಯ ಹಾಗೂ ಆಲೋಚನೆಗಳು ತತ್ಪೂರ್ವದ 'ಭಾರತೀಯರ ದೇಶಭಕ್ತಿ' ಯಂಥ ಕೃತಿಗಳಲ್ಲಿಯೇ ನಿರೂಪಿತವಾಗಿದ್ದವು. ಇದೆಲ್ಲದರಿಂದ ಮೊದಲಿನ ಸ್ಫೂರ್ತಿ, ಉತ್ಸಾಹ, ಉತ್ಕಟತೆಯಾಗಲಿ, ಹೊಸ ಸಾಮಗ್ರಿ, ಧೋರಣೆಯಾಗಲಿ ನಿರೀಕ್ಷಿತ ಮಟ್ಟದಲ್ಲಿ ವ್ಯಕ್ತವಾಗದೇ ಹೋದವೇನೋ ಎನಿಸುತ್ತದೆ. ಈ ಎಲ್ಲ ಮಿತಿಯನ್ನು ಮೀರಿ ಈ ಗ್ರಂಥ ತನ್ನ ಮಹತ್ವವನ್ನು ಮತ್ತು ವೈಶಿಷ್ಟ್ಯವನ್ನು ಉಳಿಸಿಕೊಳ್ಳುತ್ತದೆ. "ಭಾರತೀಯರ ದೇಶಭಕ್ತಿ" ಯಲ್ಲಿ ವಿಮರ್ಶಾತ್ಮಕ ತೀಕ್ಷ್ಣ ಒಳನೋಟ ಕಂಡುಬಂದರೆ, ಇಲ್ಲಿ ಭಾರತೀಯರ ಪ್ರಜ್ಞೆ ಜಾಗೃತಗೊಂಡ ಹಾಗೂ ಬೆಳೆದುಬಂದ ವಿಧಾನ, ಸಾಂಸ್ಕೃತಿಕವಾಗಿ ಅದರ ಕೊಡುಗೆ, ತನ್ನ ಚರಿತ್ರೆಯಲ್ಲಿ ಭಾರತ ಎದುರಿಸಿದ ಸಂಕಷ್ಟಗಳು ಮತ್ತು ಆ ಸಂಕಷ್ಟಗಳನ್ನು ಎದುರಿಸುವಲ್ಲಿ ತೋರಿದ ಧೈರ್ಯ ಇತ್ಯಾದಿಗಳ ನಿರೂಪಣೆ ಇದೆ. ತಮ್ಮ

ಶ್ರೀಮಂತ ಸಂಸ್ಕೃತಿಯ ಬಗೆಗೆ ಅರಿವನ್ನು ತುಂಬಿ ಸ್ಫೂರ್ತಿಯನ್ನು ಒದಗಿಸುವಲ್ಲಿ ಈ ಕೃತಿಯ ಒಟ್ಟು ಸಾರ್ಥಕತೆಯಡಗಿದೆ.

ಒಟ್ಟಿನಲ್ಲಿ ವೇದ ಕಾಲದಿಂದ ಮೊದಲುಗೊಂಡು ಸ್ವಾತಂತ್ರ್ಯ ಸಂಗ್ರಾಮದ ವರೆಗಿನ ಭಾರತದ ಸಂಕೀರ್ಣವಾದ ಮತ್ತು ಸುದೀರ್ಘವಾದ ಚರಿತ್ರೆಯ ಅತ್ಯಂತ ಪರಿಣಾಮಕಾರಿಯಾದ ಚಿತ್ರವನ್ನು ಈ ಕೃತಿ ಒದಗಿಸುತ್ತದೆ. ಭಾರತದ ಭೂತವನ್ನು ಕುರಿತ ಪರಿಜ್ಞಾನ, ವರ್ತಮಾನದ ಬಗೆಗಿನ ಕಳವಳ, ಭವಿಷ್ಯದ ಬಗೆಗಿನ ಕಾಳಜಿ ಈ ಗ್ರಂಥದ ಪ್ರಮುಖ ವೈಶಿಷ್ಟ್ಯ.

'ಖಾದಿ ಶಾಸ್ತ್ರ' ಮತ್ತು 'ಸತ್ಯಾಗ್ರಹ ಧರ್ಮ' ಗಳು ಇದೇ ಸಂದರ್ಭದಲ್ಲಿಯೇ ಮಂಜಪ್ಪನವರ ರಾಷ್ಟ್ರೀಯ ಪ್ರಜ್ಞೆಗೆ ನಿದರ್ಶನಗಳಾಗಿ ಸ್ಮರಿಸಬೇಕಾದ ಕೃತಿಗಳು. ಖಾದಿಯ ಬಗೆಗೆ ಅಪಾರ ನಿಷ್ಠೆಯನ್ನು ತಳೆದಿದ್ದ ಮಂಜಪ್ಪನವರು ಆ ತತ್ವವನ್ನು ವೀರಶೈವ ಧರ್ಮದ ಒಂದು ಪ್ರಮುಖ ತತ್ವವನ್ನಾಗಿ ಗ್ರಹಿಸಿದ್ದರು. ರಾಷ್ಟ್ರದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿತಾಸಕ್ತಿಯನ್ನು ಅವರು ಖಾದಿಯಲ್ಲಿ ಕಂಡುಕೊಂಡಿದ್ದರು. ಖಾದಿಯ ಬಗೆಗಿನ ಅವರ ಆಸಕ್ತಿಯನ್ನು ಗುರುತಿಸಿದ, ಅಂದಿನ ಕರ್ನಾಟಕ ಕುಲಪುರೋಹಿತರೆಂದೇ ಮನ್ನಣೆಯನ್ನು ಪಡೆದ, ಆಲೂರ ವೆಂಕಟರಾಯರ ಒತ್ತಾಸೆಯಿಂದ ಮೂಡಿ ಬಂದ ಕೃತಿ ಇದು. ವೆಂಕಟರಾಯರು ನಡೆಸುತ್ತಿದ್ದ 'ನವಜೀವನ ಗ್ರಂಥಮಾಲೆ'ಯಲ್ಲಿ ಪ್ರಕಟವಾದ ಈ ಗ್ರಂಥ ಗಾತ್ರದಲ್ಲಿ ಚಿಕ್ಕದಾದರೂ ಅಂದಿನ ಅಗತ್ಯವನ್ನು ಪೂರೈಸಿದ ಮಹತ್ವ ಅದಕ್ಕಿದೆ. ಪ್ರಾಚೀನ ಭಾರತದ ಆರ್ಥಿಕತೆಯ ಬೆನ್ನುಹುರಿಯಾಗಿದ್ದ ನೂಲು-ನೇಯ್ಗೆ ಇಂಗ್ಲೀಷರ ಆಕ್ರಮಣದಿಂದ, ಔದ್ಯೋಗಿಕ ಕ್ರಾಂತಿಯಿಂದ ನೆಲಹಿಡಿದ ರೀತಿಯನ್ನು ಈ ಗ್ರಂಥ ಶೋಧಿಸಿಕೊಡುತ್ತದೆ.

ರಾಷ್ಟ್ರೀಯ ಸಾಹಿತ್ಯವನ್ನು ಕುರಿತ ಇಂಥ ನೇರ ಕೃತಿಗಳ ಮಧ್ಯದಲ್ಲಿ "ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ" ಎಂಬ ಅವರ ಆತ್ಮಚರಿತ್ರೆಯನ್ನು ಮರೆಯುವಂತಿಲ್ಲ. ಗಾಂಧೀಜಿಯವರ ಆತ್ಮಚರಿತ್ರೆ ಈ ಕೃತಿಯ ಹಿಂದಿರುವ ಮುಖ್ಯ ಪ್ರೇರಣೆ. ಮಂಜಪ್ಪನವರು ತಾವು ರಾಷ್ಟ್ರಸೇವೆಗೆ ಸಮರ್ಪಿಸಿಕೊಂಡ ಮೂವತ್ತೇಳು ವರುಷಗಳ ಅನಂತರದಲ್ಲಿ ಬರೆದ ಆತ್ಮಕಥೆ. ಜನ್ಮಭೂಮಿಯ ಆ ಋಣಕ್ಕೆ ಪ್ರತಿಯಾಗಿ ಸಲ್ಲಿಸಿದ ಕೈಂಕರ್ಯಕ್ಕೆ ಈ ಕೃತಿ ಒಂದು ಆತ್ಮಸಾಕ್ಷಿ . ಮಂಜಪ್ಪನವರ "ಜೀವನ ರಾಷ್ಟ್ರೀಯ ಇತಿಹಾಸದೊಂದಿಗೆ ಹೊಂದಿಕೊಂಡಿತ್ತು, ಅವರ ಸಾರ್ವಜನಿಕ ಜೀವನ ಜಾಗೃತ ಭಾರತದ ನವಸಂದೇಶದ ಪ್ರಯೋಗವಾಗಿತ್ತು" ಹಾಗೆಂದೇ ರಾಷ್ಟ್ರ ಹಾಗೂ ಮಂಜಪ್ಪನವರಲ್ಲಿ ಒಂದು ಬಗೆಯ ಅವಿನಾಭಾವ ಸಂಬಂಧ ಮತ್ತು ಸಾಮರಸ್ಯ ತುಂಬಿಬಂದಿತ್ತು. ಅವರ ಬದುಕಿನ ಕಥೆ, ಅವರ ರಾಷ್ಟ್ರೀಯ ವಿಚಾರ, ಹಮ್ಮಿಕೊಂಡ ಯೋಜನೆ ಇತ್ಯಾದಿಗಳಿಂದ ಮೈತುಂಬಿಕೊಂಡ

ಈ ಕೃತಿ ಅವರ ಬರಹ–ಬದುಕಿನ ಸಾಮರಸ್ಯಕ್ಕೆ ಪ್ರಾಮಾಣಿಕತೆಗೆ ಬಹುಮುಖ್ಯವಾದ ನಿದರ್ಶನವಾಗಿದೆ. ಮಂಜಪ್ಪನವರ ಈ ಆತ್ಮಕಥೆ, ರಾಷ್ಟ್ರಕ್ಕಾಗಿ ಸಮರ್ಪಿಸಿಕೊಂಡ ಸಂನ್ಯಾಸಿಯೊಬ್ಬನ ಕಥೆಯಾದ್ದರಿಂದ, ಪೂರ್ವಾಶ್ರಮದ ಜೀವನದ ಘಟಕಾಂಶಗಳು ತೀರ ಕ್ವಚಿತ. ಆತ್ಮಚರಿತ್ರೆಗೆ ಪೂರ್ವಪೀಠಿಕೆ ಎನ್ನುವಂತೆ ಮಾತ್ರ ಕೆಲವು ವಿವರಗಳು ದೊರೆತರೂ ಅವರಲ್ಲಿ ತಾಯಿ ತಂದೆಗಳ ಹೆಸರಿಲ್ಲ; ಪ್ರಾಸಂಗಿಕವಾಗಿ ಅವರ ಅಕ್ಕನ, ಅಕ್ಕನ ಮಗಳ ಪ್ರಸ್ತಾಪ ಬಂದರೂ ಅವರ ಹೆಸರೂ ಕಾಣುವದಿಲ್ಲ. ಮನೆತನದ ಚರಿತ್ರೆ, ಅವರ ಸ್ಥಿತಿ–ಗತಿಯ ವಿವರವೂ ಕಾಣದು. ಮಂಜಪ್ಪನವರು ತಮ್ಮ ಹಾಗೂ ರಾಷ್ಟ್ರದ ನಡುವಿನ ಸಂಬಂಧವಾಗೂ ಕೊಡುಕೊಳ್ಳುವಿಕೆಯಲ್ಲಿ ಸಾಕಷ್ಟು ಪ್ರಾಮಾಣಿಕರಾಗಿ ಕಂಡುಬಂದರೂ ಕೆಲವು ವೈಯಕ್ತಿಕ ವಿಷಯಗಳನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚುವಂತೆ ಕಂಡುಬರುತ್ತವೆ. ಅವೆಲ್ಲ ಕೇವಲ ವೈಯಕ್ತಿಕವಾದದ್ದೂ ಒಂದು ಕಾರಣವಾಗಬಹುದು. ಒಟ್ಟಿನಲ್ಲಿ ರಾಷ್ಟ್ರಧರ್ಮ ದೃಷ್ಟಾರರಾದ ಮಂಜಪ್ಪನವರ ಈ ಕೃತಿಯ ಕೇಂದ್ರ ಆಶಯ ತಮ್ಮನ್ನು ಒಂದು ರಾಷ್ಟ್ರದ ಪ್ರಾಮಾಣಿಕ ಪ್ರಜೆಯನ್ನಾಗಿ ಗುರುತಿಸಿಕೊಳ್ಳುವ ಪ್ರಯತ್ನದ ಪ್ರತಿಫಲವೆನ್ನಬಹುದು.

ಹೀಗೆ ಒಟ್ಟಿನಲ್ಲಿ ಯಾವ ನಿಟ್ಟಿನಿಂದ ನೋಡಿದರೂ ರಾಷ್ಟ್ರೀಯತೆ ಅವರ ಸಾಹಿತ್ಯದ ಜೀವಧಾತುವಾಗಿ ನಮ್ಮ ಗಮನ ಸೆಳೆಯುತ್ತದೆ. ಅದೇ ಕಾರಣಕ್ಕಾಗಿ ತನ್ನ ಅಸ್ತಿತ್ವವನ್ನು ಉದ್ದಕ್ಕೂ ಉಳಿಸಿಕೊಳ್ಳುತ್ತದೆ.

●

# ಪತ್ರಿಕಾ ಸಾಹಿತ್ಯ

ತನ್ನ ಸಮಕಾಲೀನ ಪ್ರಚಲಿತ ವಿದ್ಯಮಾನಗಳಿಗೆ ಒಂದು ಜನಾಂಗವನ್ನು ತ್ವರಿತವಾಗಿ ಸ್ಪಂದಿಸುವಂತೆ ಮಾಡುವ ಅತ್ಯಂತ ಪರಿಣಾಮಕಾರಿಯಾದ ಸಂವಹನ ಮಾಧ್ಯಮ–ಪತ್ರಿಕೆಯನ್ನು ಬಿಟ್ಟರೆ ಮತ್ತೊಂದಿಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿಷಯಗಳ ಆಳ–ವಿಸ್ತಾರಗಳನ್ನು ಕುರಿತಂತೆ, ಮಿಕ್ಕ ಸಾಹಿತ್ಯದ ಪ್ರಕಾರಗಳಿಗೆ ಹೋಲಿಸಿದಾಗ ಅದರ ಮಿತಿ ಏನೇ ಇರಲಿ, ಆದರೆ ಸಾಮಾನ್ಯ ಓದುಗರನ್ನು ಮೊದಲುಗೊಂಡು ಎಲ್ಲ ವರ್ಗದ ಓದುಗರನ್ನು ರಾಷ್ಟ್ರದ ಸಮಾಜದ ವಿದ್ಯಮಾನ ಮತ್ತು ಸಮಸ್ಯೆಗಳ ನೆಲೆಯಲ್ಲಿ ಸ್ಪಂದಿಸುವಂತೆ ಮಾಡುವ ಮತ್ತು ಆ ಬಗೆಗೆ ಜವಾಬ್ದಾರಿಯ ಅರಿವನ್ನು ತಂದುಕೊಡುವ ಅದರ ಆಕರ್ಷಕ ಗುಣ ಅಸಾಧಾರಣವಾದದ್ದು. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ಗಾಢವಾಗಿ ತೊಡಗಿಸಿಕೊಂಡ ಮಂಜಪ್ಪನವರ ಚಟುವಟಿಕೆ ಅಂದಿನ ರಾಷ್ಟ್ರೀಯ ಮುಂದಾಳುಗಳಿಗಿಂತ ತೀರ ಭಿನ್ನವಾಗಿತ್ತು. ಅಂದಿನ ಬಹುತೇಕ ರಾಷ್ಟ್ರೀಯ ಮುಖಂಡರಲ್ಲಿದ್ದ ಎಲ್ಲ ಬಗೆಯ ಕನಸು, ಕಲ್ಪನೆ ಆವೇಶ, ಭ್ರಮೆಗಳನ್ನೆಲ್ಲ ಕಟ್ಟಿಟ್ಟು, ಕೇವಲ ವಾಸ್ತವತೆಯ ನೆಲಗಟ್ಟಿನ ಮೇಲೆ ನಡೆಸಿದ ಸೈದ್ಧಾಂತಿಕ ಹೋರಾಟ ಅವರದಾಗಿತ್ತು. ರಾಷ್ಟ್ರದ ರಕ್ಷಣೆ, ಅದರ ಅಭಿವೃದ್ಧಿ ಆ ರಾಷ್ಟ್ರದ ಯಾವದೇ ಒಂದು ವರ್ಗದ ಸೊತ್ತಾಗಿ ಇದ್ದುದರ ಅನಾಹುತವನ್ನು ಅವರು ನಮ್ಮ ರಾಷ್ಟ್ರದ ಪರಂಪರೆಯ ವ್ಯವಸ್ಥೆಯಲ್ಲಿಯೇ ಗುರುತಿಸಿದ್ದರು. ಅಂದರೆ ರಾಷ್ಟ್ರ ರಕ್ಷಣೆಯ ಹೊಣೆ ಕ್ಷತ್ರಿಯರಿಗೆ ಮಾತ್ರ ಸೀಮಿತಗೊಂಡಿದ್ದರ ಪರಿಣಾಮವಾಗಿ ಉಳಿದ ವರ್ಣದವರು ಆ ದೆಸೆಯಲ್ಲಿ ಎಲ್ಲ ರೀತಿಯಿಂದಲೂ ನಿಷ್ಕ್ರಿಯರಾದ ಕಾರಣ ನಮ್ಮ ರಾಷ್ಟ್ರ ತನ್ನ ಚರಿತ್ರೆಯಲ್ಲಿ ಅನುಭವಿಸುತ್ತ ಬಂದ ಆಕ್ರಮಣ ಹಾಗೂ ಅದರ ಪರಿಣಾಮದ ಕಲ್ಪನೆ ಮಂಜಪ್ಪನವರಿಗಿತ್ತು. ಆದ್ದರಿಂದ ನಮ್ಮ ಪರಂಪರೆಯಿಂದಲೇ ಪಾಠ ಕಲಿಯದೇಕಾದ ಅಂದಿನ ವರ್ತಮಾನದ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ವ್ಯಕ್ತಿವ್ಯಕ್ತಿಯಲ್ಲಿ ಬಿತ್ತಿ ಬೆಳೆಸುವ ಮಹತ್ವಾಕಾಂಕ್ಷೆಯನ್ನು ತಾಳಿದರು. ಪತ್ರಿಕಾ ವ್ಯವಸಾಯವನ್ನು ಅದಕ್ಕಿರುವ ಮಹತ್ವದ ಉಪಾಯವನ್ನಾಗಿ ಸ್ವೀಕರಿಸಿದರು. ಅವರ ವಿಸ್ತೃತ ಯೋಜನೆ, ವಿಚಾರ, ಚಿಂತನೆಗಳು ಅವರ ಪತ್ರಿಕೆಗಳ ತೆಕ್ಕೆಯನ್ನು ಮೀರಿ ನಿಂತಾಗ, ಅವುಗಳ ಆಶಯವನ್ನು ಕೃತಿಗಳ ಮೂಲಕವೂ ಈಡೇರಿಸಿಕೊಂಡಂತೆಯೂ ಕಂಡುಬರುತ್ತದೆ. ಅಂದರೆ ಅವರ ಎಷ್ಟೋ ಚಿಕ್ಕ ಪುಟ್ಟ ಸ್ವತಂತ್ರ ಕೃತಿಗಳು ಪತ್ರಿಕೆಯ ಒಂದೊಂದು ಲೇಖನದ ಮಾದರಿಯಲ್ಲೇ ಇದ್ದುದನ್ನು ನೋಡಬಹುದು.

ಮಂಜಪ್ಪನವರು – ಧನುರ್ಧಾರಿ, ಖಾದಿ ವಿಜಯ, ಉದ್ಯೋಗ ಹಾಗೂ ಶರಣ ಸಂದೇಶ ಎಂಬ –ಒಟ್ಟು ನಾಲ್ಕು ಪತ್ರಿಕೆಗಳಿಗೆ ಹುಟ್ಟುಹಾಕಿದರು. ಅದೂ ಅಲ್ಲದೆ ವಿಜಾಪುರ ಜಿಲ್ಲೆಯ ವೀರಶೈವ ವಿದ್ಯಾಲಯದಲ್ಲಿ ಹೊರಡಿಸುತ್ತಿದ್ದ 'ವಿದ್ಯಾಲಯ ಪತ್ರಿಕೆ,' 'ಬಾಲ ಸಂಗಯ್ಯ' ಎಂಬ ಎರಡು ಕೈಬರಹದ ಪತ್ರಿಕೆಗಳನ್ನು ನೋಡಿದರೆ ಮತ್ತು ಹುಬ್ಬಳ್ಳಿಯಲ್ಲಿ ಶ್ರೀ. ವಿ.ಟಿ. ಪುರಾಣಿಕ ಅವರು ನಡೆಸುತ್ತಿದ್ದ 'ಲೋಕಮತ' ಎಂಬ ಕನ್ನಡ ದಿನಪತ್ರಿಕೆಯ ನೆರವಿಗಾಗಿ, ಆಗ ವೀರಶೈವ ವಿದ್ಯಾಲಯದಲ್ಲಿದ್ದ ಶ್ರೀ ಲಿಂಗನಗೌಡ ಪಾಟೀಲರನ್ನು ಕಳಿಸಿದ್ದನ್ನು ಸ್ಮರಿಸಿದರೆ ರಾಷ್ಟ್ರಾಭಿವೃದ್ಧಿಯಲ್ಲಿ ಪತ್ರಿಕೆಗಳ ಪಾತ್ರದ ಬಗೆಗೆ ಮಂಜಪ್ಪನವರಿಗಿದ್ದ ಭರವಸೆ ಕಲ್ಪನೆಗೆ ಬರುತ್ತದೆ. ಅದರೊಂದಿಗೆ ಪತ್ರಿಕೆಗಳು ಹುಟ್ಟಿಕೊಳ್ಳುವ ಸಂದರ್ಭಗಳ ಹಿನ್ನೆಲೆ, ಅವುಗಳ ಪ್ರೇರಣೆ ಮತ್ತು ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ಏದುಸಿರು ಬಿಡುತ್ತಿದ್ದ ಅವುಗಳ ರಕ್ಷಣೆಗಾಗಿ ಮಂಜಪ್ಪನವರು ಪಟ್ಟ ಪಾಡು, ಪೇಚಾಟಗಳ ಹಿನ್ನೆಲೆಯನ್ನು ನೆನೆದರಂತೂ ಒಂದೊಂದು ಪತ್ರಿಕೆಯದೇ ಒಂದೊಂದು ರೋಮಾಂಚಕಾರಿಯಾದ ಕಥೆಯಾಗಿ ಅನುಭವಕ್ಕೆ ಬರುತ್ತದೆ.

ಕ್ರಿ.ಶ. 1906ರಲ್ಲಿ ದಾವಣಗೆರೆಯಲ್ಲಿ ಆರಂಭವಾದ 'ಧನುರ್ಧಾರಿ' ರಾಯಲ್ ಸೈಜಿನ ನಾಲ್ಕು ಪುಟಗಳ ಒಂದು ವಾರಪತ್ರಿಕೆ. ಪೂಣೆಯಿಂದ ಪ್ರಕಟವಾಗುತ್ತಿದ್ದ 'ಜ್ಞಾನಪ್ರಕಾಶ' ಎಂಬ ದಿನಪತ್ರಿಕೆಯಿಂದ ಸುದ್ದಿಗಳನ್ನು, 'ಕೇಸರಿ' ಮತ್ತು 'ಕಾಳ' ಪತ್ರಿಕೆಗಳಿಂದ ಲೇಖನಗಳ ಸಾರವನ್ನು ಸಂಗ್ರಹಿಸಿ ಪ್ರಕಟಿಸಲಾಗುತ್ತಿತ್ತು. ಹೀಗೆ, ಹಿಂದೆಯೇ ಹೇಳಿದಂತೆ, ಮರಾಠಿ ಪತ್ರಿಕೆಗಳಿಂದ ವಿಷಯವನ್ನು ಸಂಗ್ರಹಿಸಬೇಕಾದ ಅವರಿಗೆ ಮರಾಠಿಯ ಸರಿಯಾದ ಜ್ಞಾನವಾಗಲಿ, ಆರ್ಥಿಕ ಸೌಲಭ್ಯವನ್ನು ಮೊದಲುಗೊಂಡು ಇನ್ನಾವುದೇ ಕನಿಷ್ಠ ಸೌಲಭ್ಯವೂ ಅವರಿಗೆ ಇರಲಿಲ್ಲ. ಅಂದಿನ ಅನುಭವವನ್ನು ಕುರಿತು ಮಂಜಪ್ಪನವರು ತಮ್ಮ ಆತ್ಮಚರಿತೆಯಲ್ಲಿ ಹೇಳಿಕೊಂಡಿರುವ ಮಾತುಗಳು ಮನನೀಯವಾಗಿವೆ. "ಎಡಿಟರ್, ಮ್ಯಾನೇಜರ್, ಕಂಪೋಜಿಟರ್, ಎಲ್ಲವೂ ನಾವೆ. ಪ್ರೆಸ್ ಮತ್ತು ಟೈಪುಗಳು ಬಹು ಹಳೆಯವು. ಸರಿಯಾಗಿ ಕೆಲಸ ನಡೆಯುತ್ತಿರಲಿಲ್ಲ. ಕಾರ್ಡಬೋರ್ಡಗಳನ್ನು ಕತ್ತರಿಸಿಯೇ ನಾವು ಕಂಪೋಜಿಗೆ ಲೆಡ್ ಮಾಡಿಕೊಂಡಿದ್ದೆವು. ಪೇಟೆಯ 'ಮಿನಸರೀಸ್', ನಮ್ಮ ರೂಲರ್ ಕಾಂಪೋಜಿಶನ್ ಮಸಿ ಸರಿಯಾಗಿ ಹತ್ತದಿದ್ದಲ್ಲಿ ಅಂಗೈಯಿಂದ ಮಸಿ ಹಚ್ಚುತ್ತಿದ್ದುದೂ ಉಂಟು; - ಇಷ್ಟೆಲ್ಲ ಶ್ರಮ ಪಟ್ಟರೂ ವಾರಕ್ಕೊಮ್ಮೆ ಪತ್ರಿಕೆ ಪ್ರಕಟವಾದರೆ ಆ ಶ್ರಮವೇನೂ ನಮಗೆ ತೋರುತ್ತಿರಲಿಲ್ಲ." ಹೀಗೆ ಈ ಪತ್ರಿಕೆಯ ಚರಿತ್ರೆ ಮಂಜಪ್ಪನವರ ವ್ಯಕ್ತಿತ್ವದ ಧೀಶಕ್ತಿಗೆ ಒಂದು ನಿದರ್ಶನ.

ಧನುರ್ಧಾರಿ ಮೂಲತಃ ರಾಜಕೀಯ ಪ್ರೇರಣೆಯಿಂದಲೇ ಹುಟ್ಟಿಕೊಂಡ ಪತ್ರಿಕೆ. ಅಂದಿನ ರಾಜಕೀಯ ರಣರಂಗದ ಸಂದರ್ಭದ ಕನ್ನಡಿಗರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವದು ಅದರ ಪ್ರಮುಖ ಆಶಯವಾಗಿತ್ತು. ಅದಕ್ಕಾಗಿ ಅಂದಿನ ರಾಜಕೀಯ ವಿದ್ಯಾಮಾನಗಳೊಂದಿಗೆ ಅವುಗಳನ್ನು ಕುರಿತ ವೈಚಾರಿಕ ಪ್ರತಿಕ್ರಿಯೆಯೂ

ಅವರಲ್ಲಿ ಇರುತ್ತಿತ್ತು. ಇದರಿಂದಾಗಿ ಭಾಷೆಯಲ್ಲಿ, ನಿರೂಪಣೆಯಲ್ಲಿ ಒಂದು ಬಗೆಯ ಬೀಸು–ಬಿರುಸು, ಆವೇಶ ಇರುವದು ಸಹಜವಾಗಿತ್ತು. ಸಾತ್ವಿಕವೆನ್ನಬಹುದಾದ ಗುಡುಗು ಗರ್ಜನೆಯೂ ಇರುತ್ತಿತ್ತು. ಅಂದಿನ ರಾಷ್ಟ್ರೀಯ ಮುಖಂಡರ ತತ್ವಪ್ರಣಾಳಿಕೆಗಳ, ಅವರ ಚಟುವಟಿಕೆಗಳ ವಿಶ್ಲೇಷಣೆಯಲ್ಲಿ ಸಂಯಮತೆಯೊಂದಿಗೆ ಗಾಂಭೀರ್ಯವೂ ಕಾಣಿಸಿಕೊಳ್ಳುತ್ತಿತ್ತು; ಜೊತೆಗೆ ಜವಾಬ್ದಾರಿಯೂ ಇರುತ್ತಿತ್ತು. ಯಾವುದೇ ಮುಖಂಡರ ವ್ಯಕ್ತಿತ್ವವನ್ನು ಹಗುರಾಗಿ ಕಾಣುವದಾಗಲಿ, ಪರಿಹಾಸಗೈಯುವುದಾಗಲಿ, ಉಡಾಪಿಮಾತು ಗಳನ್ನು ಬಳಸುವದಾಗಲಿ ಇರಲಿಲ್ಲ. ಅಷ್ಟೇ ಅಲ್ಲ ಯಾವುದೇ ಮುಖಂಡರಿಗೆ ಯಾವುದೇ ಪತ್ರಿಕೆಯಿಂದ ಅಪಚಾರವಾದಾಗಲೂ ತಕ್ಷಣ ಅದನ್ನು ಪ್ರತಿಭಟಿಸುವದಕ್ಕೂ ಧನುರ್ಧಾರಿ ಹಿಂಜರಿಯುತ್ತಿರಲಿಲ್ಲ. ಯಾವ ಪೂರ್ವಗ್ರಹಕ್ಕೂ ಅಂಟಿಕೊಳ್ಳದ, ನಿರ್ದಾಕ್ಷಿಣ್ಯವಾದ ನಿಷ್ಪಕ್ಷಪಾತವಾದ ದೃಷ್ಟಿ–ಧೋರಣೆ ಅದರದು. ಕ್ರಿ.ಶ.1906ರಲ್ಲಿ ನಡೆದ ಒಂದು ಘಟನೆ ಇದಕ್ಕೊಂದು ಉದಾಹರಣೆ. ಅಂದಿನ ರಾಜಕೀಯ ವಿಮರ್ಶಕರೊಬ್ಬರು ಆಗಿನ ರಾಷ್ಟ್ರೀಯ ಸಭೆಯನ್ನು ಒಂದು ಕತ್ತೆಗೆ, ಅಂದಿನ ಬಂಗಾಲದ ಅನಭಿಷಕ್ತ ದೊರೆಗಳಾಗಿದ್ದ ಬಾಬು ರಾಜೇಂದ್ರನಾಥ ಬ್ಯಾನರ್ಜಿ ಅವರನ್ನು ಆ ಕತ್ತೆಯ ವ್ಯಾಪಾರಿಗೆ ಹೋಲಿಸಿ ಒಂದು ವ್ಯಂಗ್ಯ ಚಿತ್ರದ ಲೇಖನವನ್ನು ಬೆಂಗಳೂರಿನ 'ವಿಕಟ ಪ್ರತಾಪ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಧನುರ್ಧಾರಿ ತಕ್ಷಣ ಅದಕ್ಕೆ ತನ್ನ ಪ್ರತಿಭಟನೆಯನ್ನು ಪ್ರಕಟಿಸಿತು. ಪರಿಣಾಮವಾಗಿ ಬಿರುಸಿನ ವಾದವಿವಾದ ಬೆಳೆದು, ಆ ವಿಮರ್ಶಕರು ತಮ್ಮ ತಪ್ಪಿಗೆ ವಿಷಾದವನ್ನು ಪ್ರಕಟಿಸಿದರಂತೆ. ಒಟ್ಟಿನಲ್ಲಿ ಇಪ್ಪತ್ತು ವರುಷದ ತರುಣ ಮಂಜಪ್ಪನವರಿಗೆ ತಾರುಣ್ಯ ಸಹಜವಾದ ಹುರುಪು, ಉತ್ಸಾಹದೊಂದಿಗೆ ಒಬ್ಬ ಆದರ್ಶ ಪತ್ರಿಕಾಕರ್ತನಿಗೆ ಇರಬೇಕಾದ ಸಂಯಮತೆ, ಸಮತೋಲನ, ದಿಟ್ಟತನ ಮತ್ತು ವೃತ್ತಿ ಪಾವಿತ್ರ್ಯದ ಅರಿವು ಕೂಡ ಇದ್ದುದು ಗಮನಾರ್ಹ. ಧನುರ್ಧಾರಿ ಅಂದಿನ ಕರ್ನಾಟಕದ ಶ್ರೇಷ್ಠ ಪತ್ರಿಕೆಗಳಲ್ಲಿ ಒಂದೆಂದು ಹೇಳಲಾಗದಿದ್ದರೂ, ಅದರ ಕೊಡುಗೆ ಅಸಾಧಾರಣವೆಂದು ಭಾವಿಸಲಾಗದಿದ್ದರೂ, ಒಂದು ಮಿತಿಯಲ್ಲಿಯೇ ಆಗಲೊಲ್ಲದೇಕೆ, ಅಂದಿನ ಓದುಗರಲ್ಲಿ ಮೂಡಿಸಿದ ರಾಜಕೀಯ ಉತ್ಸಾಹ ಹಾಗೂ ಲವಲವಿಕೆಯನ್ನು ಮರೆಯುವಂತಿಲ್ಲ. ಒಟ್ಟಿನಲ್ಲಿ ಮುಂದೊಂದು ಕಾಲಕ್ಕೆ ಸಮೃದ್ಧವಾಗಿ ಬೆಳೆಯುವ ಮಂಜಪ್ಪನವರ ಸಾಹಸಮಯ ವ್ಯಕ್ತಿತ್ವದ ಹೊಗರಿನ ಕುರುವಾಗಿ ಧನುರ್ಧಾರಿ ಕಾಣಿಸಿಕೊಂಡಿತು.

ಗಾಂಧೀಜಿಯವರಂತೆ ಮಂಜಪ್ಪನವರೂ ದೇಶದ ಆರ್ಥಿಕ ಸ್ವಾವಲಂಬನೆಯನ್ನು ಕುರಿತು ತೀವ್ರ ಕಾಳಜಿಯನ್ನು ಹೊಂದಿದವರಾಗಿದ್ದರು. ಖಾದಿಯನ್ನು ಆರ್ಥಿಕ ಸ್ವಾವಲಂಬನೆಯ ಹಾಗೂ ದೇಶೀಯತೆಯ ಮೂಲಮಂತ್ರವನ್ನಾಗಿ ಗ್ರಹಿಸಿದ್ದರು. ವೀರಶೈವ ಧರ್ಮದಲ್ಲಿಯೂ ಅದಕ್ಕಿದ್ದ ಪಾವಿತ್ರ್ಯ ಹಾಗೂ ಪ್ರಾಧಾನ್ಯತೆ ಅವರಿಗೆ ಮತ್ತಿಷ್ಟು ಸ್ಫೂರ್ತಿಯನ್ನು ಒದಗಿಸಿತು. ಅದರಿಂದಾಗಿ ಅದರ ಪ್ರಚಾರದಲ್ಲಿ ಅವರಿಗೆ ವಿಶೇಷ ಆಸ್ಥೆ ಇತ್ತು. ಗಾಂಧೀಯವರೊಂದಿಗೆ ಕರ್ನಾಟಕದಲ್ಲೆಲ್ಲ ಸಂಚರಿಸಿ, ಹೋದಹೋದಲ್ಲೆಲ್ಲ

ಖಾದಿಯನ್ನು ಕುರಿತು ಉಪನ್ಯಾಸಗೈದರು. ದೇಶದ ಪಾವಿತ್ರ್ಯ ಮತ್ತು ಆರ್ಥಿಕ ಸ್ವಾವಲಂಬನದ ಹಿನ್ನೆಲೆಯಲ್ಲಿ ಖಾದಿಯ ಮಹತ್ವವನ್ನು ಬಿಂಬಿಸುವದಕ್ಕಾಗಿಯೇ ಒಂದು ಪ್ರತ್ಯೇಕ ಪತ್ರಿಕೆಯ ಅವಶ್ಯಕತೆಯನ್ನು ಮನಗಂಡಿದ್ದರು. 1928ರಲ್ಲಿ ಧಾರವಾಡದಲ್ಲಿ ಸೇರಿದ ಕರ್ನಾಟಕದ ಮೊದಲನೆಯ ಖಾದಿ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅದನ್ನು ತೀವ್ರವಾಗಿ ಪ್ರತಿಪಾದಿಸಿದರು. ಅಂದಿನ ಕರ್ನಾಟಕದ ಹಿರಿಯ ಮುಂದಾಳುಗಳಾಗಿದ್ದ ಮತ್ತು ಮಂಜಪ್ಪನವರನ್ನು 'ಕರ್ನಾಟಕ ಗಾಂಧಿ' ಎಂದೇ ಇಡೀ ನಾಡಿಗೆ ಗುರುತಿಸಿಕೊಟ್ಟ ಶ್ರೀ ದೇಶಪಾಂಡೆ ಗಂಗಾಧರರಾಯರು 'ಖಾದಿ' ಪತ್ರಿಕೆ ಹೊರಡಿಸಲು ಮೂರು ನೂರು ರೂಪಾಯಿಗಳನ್ನು ಕೊಟ್ಟು ಉತ್ತೇಜನವನ್ನಿತ್ತರು. ಅಂದಿನ ದಿನಮಾನದಲ್ಲಿ ಅದೊಂದು ದೊಡ್ಡಮೊತ್ತ. ಅದರಿಂದಲೇ ಶ್ರೀ ರಂಗನಾಥ ದಿವಾಕರ ಅವರೊಂದಿಗೆ 13-8-1928ರಂದು 'ಖಾದಿ ವಿಜಯ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು.

ಒಂದು ವರುಷದಲ್ಲಿ 'ಖಾದಿವಿಜಯ' ನಿಂತು, ಅದರ ಧ್ಯೇಯ-ಧೋರಣೆಗಳೇ ಮತ್ತಷ್ಟು ವ್ಯಾಪಕಗೊಂಡು 1930ರಂದು ಮಂಜಪ್ಪನವರ ಸಂಪಾದಕತ್ವದಲ್ಲಿ 'ಉದ್ಯೋಗ' ಎಂಬ ಮಾಸಪತ್ರಿಕೆ ಹೊರಡಲಾರಂಭಿಸಿತು. ಮಂಜಪ್ಪನವರೇ ಹೇಳಿಕೊಂಡಂತೆ ಅಂದಿನ ಕಾಲದ ಕನ್ನಡದಲ್ಲಿಯೇ ಇದು ಒಂದು ಉಪಯುಕ್ತವಾದ ಪತ್ರಿಕೆಯಾಗಿತ್ತು. ಬಸವ ಮತ್ತು ಗಾಂಧೀ ತತ್ವಗಳನ್ನು ಎದೆಯಲ್ಲಿ ತುಂಬಿಕೊಂಡು ಕರ್ನಾಟಕದ ಹಳ್ಳಿ-ಹಳ್ಳಿಗೂ ಸಂಚರಿಸಿದ ಮಂಜಪ್ಪನವರಿಗೆ ಗ್ರಾಮೀಣ ಪ್ರದೇಶದ ಬದುಕಿನ ದಾರಿದ್ರ್ಯ, ಮೌಢ್ಯಗಳ ಮತ್ತು ಗ್ರಾಮೀಣ ಜನರ ಅನುವು-ಆಪತ್ತುಗಳ ಪ್ರತ್ಯಕ್ಷ ಅನುಭವವಿತ್ತು. ಅವುಗಳಿಗೆಲ್ಲ 'ಕಾಯಕ' ಅಥವಾ ಉದ್ಯೋಗ, ಅವರ ದೃಷ್ಟಿಯಲ್ಲಿ, ಪರಿಣಾಮಕಾರಿಯಾದ ಏಕೈಕ ಉಪಾಯವಾಗಿತ್ತು. ಅದಕ್ಕಾಗಿ ದೇಶವಿದೇಶಗಳ ಆರ್ಥಿಕ ಸ್ಥಿತಿಯನ್ನು ಕಾರಣಸಹಿತವಾಗಿ ವೈಜ್ಞಾನಿಕ ಶೋಧನೆಗೆ ಒಳಪಡಿಸಿದರು. ಔದ್ಯೋಗೀಕರಣದ ಯುಗದಲ್ಲಿ ಭಾರತವು ಅನುಸರಿಸಬೇಕಾದ ಮಾರ್ಗವನ್ನು ಬಸವ-ಗಾಂಧೀಯವರ ಸಿದ್ಧಾಂತದ ನೆಲೆಯಲ್ಲಿಯೇ ಹುಡುಕಿಕೊಟ್ಟರು. ಒಂದು ರೀತಿಯಲ್ಲಿ ಅದು 'ಉದ್ಯೋಗ ಸಂಹಿತೆಯ ಮೂಲತತ್ವಗಳಿಗೆ ಬರೆದ ಭಾಷ್ಯವಾಗಿತ್ತು..' ನಿರುದ್ಯೋಗ ರಾಷ್ಟ್ರದ ಅಧೋಗತಿಗೆ ಮಾತ್ರವಲ್ಲ ಅದರ ಘಟಕಾಂಶಗಳಾದ ವ್ಯಕ್ತಿಯ ಬದುಕಿನ ಎಲ್ಲ ದುರಂತಗಳಿಗೂ ಮೂಲ ಕಾರಣವೆಂಬುದನ್ನು ಕುಕ್ಕುಲಾತಿಯಿಂದ ಅವರ ಲೇಖನಿ ತಿಳಿಹೇಳಿತು. ಕೃಷಿ ವಾಣಿಜ್ಯ ಇತ್ಯಾದಿ ಕ್ಷೇತ್ರಗಳಿಗೆ ಅವುಗಳ ಪರಂಪರೆ, ಸಮಸ್ಯೆಗಳಿಗೆ ಮಂಜಪ್ಪನವರು ಸೂಕ್ಷ್ಮ ಒಳನೋಟವನ್ನು ಮತ್ತು ದೂರದೃಷ್ಟಿಯನ್ನು ಹರಿಸಿದರು. ರಾಷ್ಟ್ರ ಅನುಭವಿಸುತ್ತಿದ್ದ ಆರ್ಥಿಕ ಸಂಕಷ್ಟದ ಸ್ವರೂಪವನ್ನು, ಕ್ಷಾಮ-ನೆರೆಹಾವಳಿಗಳ ಪರಿಣಾಮ ಹಾಗೂ ಅವುಗಳ ಪರಿಹಾರ ಮಾರ್ಗಗಳನ್ನು ಕುರಿತು ಮಾತ್ರವಲ್ಲ, ಆಶ್ಚರ್ಯದ ಮಾತೆಂದರೆ, ಆ ಕಾಲಕ್ಕಾಗಲೇ ಜನಸಂಖ್ಯಾಸ್ಫೋಟವನ್ನು ಕುರಿತು ಗಂಭೀರ ಆಲೋಚನಗೆ ತೊಡಗಿಸಿದರು.

"ಮಾನಸಿಕ ಪರಾಧೀನತೆಯು ಸಾಂಪತ್ತಿಕ ಪಾರತಂತ್ರ್ಯಕ್ಕೆ ಮೂಲವಾಗಿದೆ. ಸಾಂಪತ್ತಿಕ ಪಾರತಂತ್ರ್ಯವಾದರೋ ರಾಷ್ಟ್ರೀಯ ದಾಸ್ಯತ್ವಕ್ಕೆ ಮುಖ್ಯ ಕಾರಣವಾಗಿದೆ. ಆದುದರಿಂದ ಭಾರತೀಯರು ತಮ್ಮ ನಾನಾ ಪಾರತಂತ್ರ್ಯಗಳನ್ನು ನಿವಾರಣೆ ಮಾಡಿಕೊಳ್ಳುವ ಮುಂಚೆ ಸಾಂಪತ್ತಿಕ ದಾಸ್ಯತ್ವವನ್ನು ಮೊದಲು ತಗೆದು ಹಾಕಬೇಕು... ಆದಕಾರಣ ಭರತಖಂಡವು ಈ ಔದ್ಯೋಗಿಕ ಯುಗದಲ್ಲಿ ಪ್ರವೇಶಿಸಲು ಕನ್ನಡಿಗರು ಸಹಾಯಿಗಳಾಗಬೇಕೆಂಬ ಉದ್ದೇಶದಿಂದ ಈ ಉದ್ಯೋಗ ಪತ್ರಿಕೆಯನ್ನು ಈ ದಿವಸ ದೇಶಬಾಂಧವರ ಮುಂದಿಟ್ಟಿದ್ದೇನೆ" ಎಂದು ಮೊದಲ ಸಂಚಿಕೆಯಲ್ಲಿಯೇ ಪತ್ರಿಕೆಯ ಆಶಯ ಮತ್ತು ಧೋರಣೆಯನ್ನು ಪ್ರಕಟಿಸಿದ್ದರು. ಅಂದಿನ ಎಷ್ಟೋ ವಿಚಾರವಾದಿಗಳಿಂದಲೂ ಸಾಕಷ್ಟು ಮೌಲಿಕ ಲೇಖನಗಳನ್ನು ಬರೆಯಿಸಿ ಪ್ರಕಟಿಸಿದರು. ಆರ್ಥಿಕ ನೀತಿಯನ್ನು ಕುರಿತ ಈ ಪತ್ರಿಕೆಯ ಎಷ್ಟೋ ಲೇಖನಗಳು 21ನೆಯ ಶತಮಾನಕ್ಕೆ ಉರುಳುತ್ತಿರುವ ಇಂದಿನ ಆರ್ಥಿಕ ಸಂದರ್ಭದಲ್ಲೂ ಪ್ರಸ್ತುತವೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಆದರೆ ಒಂದು ಮಾತು, ಪತ್ರಿಕೆಯ ವಿಷಯ ಉದ್ದೇಶ ಏಕಮುಖಿಯಾದುದರಿಂದಲೋ, ವಾಚಕರನ್ನು ರಂಜಿಸುವ ವೃತ್ತಿತಂತ್ರವನ್ನು ಅನುಸರಿಸದೇ ಇದ್ದುದಕ್ಕೊ, ಪತ್ರಿಕೆಯ ನಿಷ್ಠುರ ಆದರ್ಶಬದ್ಧತೆಯೇ ಅದರ ಸರ್ವಸ್ವವೆಂದು ಭಾವಿಸದ ಕಾರಣಕ್ಕೊ ಏನೋ, ಚಂದಾದಾರರ ಸಂಖ್ಯೆ ಇಳಿಮುಖಗೊಳ್ಳುತ್ತ ಎರಡು ವರುಷದಲ್ಲಿ ಪತ್ರಿಕೆಯ ನರಗಳು ನಿಸ್ಸತ್ವಗೊಂಡವು.

17-8-1931 ರಂದು ಆರಂಭವಾದ 'ಶರಣ ಸಂದೇಶ' ವಾರಪತ್ರಿಕೆಯಂತೂ ತನ್ನ ಹಲವಾರು ಮಹತ್ವದ ವೈಶಿಷ್ಟ್ಯ ಹಾಗೂ ಗುಣವಿಶೇಷಗಳಿಂದಾಗಿ ಕರ್ನಾಟಕ ಪತ್ರಿಕೋದ್ಯಮದ ಚರಿತ್ರೆಯಲ್ಲಿಯೇ ಒಂದು ಮಹತ್ವದ ದಾಖಲೆ ಎನಿಸಿತು. ಅಂದಿನ ಭಾರತದ ಪತ್ರಿಕಾ ವ್ಯವಸಾಯದ ಹಿನ್ನೆಲೆಯಲ್ಲಿ ನೋಡಿದರೂ ಅದಕ್ಕಿರುವ ಸ್ವತಂತ್ರ ಅಸ್ತಿತ್ವ ಗೋಚರವಾಗುತ್ತದೆ.

12ನೆಯ ಶತಮಾನದ ವೀರಶೈವ ಸಾಮಾಜಿಕ ಆಂದೋಲನ, ಅದರ ಸ್ವರೂಪ–ವ್ಯಾಪ್ತಿ ಮತ್ತು ವರ್ಗರಹಿತ–ಶೋಷಣಾರಹಿತ ಸಮಾಜರಚನೆಯ ಪುರೋಗಾಮಿ ಧೋರಣೆ, ಕಾಯಕ, ದಾಸೋಹದಂತಹ ತತ್ವ–ಸಿದ್ಧಾಂತಗಳ ರಹಸ್ಯ ಅವುಗಳಲ್ಲಿಯ ಸಾರ್ವತ್ರಿಕವಾದ ಮಾನವೀಯ ಮೌಲ್ಯಗಳನ್ನು ಕಂಡು ಸ್ವತಃ ಮಂಜಪ್ಪನವರು ಬೆರಗುಪಟ್ಟಿದ್ದರು. ಇಪ್ಪತ್ತನೆಯ ಶತಮಾನದಲ್ಲೂ ಅವುಗಳ ಪ್ರಸ್ತುತತೆ ಅವರನ್ನು ದಂಗುಪಡಿಸಿತ್ತು. ಹಿಂದೆಯೇ ಹೇಳಿದಂತೆ ಗಾಂಧಿಯವರು ಆಗಲೆ ಆಚರಣೆಗೆ ತಂದಿದ್ದ ಒಂಬತ್ತು ತತ್ವಗಳನ್ನೂ ಮೀರಿದ, ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆಯೇ ನಿಂತುಕೊಂಡ ರಾಷ್ಟ್ರೀಯ ಹಾಗೂ ಸಾಮಾಜಿಕ ವ್ಯವಸ್ಥೆಯ ತತ್ವ–ಪ್ರಣಾಳಿಕೆಗಳನ್ನು ಶರಣರ ಆಂದೋಲನದಲ್ಲಿ ಕಂಡುಕೊಂಡಿದ್ದರು. ಗಾಂಧೀಜಿಯವರ ಸತ್ಯಾಗ್ರಹ–ಸರ್ವೋದಯದಂತಹ ವಿಶ್ವಮಾನ್ಯವಾದ ತತ್ವಗಳಿಗೆ ಅತ್ಯಂತ ಸಂವಾದಿಯಾದ ತತ್ವಗಳಿಂದ ರೋಮಾಂಚಿತರಾಗಿದ್ದರು. ಆದರೆ ಆ ತತ್ವಗಳ ಮಹತ್ವವನ್ನು ಅರಿತು ಆಚರಣೆಯಲ್ಲಿ

ಅಳವಡಿಸಿಕೊಂಡು ತಮ್ಮನ್ನು ತಾವು ಉದ್ಧರಿಸಿಕೊಳ್ಳಲಾಗದ ದರಿದ್ರ ಸಮಾಜವನ್ನು ಕಂಡು ಕನಿಕರಪಟ್ಟಿದ್ದರು. ಅಂತೆಯೇ ವೀರಶೈವ ಸಾಮಾಜಿಕ ಸಿದ್ಧಾಂತಗಳ ಒಳತಿರುಳನ್ನು, ಪ್ರಸ್ತುತ ಸಂದರ್ಭದಲ್ಲಿ ಅವುಗಳ ಉಪಯುಕ್ತತೆಯನ್ನು ಸಪ್ರಮಾಣವಾಗಿ ಅರ್ಥೈಸಿಕೊಡುವ, ಮನಗಾಣಿಸಿಕೊಡುವ ಉದ್ದೇಶದಿಂದಲೇ 'ಶರಣ ಸಂದೇಶ' ಹುಟ್ಟಿಕೊಂಡದ್ದು. ಕರ್ನಾಟಕದಲ್ಲಿ ಅದರಲ್ಲೂ ವೀರಶೈವ ಸಮಾಜದಲ್ಲಿ 'ಶರಣ ಸಂದೇಶ' ಮಾಡಿದ ಜಾಗೃತಿ ಇಂದಿಗೂ ಸಂಸ್ಮರಣೀಯ. "ಶ್ರೀ ಬಸವಾದಿ ಪ್ರಮಥರ ತತ್ವಗಳನ್ನು ಬಹುವಿವರವಾಗಿ ವಿಮರ್ಶಾತ್ಮಕ ದೃಷ್ಟಿಯಿಂದ ವಿವೇಚಿಸುವ ಪತ್ರಿಕೆಯು ಇದೊಂದೇ ಸರಿ. ವೀರಶೈವರಲ್ಲಿಯ ಒಳಪಂಗಡಗಳ ಕೊಳೆಯನ್ನು ತೊಳೆದು ಶುದ್ಧಿ ಮತ್ತು ಸಂಘಟನೆಗಳನ್ನುಂಟು ಮಾಡಲು ಹೆಚ್ಚಾದ ಜಾಗೃತಿಯನ್ನು" ಉಂಟು ಮಾಡಿತು. 1947ರ ವರೆಗೂ ಮುನ್ನಡೆದ ಈ ಪತ್ರಿಕೆ 1936ರಲ್ಲಿಯೇ ಎಂಟು ನೂರು ಪ್ರತಿಗಳು ಪ್ರಕಟವಾಗುತ್ತಿದ್ದವು. ಆಗ "ಮುಂಬೈ ಕರ್ನಾಟಕದ ವಾರಪತ್ರಿಕೆಗಳಲ್ಲಿ ಇಷ್ಟು ಸಂಖ್ಯೆಯುಳ್ಳವುಗಳು ವಿರಳವೆಂದೇ ಹೇಳಬಹುದು" ಎಂಬ ಮಂಜಪ್ಪನವರ ಆತ್ಮಚರಿತ್ರೆಯ ಮಾತು ಅದರ ಜನಪ್ರಿಯತೆಗೆ ಸಾಕ್ಷಿ.

ಹೀಗೆ 'ಶರಣ ಸಂದೇಶ' ದ ಮೂಲಪ್ರೇರಣೆ ಬಸವತತ್ವ ಅಥವಾ ಶರಣ ಸಂದೇಶವೇ ಆದರೂ ಆಗಲೇ ಹೇಳಿದಂತೆ ಅದರ ಅಂತಿಮ ಗುರಿ ರಾಷ್ಟ್ರೀಯತೆಯೇ ಎಂಬುದನ್ನು ಖಂಡಿತವಾಗಿಯೂ ಮರೆಯಲಾಗದು. ಪತ್ರಿಕೆಯ ಹೆಸರು 'ಶರಣ ಸಂದೇಶ' ಎಂದಿದ್ದರೂ ಅಂದಿನ ಸಾಮಾಜಿಕ, ರಾಜಕೀಯ, ಆರ್ಥಿಕ ಎಲ್ಲ ವಲಯಗಳ ವಿದ್ಯಮಾನಗಳನ್ನು, ಅವುಗಳ ಸಮಸ್ಯೆಗಳನ್ನು ಕುರಿತ ಚಿಂತನಪರವಾದ, ವೈಜ್ಞಾನಿಕ ದೃಷ್ಟಿಯುಳ್ಳ ವಿಮರ್ಶಾತ್ಮಕ ಲೇಖನಗಳನ್ನು ಪತ್ರಿಕೆ ಒಳಗೊಂಡಿರುತ್ತಿತ್ತು. ರಾಷ್ಟ್ರೀಯ–ಅಂತರರಾಷ್ಟ್ರೀಯ ಎಲ್ಲ ಆಗು–ಹೋಗುಗಳಿಗೆ ವೈಚಾರಿಕ ಪ್ರತಿಕ್ರಿಯೆಗಳಿಂದ ಕೂಡಿದ ಮಂಜಪ್ಪನವರ ಸಂಪಾದಕೀಯ ಹಾಗೂ ಅಗ್ರಲೇಖನಗಳು ಅಂದಿನ ಜನಸಾಮಾನ್ಯರನ್ನು ಮೊದಲುಗೊಂಡು ರಾಷ್ಟ್ರದ ಮುಂದಾಳುಗಳನ್ನೂ ಗಂಭೀರವಾಗಿ ಸ್ಪಂದಿಸುತ್ತಿದ್ದವು. ರಾಷ್ಟ್ರೀಯತೆಯ ಮೂಲಭೂತ ಪ್ರಜ್ಞೆಯನ್ನುಳ್ಳ 'ಶರಣ ಸಂದೇಶ' ದ ಮುಖಪುಟದಲ್ಲಿ ಬಸವ–ಗಾಂಧಿ, ರವೀಂದ್ರನಾಥ ಠಾಕೂರ, ಪರಮಹಂಸ, ವಿವೇಕಾನಂದ, ಗುರುನಾನಕ, ಶಂಕರ, ಮಾಧ್ವ, ಮೊದಲಾದ ವಿಭೂತಿ ಪುರುಷರ ಭಾವ ಚಿತ್ರಗಳನ್ನು ಪ್ರಕಟಿಸಲಾಗುತ್ತಿತ್ತು. ಆ ಮೂಲಕ ಭಾವೈಕ್ಯತೆಯನ್ನು ಮೂಡಿಸುವುದೇ ಅಲ್ಲದೆ ರಾಷ್ಟ್ರೀಯ ಪ್ರಜ್ಞೆಯನ್ನು ಜ್ವಲಂತವಾಗಿ ಇಡುವ ಪ್ರಯತ್ನವೂ ಸ್ಪಷ್ಟವಾಗಿರುತ್ತಿತ್ತು. ಇಷ್ಟಾಗಿಯೂ ತನ್ನ ಮುಖಪುಟದ ಶಿರೋಭಾಗದಲ್ಲಿಯೇ "ದಾಕ್ಷಿಣ್ಯಪರ ನಾನಲ್ಲವಯ್ಯಾ, ಲೋಕವಿರೋಧಿ ಶರಣನಾರಿಗೂ ಅಂಜುವನಲ್ಲ"' ಎಂಬ ಬಸವಣ್ಣನವರ ನುಡಿಯನ್ನೇ ಧ್ಯೇಯ ವಾಕ್ಯವನ್ನಾಗಿ ಧರಿಸಿದ್ದ ಪತ್ರಿಕೆ ಜಗತ್ತಿನ ಯಾವುದೇ ರಾಜಕೀಯ ಚಟುವಟಿಕೆಯನ್ನು, ಯಾವುದೇ ವ್ಯಕ್ತಿಯ ಧೋರಣೆಯನ್ನು ವಿಮರ್ಶಿಸುವಲ್ಲಿ, ಖಂಡಿಸುವಲ್ಲಿ ದಾಕ್ಷಿಣ್ಯಕ್ಕೆ ಒಳಗಾಗುತ್ತಿರಲಿಲ್ಲ.

ಕಾಂಗ್ರೆಸ್ ಪಕ್ಷವನ್ನುಳಿದು ಇತರ ರಾಜಕೀಯ ಪಕ್ಷಗಳನ್ನು ಅಸ್ಪೃಶ್ಯ ಪಕ್ಷಗಳೆಂದೇ ಕಾಣುತ್ತಿದ್ದ ಕಾಲವದು. ಜನರಲ್ಲಿ ಅಂಥ ಭಾವನೆಯನ್ನೇ ಉದ್ದೇಶಪೂರ್ವಕವಾಗಿ ತುಂಬಲಾಗುತ್ತಿತ್ತು. ಕಾಂಗ್ರೆಸ್ಸನ್ನು ಸೇರುವವೆಂದರೇನೇ ರಾಷ್ಟ್ರಭಕ್ತಿಯೆಂದು ಭಾವಿಸಲಾಗುತ್ತಿತ್ತು. ಅಂದಿನ 'ಶರಣ ಸಂದೇಶ' ಪತ್ರಿಕೆ ಅಂಥ ಅರಿಷ್ಟ ಪ್ರವೃತ್ತಿಯನ್ನು ನಿಷ್ಠುರವಾಗಿ ಖಂಡಿಸಲು ಹಿಂದೆಮುಂದೆ ನೋಡಲಿಲ್ಲ. ಈ ದೇಶವಲ್ಲಿ ಸ್ಥಾಪನೆಯಾಗುವ ಸ್ವರಾಜ್ಯವು ಸುರಾಜ್ಯವಾಗಬೇಕಾದರೆ ಎಲ್ಲ ಪಕ್ಷಗಳಿಗೂ ಸಮಾನ ಗೌರವವಿರಬೇಕಾದದ್ದು ನ್ಯಾಯಸಮ್ಮತವೆಂದು ಬಲವಾಗಿ ಪ್ರತಿಪಾದಿಸಿತು.

ಜಪಾನವು ಚೀನಾದೇಶದ ಮೇಲೆ ನಡೆಸಿದ ಆಕ್ರಮಣ ಹಾಗೂ ಎಸಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸುವುದಕ್ಕಾಗಿ ದಿನಾಂಕ:20-9-1937ರಂದು 'ಚೈನಾ ದೇಶದ ದಿನ' ಎಂದು ಆಚರಿಸಲು ಜವಾಹರಲಾಲ ನೆಹರು ಅವರು ಕರೆ ಕೊಟ್ಟಾಗ ಪತ್ರಿಕೆ ಸ್ಪಷ್ಟವಾಗಿ ತನ್ನ ಅಸಮ್ಮತಿಯನ್ನು ಸೂಚಿಸಿತು. "ಹಿಂದೂಸ್ತಾನದ ದಿನವನ್ನು ಬೇರೆ ಯಾವ ರಾಷ್ಟ್ರಗಳಾದರೂ ಆಚರಿಸುತ್ತಿವೆಯೆ?" ಎಂದು ಪ್ರಶ್ನಿಸಿತು. ಹಾಗೆಯೇ ಇಟಲಿಯು ಅಬಿಸಿನಿಯ ರಾಷ್ಟ್ರವನ್ನು ನುಂಗುತ್ತಿದ್ದಾಗ ರಾಷ್ಟ್ರಸಂಘದ ನಿಷ್ಕ್ರಿಯತೆಯನ್ನು ಎತ್ತಿ ತೋರಿಸಿತು.

ಜಗತ್ತಿನ ರಾಜಕೀಯವನ್ನು ವಿಶ್ಲೇಷಿಸುತ್ತ ನುಡಿದ ಅವರ ತರ್ಕಬದ್ಧವಾದ ಎಷ್ಟೋ ಊಹೆಗಳು ಪ್ರವಾದಿಯ ವಾಣಿಯಂತೆ ನಿಜವಾದದ್ದು ಕೂಡ ಮಂಜಪ್ಪನವರ ರಾಜನೀತಿಜ್ಞತೆಗೆ ಒಂದು ಉತ್ತಮ ಉದಾಹರಣೆ.

"ಹಿಟ್ಲರನ ಕೊನೆಯ ಪ್ರಯತ್ನ ಅವನ ಅಪಜಯಕ್ಕೆ ಕಾರಣವಾಗಿ, ರಕ್ತದಾಹವು ಅಡಗಿ ಪ್ರಪಂಚಕ್ಕೆ ಶಾಂತಿ ಲಭಿಸುವುದರಲ್ಲಿ ಸಂದೇಹವಿಲ್ಲ" ಎಂದು ಹೇಳಿದ್ದು ಮೇಲಿನ ಮಾತಿಗೆ ಒಂದು ನಿದರ್ಶನ.

ಭಾರತದ ಐಕ್ಯತೆಗೆ ಅದರ ಸಮಗ್ರತೆಗೆ ಭಂಗತರುವ ಕ್ರಿಪ್ಸ ಯೋಜನೆಯಿಂದ ಸಂತಾಪಗೊಂಡ ಮಂಜಪ್ಪನವರು "ಭಾರತದ ಅಖಂಡತ್ವವನ್ನು ಆಹುತಿಕೊಟ್ಟು ಸ್ವಾತಂತ್ರ್ಯ ಹೊಂದಲಪೇಕ್ಷಿಸುವದೆಂದರೆ ನೀರಡಿಸಿ ವಿಷಕುಡಿದಂತೆಯೇ ಸರಿ. ಪ್ರಾಂತಗಳು ಮತ್ತು ಸಂಸ್ಥಾನಗಳು ಹೀಗೆ ಬೇರೆಯಾಗಲು ಅವಕಾಶವುಂಟಾದರೆ ಭಾರತಮಾತೆಯ ಶಿರ-ಬಾಹು ಮೊದಲಾದ ಅವಯವಗಳು ಛೇದಿಸಲ್ಪಡುವವೆಂದೇ ಹೇಳಬೇಕು." ಎಂದು ಭಾರತೀಯರಿಗೆ ಗಂಭೀರ ಎಚ್ಚರಿಕೆಯನ್ನು ಕೊಟ್ಟರು. ಹಾಗೆಯೇ ಗಾಂಧೀಜಿಯವರ ವಿಚಾರಗಳನ್ನೂ ವಿರೋಧಿಸಿದ ಉದಾಹರಣೆಗಳಿಗೂ ಲೆಕ್ಕವಿಲ್ಲ. 1942ರ ಹಿಂದೂ-ಮುಸ್ಲಿಂ ಗಲಭೆಯಲ್ಲಿ ಕಾಣಿಸಿಕೊಂಡ ಹಿಂಸೆ ನಿಲ್ಲುವವಾದರೆ ಪಾಕಿಸ್ತಾನದ ರಚನೆಗೂ ತಮ್ಮ ಸಮ್ಮತಿ ಇರುವುದಾಗಿ ಗಾಂಧೀಜಿಯವರು ಪ್ರಕಟಿಸಿದಾಗ "ರಾಷ್ಟ್ರಕ್ಕೆ ಈಗ ಸಂಭವಿಸಿರುವ

ಬಿಕ್ಕಟ್ಟಿನಲ್ಲಿ ಗಾಂಧೀಜಿಯವರಂತಹ ರಾಷ್ಟ್ರವಲ್ಲಿ ಅದ್ಭುತ ವರ್ಚಸ್ಸುಳ್ಳ ಮತ್ತು ಸನಾತನಿ ಹಿಂದೂಗಳೆಂದು ಹೇಳಿಕೊಳ್ಳುವವರು, ಇಂತಹ ರಾಷ್ಟ್ರ ಘಾತುಕ ವಿಚಾರವನ್ನು ಪ್ರಚಾರಗೊಳಿಸುವದೂ ಮಹದನರ್ಥಕವೆಂದು ನಾವು ಸ್ಪಷ್ಟವಾಗಿ ಅತ್ಯಂತ ವಿಷಾದದಿಂದ ತಿಳಿಸುತ್ತೇವೆ" ಎಂದು ತಮ್ಮ ಸಾತ್ವಿಕ ಸಂತಾಪವನ್ನು ವ್ಯಕ್ತಗೊಳಿಸಿದರು.

ಹೀಗೆ ರಾಷ್ಟ್ರಭಕ್ತಿಯಿಂದ ಪ್ರಾದುರ್ಭವಿಸಿದ ನಿಷ್ಠುರತೆ, ದಿಟ್ಟತನವೂ 'ಶರಣ ಸಂದೇಶ' ಪತ್ರಿಕೆಯ ಪ್ರಮುಖ ವೈಶಿಷ್ಟ್ಯಗಳಲ್ಲಿ ಒಂದು.

ಒಟ್ಟಿನಲ್ಲಿ ಮಂಜಪ್ಪನವರು ಹೊರಡಿಸಿದ ಪ್ರತಿಯೊಂದು ಪತ್ರಿಕೆಯ ಸಂದರ್ಭವೂ ಪತ್ರಿಕಾ ವ್ಯವಸಾಯದ ಶಿಸ್ತು ಮತ್ತು ಆದರ್ಶಗಳನ್ನು ಪರಿಪಾಲಿಸಿಕೊಂಡು ಬಂದಿರುವದು ಗಮನಾರ್ಹ. ಯಾವುದೇ ಪತ್ರಿಕೆಯ ಪ್ರಕಟನೆಯಲ್ಲಿ ತೋರುತ್ತಿದ್ದ ಸಮಯಪ್ರಜ್ಞೆ ಹಾಗೂ ಪರಿಶ್ರಮ ಅಂಥ ಆದರ್ಶಗಳಲ್ಲಿ ಒಂದು. 'ಧನುರ್ಧಾರಿ'ಯನ್ನು ಪ್ರಕಟಿಸುತ್ತಿದ್ದ ಸಂದರ್ಭದಲ್ಲಿ ಮುದ್ರಣ ಕಾರ್ಯವನ್ನು ಮೊದಲುಗೊಂಡು ಸಂಪಾದನೆಯ ವರೆಗಿನ ಎಲ್ಲ ಹೊಣೆಯನ್ನು ತಾವೇ ಹೊತ್ತು ನಿತ್ತರಿಸಿದುದನ್ನು ಮತ್ತೆ ಸ್ಮರಿಸಬೇಕು. ಅದರೊಂದಿಗೆ 1943ರ ಯುದ್ಧ ಕಾಲದಲ್ಲಿ ಕಾಗದದ ಅಭಾವ ತಲೆದೋರಿದಾಗ ಕೈಕಾಗದವನ್ನೇ ತಯಾರಿಸಿ "ಶರಣ ಸಂದೇಶ" ವನ್ನು ಬಹು ಕಷ್ಟದಿಂದ ಮುಂದುವರೆಸಿದ ಅವರ ಶ್ರೇಯಸ್ಸನ್ನು ಸ್ಮರಿಸಬೇಕು. ಮುಖ್ಯವಾಗಿ ಮಂಜಪ್ಪನವರು ಪತ್ರಿಕೆಯನ್ನು ಒಂದು ಲಾಭದಾಯಕ ವೃತ್ತಿಯನ್ನಾಗಿ ಮಾಡಿಕೊಂಡಿರಲಿಲ್ಲ. ಅಂತೆಯೇ ಅವರ ಪತ್ರಿಕೆಗಳು ಯಾವುದೇ ಪಕ್ಷದ ಯಾವುದೇ ಮುಖಂಡನ ಮುಖವಾಣಿಯಾಗಿ ಬೆಳೆಯದೆ, ಸ್ವಾತಂತ್ರ್ಯಸಂಗ್ರಾಮದ, ರಾಷ್ಟ್ರಪ್ರಜ್ಞೆಯ ಶಂಖನಾದವಾಗಿ, ಕಹಳೆಯ ನಿನಾದವಾಗಿ ಮೊಳಗಿದವು. ಅರ್ಥಹೀನ ವಿವಾದವನ್ನೆಬ್ಬಿಸಿ ದೋಷಾರೋಪಣೆಯನ್ನು ಮುಂದೆಮಾಡಿ ವ್ಯಕ್ತಿಗಳನ್ನು ಸಮಾಜವನ್ನು ಪೇಚಿಗೆ ಸಿಕ್ಕಿಸಿ ದುರ್ಲಾಭ ಪಡೆಯುವ ಧೂರ್ತತನದಿಂದ ಪತ್ರಿಕೆಯ ಪಾವಿತ್ರ್ಯಕ್ಕೆ ಭಂಗಬರದಂತೆ ಎಚ್ಚರಿಕೆ ವಹಿಸಿದರು. ಲಾಭದಾಸೆಗೆ ಜಾಹಿರಾತುಗಳನ್ನು ಪ್ರಕಟಿಸುವದಾಗಲಿ ರಂಜನೀಯವೆನಿಸುವ ಚಿಲ್ಲರೆ ವಿಷಯಗಳನ್ನು ಮತ್ತು ವಾರಭವಿಷ್ಯವನ್ನು ಪ್ರಕಟಿಸುವದಾಗಲಿ, ಅವರ ಮನೋಧರ್ಮಕ್ಕೆ ತೀರದೂರ, ಕೇವಲ ದೇಶಭಕ್ತಿಗೆ ಪ್ರೇರಕವಾದ, ಸಮಾಜ ಸುಧಾರಣೆಗೆ ಸ್ಫೂರ್ತಿಯನ್ನೀಯುವ ಲೇಖನಗಳನ್ನು ಪ್ರಕಟಿಸುವದು, ಅಂದಿನ ರಾಜಕೀಯ ಬಿರುಗಾಳಿಯಲ್ಲಿ ತತ್ತರಿಸುತ್ತಿದ್ದ ಪರಿಸರವನ್ನು ಹಾಗೂ ಅಂದಿನ ರಾಷ್ಟ್ರದ ಮತ್ತು ಜಗತ್ತಿನ ಮುಖಂಡರ ತಪ್ಪು ಹೆಜ್ಜೆಗಳನ್ನು ರಾಜಕೀಯ ಆವೇಶವನ್ನು ನಿಯಂತ್ರಿಸುವ ಘನವಾದ, ಸಾರ್ಥಕವಾದ ಕಾರ್ಯವನ್ನು ಮಂಜಪ್ಪನವರ ಪತ್ರಿಕೆಗಳು ವೀರವ್ರತಿಗಳಂತೆ ನಡೆಸಿಕೊಂಡುಬಂದವು.

ಎಲ್ಲಕ್ಕೂ ಮುಖ್ಯವಾಗಿ ಅಂದಿನ ಗ್ರಾಮೀಣ ಅರೆಶಿಕ್ಷಿತ ಸಮುದಾಯದಲ್ಲಿ ಓದುವ ಅಭಿರುಚಿಯನ್ನು ಮೂಡಿಸಿ ಸಮಕಾಲೀನ ರಾಜಕೀಯ, ಸಾಮಾಜಿಕ, ಆರ್ಥಿಕ, ನೈತಿಕ,

ಸಾಂಸ್ಕೃತಿಕ ಅರಿವು ಹಾಗೂ ಕಾಳಜಿಯನ್ನು ಮೂಡಿಸಿದ್ದು ಅವುಗಳ ಅತಿದೊಡ್ಡ ಶ್ರೇಯಸ್ಸು. ವೈವಿಧ್ಯಮಯವಾದ ಸಾಹಿತ್ಯ ನಿರ್ಮಾಣಕ್ಕೆ ತಮ್ಮನ್ನು ತೊಡಗಿಸಿಕೊಂಡ ಮಂಜಪ್ಪನವರು ಆಯಾ ಪ್ರಕಾರಗಳಿಗೆ ಮತ್ತು ಆಯಾ ಉದ್ದೇಶಗಳಿಗೆ ಹೊಂದಿಕೊಳ್ಳುವ ಹದವಾದ ಸರಳ ಭಾಷೆಯನ್ನು ಸೃಷ್ಟಿಸಿಕೊಂಡರು; ಅದನ್ನು ದುಡಿಸಿಕೊಳ್ಳುವಲ್ಲಿಯೇ ಮುತ್ಸದ್ದಿತನವನ್ನು ತೋರಿದರು. ಅವರ ಈ ಪರಿಣತಿಯನ್ನು ಅವರ ವಿವಿಧ ಪ್ರಕಾರಗಳನ್ನು ತೌಲನಿಕವಾಗಿ ನೋಡಿ ತಿಳಿಯಬೇಕು. ಸ್ಪಷ್ಟತೆ, ಖಚಿತತೆ, ಸರಳತೆ, ಮಾರ್ಮಿಕತೆ ಮತ್ತು ತೀಕ್ಷ್ಣತೆ ಇವು ಅವರ ಪತ್ರಿಕಾಭಾಷೆಯ ಪ್ರಮುಖ ಅಂಶಗಳು. ಇವು ಇನ್ನುಳಿದ ಅವರ ಸಾಹಿತ್ಯದ ಗುಣಗಳಾಗಿ ಕಂಡರೂ ಸಂಶೋಧನಾ ಸಾಹಿತ್ಯದಲ್ಲಿ ಕಂಡುಬರುವ ಪರಿಭಾಷೆ, ಅದರ ಪ್ರೌಢಿಮೆ, ಗಾಂಭೀರ್ಯ ಹಾಗೂ ಅನಿವಾರ್ಯವಾದಲ್ಲಿ ಕಂಡಬರುವ ಸಂಕೀರ್ಣತೆ. ಅವರ ಪತ್ರಿಕಾ ಸಾಹಿತ್ಯದ್ದಲ್ಲ; ಮಕ್ಕಳ ಸಾಹಿತ್ಯದಲ್ಲಿಯಂತೆ ನೇರ, ಸಿದ್ಧಭಾಷೆಯೂ ಅಲ್ಲ. ಒಂದು ವಿಶಿಷ್ಟ ಸಂದರ್ಭದ ಬಗೆಗೆ ತಿಳುವಳಿಕೆಯನ್ನು ಒದಗಿಸುತ್ತಲೇ ಪ್ರಚೋದನೆಯನ್ನೂ ಒದಗಿಸುವ ಅವರ ಪತ್ರಿಕೆಯ ಭಾಷೆ ಮಿಕ್ಕ ಸಾಹಿತ್ಯ ಭಾಷೆಗಿಂತ ಭಿನ್ನವಾದದ್ದು. ಅದಕ್ಕಾಗಿ ಕೊಡುವ ಉಪಮೆ, ದೃಷ್ಟಾಂತ ಹಾಗೂ ಉದ್ದೇಶಪೂರ್ವಕವಾಗಿಯೇ ಅನುಸರಿಸುವ ಪ್ರಾಸಬದ್ಧತೆಯನ್ನು ಈ ಹಿನ್ನಲೆಯಲ್ಲಿ ಗ್ರಹಿಸಬೇಕು. "ಮಾತು ಮುರಿದರೂ ಘಾತಕರ ರೀತಿ ಅಳಿದಿಲ್ಲ." 'ಬಂಗಾಲದ ಮತ್ತೊಂದು ಬರಗಾಲ' 'ತೊಡಕು ಬಿಚ್ಚುವದೋ ಹೆಚ್ಚುವದೊ' 'ಕತ್ತಿಯನ್ನು ಕೊಡಬಹುದು ಕಲಿತನವನ್ನು ಕೊಡಬಹುದೆ' – ಇತ್ಯಾದಿಗಳನ್ನು ಪರಿಭಾವಿಸಬೇಕು. ಮಂಜಪ್ಪನವರು ಪತ್ರಿಕಾಭಾಷೆಯ ರಹಸ್ಯವನ್ನು ತಿಳಿದುಕೊಂಡವರಾಗಿದ್ದರು ಎನ್ನುವದಕ್ಕೆ ಅವರ 'ಶರಣ ಸಂದೇಶ' ಒಂದು ಉತ್ಕೃಷ್ಟ ನಿದರ್ಶನ.

ಒಟ್ಟಿನಲ್ಲಿ ಕರ್ನಾಟಕ ಪತ್ರಿಕಾ ವ್ಯವಸಾಯದ ಚರಿತ್ರೆಯಲ್ಲಿ ಮಂಜಪ್ಪನವರ ಹೆಸರು ಅಗ್ರ ಪಂಕ್ತಿಯಲ್ಲಿ ನಿಲ್ಲುವಂತಹದು ಎಂಬುದಕ್ಕೆ ಎರಡು ಮಾತಿಲ್ಲ.

## ಅನುಬಂಧ-1

# ಮಂಜಪ್ಪನವರ ಕೃತಿಗಳು

1. ಅಕ್ಕನ ಉಪದೇಶ (1929)
2. ಅಣ್ಣನ ಕ್ರಾಂತಿ
3. ಅಣ್ಣನವರ ಅರ್ಪಣಯೋಗ
4. ಅಪ್ಪಾಸಾಹೇಬ ವಾರದ(1909)
5. ಅರವತ್ತು ಮೂರು ಪುರಾತನರ ಚರಿತ್ರೆ
6. ಅಹಿಂಸೆ (1923)
7. ಆದಿಜನ ಸುಧಾರಣೆ (1934)
8. ಆಧುನಿಕ ಜರ್ಮನಿ (1918)
9. ಆರೋಗ್ಯ ಜೀವನ (1920)
10. ಆರ್ಯತೇಜ
11. ಋಗ್ವೇದಸಾರ (ಅಪ್ರಕಟಿತ)
12. ಎಚ್ಚೆತ್ತ ಹಿಂದುಸ್ತಾನ (1946)
13. ಏಕಲವ್ಯ (1929)
14. ಕಚದೇವನ ಕಥೆ (1929)
15. ಕನ್ನಡ ಒಂದನೆಯ ಪುಸ್ತಕದ ಶಬ್ದಾರ್ಥ
16. ಕಾಯಕವೇ ಕೈಲಾಸ
17. ಕೈ. ಅಪ್ಪಾಸಾಹೇಬ ವಾರದ (1917)
18. ಕೇರ್ ಹಾರ್ಡಿಯವರ ಭಾರತ ಪರ್ಯಟನ (1923)
19. ಗಾಂಧೀ ಸಂದೇಶ
20. ಗೃಹ ಶಿಕ್ಷಣ
21. ಗೋ ಸೇವೆ
22. ಖಾದಿ (1923)
23. ಖಾದಿಶಾಸ್ತ್ರ (1933)

24. ಚನ್ನಬಸವಣ್ಣನವರ ಉಪದೇಶ
25. ಜನಸೇವಕನ ವಚನಗಳು
26. ಜಾತಿವಾದದ ವಿಮರ್ಶೆ
27. ಜಾತ್ರೆಗಳ ಸುಧಾರಣೆ (1941)
28. ತರುಣರ ಕೈಪಿಡಿ
29. ದಾಂಪತ್ಯ ಜೀವನ (1931)
30. ದಾಂಪತ್ಯ ಧರ್ಮ (1931)
31. ದೀನಬಂಧು ಆನ್ಕಡ್ರೂಸ್
32. ದೇವಯಾನಿ (1929)
33. ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ (1936)
34. ನಿಜಗುಣಾರಾಧ್ಯರ ಸರ್ಪಭೂಷಣ ಶಿವಯೋಗಿಗಳ ಪದಗಳು (ಸಂಗ್ರಹ) (1911)
35. ಪತಿತೋದ್ಧಾರ (1917)
36. ಪ್ರಭುದೇವರ ಕಥೆ (1929)
37. ಪ್ರಮಥಾಚಾರ ದೀಪಿಕೆ (1935)
38. ಬಸವಚರಿತ್ರೆ (1924)
39. ಬಸವಣ್ಣನವರ ಚರಿತ್ರೆ (1929)
40. ಬಸವ ಬೋಧಾಮೃತ (1926)
41. ಬಸವ ಭಕ್ತಿ
42. ಬುದ್ಧಿಯ ಮಾತು (1916)
43. ಭಾಗ್ಯದ ಬೀಗದ ಕೈ
44. ಭಾರತೀಯರ ದೇಶಭಕ್ತಿ (1921)
45. ಬಸವ ಸಂದೇಶ (1933)
46. ಬಸವಣ್ಣನವರ ನೈತಿಕ ವಚನಗಳು (ಸಂಗ್ರಹ) (1913)
47. ಬ್ರಹ್ಮಚರ್ಯ (1923)
48. ಭಕ್ತಿಯ ಬೆಳಕು (1934)

49. ಭಗವಾನ್ ಬುದ್ಧನ ಚರಿತ್ರೆ(1923)
50. ಮಹಾತ್ಮಾಗಾಂಧೀಜಿಯವರ ಚರಿತ್ರೆ(1919)
51. ಮಹಾದೇವಿಯಕ್ಕನ ಚರಿತ್ರೆ(1929)
(ಇದು ಮತ್ತು ಅಕ್ಕನ ಉಪದೇಶ ಒಂದೇ ಇರಬಹುದೆಂಬ ಊಹೆ ಇದೆ.)
52. ಮಹಾತ್ಮಾಗಾಂಧೀ ಪ್ರಣೀತ ಸತ್ಯಾಗ್ರಹ ಧರ್ಮ (1922)
53. ಮಹಾನುಭಾವರಾದ ಬಸವಣ್ಣನವರ ಉಪಮೆಗಳು
54. ಲಜಪತರಾಯರ ಚರಿತ್ರೆ (1929)
55. ರಾಷ್ಟ್ರಗೀತೆ (ಪದ್ಯಸಂಕಲನ)
56. ಲಿಂಗಪೂಜೆಯ ಐತಿಹಾಸಿಕ ವಿವೇಚನೆ
(ಇದು ಹಾಗೂ 'ಲಿಂಗವಂತರ ಪ್ರಾಚೀನತ್ವ' ಒಂದೇಯಾಗಿರಬೇಕೆಂದು ವಿದ್ವಾಂಸರ ಊಹೆ. ಆದರೆ ಬೇರೆಯಾಗಿರುವ ಸಾಧ್ಯತೆ ಹೆಚ್ಚು)
57. ಲಿಂಗರಾಜರ ಚರಿತ್ರೆ
58. ಲಿಂಗವಂತರ ಪ್ರಾಚೀನತೆ
59. ವಚನಕಾರರ ಸಮಾಜ ರಚನೆ
60. ವಿಜಯವಾಣಿ
61. ವಿದ್ಯಾಲಯ ಭಜನಾವಳಿ (1929)
62. ವೀರಶೈವ ಏಕೀಕರಣ (1933)
63. ವೀರಶೈವ ಮತತತ್ವ
64. ವೀರಶೈವ ಮತಬೋಧೆ
65. ವೀರಶೈವ ಸಮಾಜಸುಧಾರಣೆ (1921)
66. ಶರಣ ಬಸವೇಶ್ವರ ಚರಿತ್ರೆ (1929)
67. ಶ್ರೀ ಸ್ವಾಮಿ ರಾಮತೀರ್ಥರವರ ಜೀವನ ಚರಿತ್ರೆ (1921)
68. ಶುದ್ಧಿ ಮತ್ತು ಸಂಘಟನೆ (1938)
69. ಸತ್ಯಾಗ್ರಹ (1923)
70. ಸತ್ಯಾಗ್ರಹ ಧರ್ಮ (1922)
71. ಸತ್ಯಾಗ್ರಹ ಪದ್ಯಾವಳಿ (1923)

72. ಸತ್ಯಾರ್ಥ ಪ್ರಕಾಶಿಕೆ ( ಅಪ್ರಕಟಿತ)
73. ಸಂಗನಬಸವನ ಸ್ತುತಿ (ಪದ್ಯ) (1945)
74. ಸ್ವಕರ್ತವ್ಯ ಸಿದ್ಧಾಂತ (ಮೊ.ಮು.1915, ದ್ವಿಮು 1921)
75. ಸಿದ್ಧರಾಮ ಶಿವಯೋಗಿಗಳ ಉಪದೇಶ
76. ಸ್ತ್ರೀನೀತಿ ಸಂಗ್ರಹ (1922)
77. ಸುಕಲಾದೇವಿ (1929)
78. ಸುಬೋಧ ಸಾರ (ಸಂಗ್ರಹ) (1941)
79. ಹಳ್ಳಿಯ ಸಂಚಾರ (ಅಪ್ರಕಟಿತ)
80. ಹಿಂದುಗಳ ಕೈಗನ್ನಡಿ
81. ಹಿಂದುತ್ವ
82. ಹಿಂದೂ ಜಾಗೃತಿ ಅವಶ್ಯಕವೆ
83. ಹಿಂದೂ ಸಂಘಟನೆ

## ಪತ್ರಿಕೆಗಳು

1. ಧನುರ್ಧಾರಿ - ವಾರಪತ್ರಿಕೆ (1906-1915)
2. ಖಾದಿ ವಿಜಯ - ಮಾಸಪತ್ರಿಕೆ (1928 ಆಗಸ್ಟ್ 13 ರಿಂದ 1929)
3. ಉದ್ಯೋಗ - ಮಾಸಪತ್ರಿಕೆ (1930 ಫೆಬ್ರುವರಿ - 13 ರಿಂದ 1932)
4. ಶರಣ ಸಂದೇಶ - ವಾರಪತ್ರಿಕೆ (1931 ಆಗಸ್ಟ್ 17 ರಿಂದ 1947)

# ಅನುಬಂಧ-2
# ಮಂಜಪ್ಪನವರನ್ನು ಕುರಿತ ಸಾಹಿತ್ಯ

## *ಗ್ರಂಥಗಳು:*


1. ನಂದೀಮಠ. ಶಿ.ಚಿ. ಮತ್ತು ಇತರರು (ಸಂ) - "ಲಿಂಗೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ ($5 \frac{1}{2}$ x $8 \frac{1}{2}$; ಪುಟ: 6+63+123), ಪ್ರ: ಬಾಗಿಲುಕೋಟೆ, ಎಸ್.ಸಿ.ನಂದೀಮಠ, 1951.

2. ಹಾಲಪ್ಪ.ಗ.ಸ. (ಸಂ)- "ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ" ($6\frac{1}{2}$ x $9 \frac{1}{2}$; ಪುಟ: XVI+1348), ಪ್ರ: ಧಾರವಾಡ, ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ, 1966.

3. (ಸಂ) "ಕೈ.ವಾ. ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ ಪುಣ್ಯಸ್ಮರಣೆ" ($4\frac{1}{2}$ x 7, ಪುಟ: -8+62), ಪ್ರ: ಆಡೂರ, ವಿಶ್ವನಾಥ ವಾಚನಾಲಯ; ಪ್ರ. ಮು. 1962.

4.ಹಾಲಪ್ಪ. ಜಿ. ಎಸ್-"ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು" (4 x 6, ಪುಟ 8 + 71). ಪ್ರ: ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, 1970

5. ಭೂಸರಡ್ಡಿ.ಎಸ್.ಎಸ್ - "ಹರ್ಡೇಕರ ಮಂಜಪ್ಪ" (4 x $5 \frac{1}{2}$ ; ಪು. 4 + 48), ಪ್ರ: ದೆಂಗಳೂರು, ಭಾರತ - ಭಾರತಿ ಪುಸ್ತಕ ಸಂಪದ, 1975.

6. ಗುಬ್ಬಣ್ಣನವರ ಶಿವಾನಂದ (ಡಾ) : "ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು" ($5 \frac{1}{2}$ x $8 \frac{1}{2}$ ಪುಟ. VIII+27), ಪ್ರ: ಆಲಮಟ್ಟಿ , ವೀರಶೈವ ವಿದ್ಯಾಲಯ ಸಂಘ, 1977.

7. ಪುರಾಣಿಕ ಸಿದ್ಧಯ್ಯ - "ಹರ್ಡೇಕರ ಮಂಜಪ್ಪನವರು" (4 x 6 ಪುಟ. 7 + 134), ಪ್ರ: ಗದಗ, ವೀರಶೈವ ಅಧ್ಯಯನ ಸಂಸ್ಥೆ. ಪ್ರ.ಮು - 1978, ದ್ವಿ. ಮುದ್ರಣ, 1980.

8. ನಿರ್ದೇಶಕರು, ಪ್ರಸಾರಾಂಗ (ಸಂ). "ಹರ್ಡೇಕರ ಮಂಜಪ್ಪನವರು: ಜೀವನ ಹಾಗೂ ವ್ಯಕ್ತಿತ್ವ" (5 x 7, ಪುಟ: 5 + 126), ಪ್ರ: ಧಾರವಾಡ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, 1980.

9. ಲಂಗೋಟಿ ಸಿದ್ಧಣ್ಣ - "ನಿರಂಜನ ಶರಣ ಕರ್ನಾಟಕ ಗಾಂಧಿ ಹರ್ಡೇಕರ

ಮಂಜಪ್ಪನವರು" ಪುಟ. 48. ಪ್ರ: ಇಲಕಲ್, ಧರ್ಮಪ್ರಸಾರ ಮಂಡಲ. 1986.

10. ಗುಬ್ಬಣ್ಣನವರ ಶಿವಾನಂದ - "ರಾಷ್ಟ್ರಧರ್ಮನಿಷ್ಠ ಹರ್ಡೇಕರ ಮಂಜಪ್ಪ" (5 x 7, ಪುಟ: 7 + 128).

11. ಕಲಬುರ್ಗಿ ಎಂ.ಎಂ. (ಡಾ) (ಸಂ) - "ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ" (5 $\frac{1}{2}$ x 8 $\frac{1}{2}$; ಪುಟ. 10 + 442), ಪ್ರ: ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, 1989.

**ಇಂಗ್ಲಿಷ್:**

12. Gubbannavar (Dr.) "Political ideas of Hardekar Manjappa" (6 $\frac{1}{2}$ x 9 $\frac{1}{2}$); Dharwad, Karnatak University, 1977.

**ಲೇಖನಗಳು**

1. 'ಕೈ|| ಹರ್ಡೇಕರ ಮಂಜಪ್ಪನವರು' - ಸಂಪಾದಕೀಯ, 'ಕನ್ನಡ ನುಡಿ', 9 - 13, ಪುಟ - 50.

2. 'ಹರ್ಡೇಕರ ಮಂಜಪ್ಪನವರು' - 'ಕನ್ನಡ ನುಡಿ,' 8 - 9, ಪುಟ - 38.

3. 'ಸಾಹಿತ್ಯವೇ ಜೀವಾಳವಾದ ಶರಣ ಸಂದೇಶದ ಮಂಜಪ್ಪನವರು' - ಚಂದ್ರಶೇಖರ ದೇವರು: 'ಕನ್ನಡ ನುಡಿ' ಸಂಪುಟ -1, ಸಂಚಿಕೆ -29; ಪುಟ - 237 -23 8.

4. 'ವೀರಶೈವ ಧರ್ಮ ಸಾಧಕ ಶ್ರೀ ಹರ್ಡೇಕರ ಮಂಜಪ್ಪನವರು' - ಭಾರದ್ವಾಜ. ಡಿತಕೆ. 'ಕನ್ನಡ ನುಡಿ', ಸಂಪುಟ -2, ಸಂಚಿಕೆ -8, ಪುಟ - 58 -60.

5. 'ಮಂಜಪ್ಪನವರು'-'ಕನ್ನಡ ನುಡಿ', ಸಂಪುಟ -2, ಸಂಚಿಕೆ - 8, ಪುಟ - 59 -60.

6. 'ಕರ್ನಾಟಕ ಗಾಂಧಿ' - ಜ್ಞಾನೋಪಾಸಕ, 'ಶಿವಾನುಭವ', ಸಂಪುಟ - 32, ಸಂಚಿಕೆ - 6, 7, 8. ಪುಟ: 321 - 329.

7. 'ಹರ್ಡೇಕರ ಮಂಜಪ್ಪನವರು' - 'ಕನ್ನಡ ಕಿಡಿಗಳು' ಗೆಳೆಯರ ಗುಂಪು, ಪಿಯಿಧಿ೨4ಕೈದರಾಬಾದ, ಪುಟ -31 - 33.

8. 'ಮಂಜಪ್ಪ ಹರ್ಡೇಕರ,' 'ಸಿರಿಗನ್ನಡ ಗ್ರಂಥ ಚರಿತ್ರೆ ಕೋಶ.'

9. 'ಕರ್ನಾಟಕ ಗಾಂಧಿ' - ಸಿಂಪಿ ಲಿಂಗಣ್ಣ, 'ಕಲ್ಯಾಣ ಕಿರಣ' ಅಕ್ಟೋಬರ್ 1971, ಪುಟ - 35 - 37.

10. 'ಕಾಯಕಯೋಗಿ ಹರ್ಡೇಕರ ಮಂಜಪ್ಪನವರು' - ಹನಗಂಡಿ ( ಶಿವಕುಮಾರಜೀ), 'ಕರ್ಮವೀರ' ಸಂಪುಟ - 8, ಸಂಚಿಕೆ - 3, ಪುಟ - 39 - 40.

11. 'ನಾಡನುಡಿಯ ಸೇವಕ - ಕರ್ಮಯೋಗಿ ಹರ್ಡೇಕರ ಮಂಜಪ್ಪ' - ಹಾಲಪ್ಪ ಜಿ.ಎಸ್. 'ಸುಧಾ' 20 - 2, ಪುಟ - 16 - 17, ಮತ್ತು 60.

12. 'ಸೇವಾಜೀವಿ ಹರ್ಡೇಕರ ಮಂಜಪ್ಪ' - ಗುಬ್ಬಣ್ಣನವರ ಶಿವಾನಂದ. (ಡಾ) - 'ಉತ್ಥಾನ' ಫೆಬ್ರುವರಿ, 1986. ಪುಟ -17 - 25. ಮತ್ತು 30.

13. 'ಹರ್ಡೇಕರ ಮಂಜಪ್ಪನವರು' - ಹಾಲಪ್ಪ ಗ.ಸ. - ಸಂಯುಕ್ತ ಕರ್ನಾಟಕ 1966.

14. Hardekar Manjappa's "Vision of Free India" - Journal of Social Science, Karnatak University, Dharwad, Vol - 9, 1973.

•

ಅನುಬಂಧ -3

# ಮಂಜಪ್ಪನವರ ಜೀವನದ ಪ್ರಮುಖ ಘಟನಾವಳಿಗಳು

1886-ಫೆಬ್ರವರಿ 18 ರಂದು ಬನವಾಸಿಯಲ್ಲಿ ಜನನ.

1903-ಮುಲಕಿ ಪರೀಕ್ಷೆಯಲ್ಲಿ ತೇರ್ಗಡೆ

1905-ಶಿರ್ಶಿಯ ಕನ್ನಡ ಶಾಲೆಯ ಅಧ್ಯಾಪಕ

1906-ಅಧ್ಯಾಪಕ ವೃತ್ತಿಗೆ ರಾಜೀನಾಮೆ ಮತ್ತು ದಾವಣೆಗೆರೆಗೆ ಬಂದು ನೆಲೆಸಿದುದು. 'ಧನುರ್ಧಾರಿ' ಪತ್ರಿಕೆ ಹೊರಡಿಸಿದುದು.

1910-ಬ್ರಹ್ಮಚರ್ಯ ಜೀವನದ ನಿರ್ಧಾರ

1911-ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಆಶ್ರಯದಲ್ಲಿ ಶ್ರಾವಣಮಾಸೋಪನ್ಯಾಸಮಾಲೆಯ ಆರಂಭ

1913-ಬಸವ ಜಯಂತಿಯ ಆರಂಭ

1914-ಪುಣೆಯಲ್ಲಿ ಲೋಕಮಾನ್ಯ ತಿಲಕರ ಸಂದರ್ಶನ, ಮದ್ರಾಸಿನಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಹೋದದ್ದು; ಧನುರ್ಧಾರಿ ನಿಂತಿದ್ದು

1915-ಬೆಂಗಳೂರಿನಲ್ಲಿ ಗಾಂಧೀಜಿಯವರ ಭಾಷಣ ಕೇಳಿದ್ದು

1920-ಖಾದಿಯನ್ನು ಧರಿಸಲು ಆರಂಭ

1921-ರಾಷ್ಟ್ರಜೀವನ ಗ್ರಂಥಮಾಲೆಯನ್ನು ಆರಂಭಿಸಿ 'ಭಾರತಿಯರ ದೇಶಭಕ್ತಿ' ಹಾಗೂ 'ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳು' ಪ್ರಕಟನೆ

1922-ಹುಬ್ಬಳ್ಳಿಯಲ್ಲಿ 'ಸತ್ಯಾಗ್ರಹ ಸಮಾಜ' ಸ್ಥಾಪನೆ

1923-ಹರಿಹರದ ಸಮೀಪ ತುಂಗಭದ್ರಾನದಿಯ ತೀರದ ಮೇಲೆ ಸತ್ಯಾಗ್ರಹಾಶ್ರಮ ಸ್ಥಾಪನೆ ಮತ್ತು ಹಾವೇರಿಯಲ್ಲಿ ನಡೆದ ಧಾರವಾಡ ಜಿಲ್ಲಾ ರಾಷ್ಟ್ರೀಯ ಸಭೆಯಲ್ಲಿ ಅಧ್ಯಕ್ಷೀಯ ಭಾಷಣ.

1923-ವಿಜಾಪುರದಲ್ಲಿ ಶ್ರೀ ರಾಜಾಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಾಂತಿಕ ಸಭೆಯಲ್ಲಿ ಭಾಷಣ

1924-ಮಾರ್ಚ ತಿಂಗಳಲ್ಲಿ ಸಾಬರಮತಿಯಲ್ಲಿ ಗಾಂಧೀಜಿಯವರೊಡನೆ ವಾಸ - ಮತ್ತು ಬೆಳಗಾವಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲುಗೊಂಡದ್ದು, ವೀರಶೈವ ಪರಿಷತ್ತನ್ನು ಏರ್ಪಡಿಸಿದ್ದು, ಮತ್ತು ತುಂಗಭದ್ರಾ ನದಿಯಿಂದ ಆಶ್ರಮಕ್ಕೆ ಗಂಡಾಂತರ.

1925-ಮಾರ್ಚನಲ್ಲಿ ಮಾತೃವಿಯೋಗ, ವಿಜಾಪುರ ಜಿಲ್ಲೆಯ ಹಳ್ಳಿಗಳ ಸಂಚಾರ.

1926-ವಿಜಾಪುರ ಜಿಲ್ಲಯ ಆಲಮಟ್ಟಿಯಲ್ಲಿ ವೀರಶೈವ ವಿದ್ಯಾಲಯ ಸ್ಥಾಪನೆ.

1930-'ಉದ್ಯೋಗ ' ಮಾಸಪತ್ರಿಕೆ ಹಾಗೂ ಮಕ್ಕಳ ಸಾಹಿತ್ಯಮಾಲೆಯ ಆರಂಭ

1931-'ಶರಣ ಸಂದೇಶ' ವಾರಪತ್ರಿಕೆಯ ಆರಂಭ

1934-ಗಾಂಧೀಜಿಯವರೊಡನೆ ಮುಂಬಯಿ ಕರ್ನಾಟಕದ ಸಂಚಾರ

'ಸತ್ಯದ ವಿನಾ ದೇರೆ ಧರ್ಮವಿಲ್ಲ' ಎಂಬ ಅವರ ಸಂದೇಶವನ್ನು ಪಡೆಮ 'ಶರಣ ಸಂದೇಶ' ದಲ್ಲಿ ಪ್ರಕಟಿಸಿಮದು.

1935-ಅಕ್ಕನ ಜಯಂತಿಗೆ ಕರೆಕೊಟ್ಟಿದ್ದು

1936-'ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ' - ಆತ್ಮಚರಿತ್ರೆಯ ಪ್ರಕಟನೆ

1946-61ನೆಯ ಜನ್ಮದಿನೋತ್ಸವ 'ಎಚ್ಚೆತ್ತ ಹಿಂದೂಸ್ಥಾನ' ಪ್ರಕಟನೆ ಹಾಗೂ 'ಪ್ರಗತಿಗ್ರಂಥಮಾಲೆ'ಯ ಯೋಜನೆ

1947-ಜನವರಿ 3ರಂದು ನಿಧನ.

Indian Institute ... Study
117219
10/12/04
SHIMLA

ಹರ್ಡೇಕರ ಮಂಜಪ್ಪನವರು (೧೮೮೬-೧೯೪೭) ಗಾಂಧೀಯುಗದ ಅತ್ಯಂತ ಕಳಕಳಿಯ ಮಹತ್ವಾಕಾಂಕ್ಷಿ ಲೇಖಕರಲ್ಲಿ ಒಬ್ಬರು. ರಾಷ್ಟ್ರೀಯತೆ ಅವರ ಒಟ್ಟು ಬರಹದ ಕೇಂದ್ರ ಪ್ರಜ್ಞೆ. ಅದೇ ಅವರ ಸಾಹಿತ್ಯದ ವೈಶಿಷ್ಟ್ಯ. ರಾಷ್ಟ್ರನಿರ್ಮಾಣ ಕಾರ್ಯಕ್ಕೆ ತಮ್ಮನ್ನು ಒಮ್ಮನಸ್ಸಿನಿಂದ ಸಮರ್ಪಿಸಿಕೊಂಡಿದ್ದ ಮಂಜಪ್ಪನವರು ಬಸವ ಹಾಗೂ ಗಾಂಧೀಯುಗಗಳಿಗೆ ತಾವೇ ಒಂದು ಭದ್ರ ಸೇತುವೆಯಾಗಿ ನಿಂತರು. ಶರಣಧರ್ಮ- ಸತ್ಯಾಗ್ರಹ ಧರ್ಮವನ್ನು ಸಮೀಕರಣಗೊಳಿಸುವುದರೊಂದಿಗೆ ರಾಷ್ಟ್ರನಿರ್ಮಾಣಕ್ಕಾಗಿ ಹೊಸಮಾರ್ಗದ ಅನ್ವೇಷಣೆಗೆ, ಬದುಕಿನ ಶೋಧನೆಗೆ ತೊಡಗಿದರು. ಸಾಹಿತ್ಯವನ್ನು ಒಂದು ಸಮರ್ಥ ಅಸ್ತ್ರವನ್ನಾಗಿ ಎತ್ತಿಕೊಂಡು ಅದರ ಎಲ್ಲ ಸಾಧ್ಯತೆಗಳನ್ನು ಬಳಸಿಕೊಂಡರು. ನವೋದಯ ಪರಂಪರೆಗಿಂತ ಭಿನ್ನವಾದ ಜನಪರವಾದ, ಜನೋಪಯೋಗಿ ವೈಚಾರಿಕ ಸಾಹಿತ್ಯ ನಿರ್ಮಿಸಿದರು. ಸಂಶೋಧನೆ ಮತ್ತು ವಿಮರ್ಶಾಸಾಹಿತ್ಯದಿಂದ ವಿದ್ವಾಂಸರ ಗಮನ ಸೆಳೆದರು. ಹಲವಾರು ಯೋಜನೆಗಳನ್ನು ಹಮ್ಮಿಕೊಂಡರು. ಹಲವಾರು ಸಂಘ-ಸಂಸ್ಥೆಗಳನ್ನು ಹುಟ್ಟು ಹಾಕಿದರು. ಈ ಕಾರಣಗಳಿಂದಾಗಿ, ಕನ್ನಡ ಸಾಹಿತ್ಯದ ಒಂದು ಕಾಲಘಟ್ಟದ ಚರಿತ್ರೆಯಲ್ಲಿ ಮಂಜಪ್ಪನವರ ಸಾಹಿತ್ಯದ್ದೇ ಒಂದು ಪ್ರತ್ಯೇಕ ಅಧ್ಯಾಯ ಕಾಣಿಸಿಕೊಳ್ಳುವಂತಾಯಿತು.

ಎಸ್.ಎಸ್.ಕೋತಿನ (ಜನನ ೧೯೪೦) ಅವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ರೀಡರ್ ಆಗಿ ಸೇವೆ ಸಲ್ಲಿಸುತ್ತಿದ್ದು ಸೃಜನ, ಸಂಶೋಧನೆ, ಸಂಪಾದನೆ, ವಿಮರ್ಶೆ, ಜೀವನ ಚರಿತ್ರೆ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಹಾಗೂ ಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಹರ್ಡೇಕರ ಮಂಜಪ್ಪನವರ ನೈಜ ಬದುಕನ್ನು ನವಿರು ನವಿರಾಗಿ ಸೆರೆಹಿಡಿಯುವುದರೊಂದಿಗೆ ಅವರ ವೈವಿಧ್ಯಮಯವಾದ ಸಾಹಿತ್ಯರಾಶಿಯನ್ನು ಅವುಗಳ ಹಿಂದಿನ ಪರಿಸರ ಪ್ರೇರಣೆ, ಆಶಯ ಧೋರಣೆಗಳ ಹಿನ್ನೆಲೆಯಲ್ಲಿ ಸಮರ್ಥವಾಗಿ ಪರಿಚಯಿಸಿ ಕೊಟ್ಟಿದ್ದಾರೆ. ಆ ಮೂಲಕ ಮಂಜಪ್ಪನವರ ವಾಸ್ತವ ವ್ಯಕ್ತಿತ್ವವನ್ನು ಪ್ರಭಾವಕಾರಿಯಾಗಿ ಆವಿಷ್ಕರಿಸಿಕೊಟ್ಟಿದ್ದಾರೆ.

*Hardekar Manjappa (Kannada) Rs. 15*

Library IIAS, Shimla
K 891.481 409 2 M 314 K
00117219

ISBN-81-7201-440-6